ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

02 ಡಿಸೆಂಬರ್ 2015 ಪುಟ 20 ರೂ. 15/-



ಬಿಜೆಪಿಗಳ ರಾಜಕೀಯ



ಹುಚ್ಚಾ ಮತ್ತು ಮೆಂಟಲ್ ಮೀಡಿಯಾ

ಕೊಡಗು ಗಲಭೆ: ಜಿಲ್ಲಾಡಳಿತದ ಯಡವಟ್ಟು

ಬೆಳ್ತಂಗಡಿ


ದಗಾಕೋರರ ದಂಧೆ ಪುರಾಣ

ಮೈಸೂರು

ಸ್ಯಾಂಡಲ್ ಸೋಪ್

ಗಂಧದ ಗುಡಿಗೆ ಕಳ್ಳರ ಲಗ್ಗೆ

ಸ್ವಚ್ಛ ಭಾರತ, ರೈಲ್ವೇ ಟಾಯ್ಲೆಟ್ಟು ಮತ್ತು ಬುಲೆಟ್ ಟ್ರೈನ್




ಈ ಲೇಖನವನ್ನು ನೀವು ಓದುವ ಹೊತ್ತಿಗೆ, ಪೋಸ್ಟ್ ಪೇಯ್ಡ್ ಮೊಬೈಲ್ ಸಂಪರ್ಕ ಹೊಂದಿರುವವರೆಲ್ಲರಿಗೂ ಒಂದು ಕಿರುಸಂದೇಶ (ಎಸ್ಸೆಮ್ಮೆಸ್) ಬಂದಿರುತ್ತದೆ. ಅದೇನೆಂದರೆ, ನಿಮ್ಮ ತಿಂಗಳ ಬಿಲ್‌ಗೆ ಇನ್ನು ಮುಂದೆ ಶೇ.0.5ರಷ್ಟು ತೆರಿಗೆ ಹೆಚ್ಚಾಗುತ್ತದೆ. ಇದು ಪ್ರೀಪೇಯ್ಡ್‌ನವರಿಗೂ ಅನ್ವಯವಾಗುತ್ತದೆ. ನೀವು ನಿಮ್ಮ ಬೈಕ್ ಅಥವಾ ಕಾರಿಗೆ ಹಾಕಿಸುವ ಪೆಟ್ರೋಲ್, ಡೀಸೆಲ್ ಮೇಲೂ ಈ ತೆರಿಗೆ ಬಿದ್ದಿದೆ. ಬಹುಶಃ ದೇಶದ ಎಲ್ಲಾ ಸಾಮಾನ್ಯ ಜನರಿಗೂ ಅನ್ವಯಿಸುವ ಹಾಗೆ ಈ ರೀತಿಯ ತೆರಿಗೆ ಇನ್ನೂ ಹಲವು ರೀತಿಯಲ್ಲಿ ಹೆಚ್ಚಳವಾಗಿದೆ. ಇವೆಲ್ಲವೂ ಕೇಂದ್ರ ತೆರಿಗೆ. ಇದು ಮೋದಿ-ಜೈಟ್ಲಿ ಜೋಡಿಯ ಈ ತೆರಿಗೆ 'ಸ್ವಚ್ಛ ಭಾರತ್' ತೆರಿಗೆಯಂತೆ. ಕಳೆದ ಒಂದೂವರೆ ವರ್ಷದಲ್ಲಿ ದೇಶಾದ್ಯಂತ ಸ್ವಚ್ಛ ಭಾರತದ ಪ್ರಚಾರ ಹೆಚ್ಚಾಯಿತು. ಆದರೆ, ಸ್ವಚ್ಛತೆ ಮಾತ್ರ ಕಡಿಮೆಯಾಯಿತು. ಈಗ ತೆರಿಗೆ ಹೆಚ್ಚಾಗುತ್ತಿದೆ, ಅದರರ್ಥವೇನು? ಸ್ವಚ್ಛತೆ ಹೆಚ್ಚಾಗಲಿದೆಯೇ? ಇಲ್ಲ, ಕಡಿಮೆಯಾಗಲಿದೆ.

ಇದನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟವೇನಲ್ಲ. ಕಸವೇ ಇಲ್ಲದೆಡೆ ಕಸ ಹಾಕಿಸಿ, ಅದನ್ನು ಗುಡಿಸುವ ರೀತಿಯಲ್ಲಿ ಮೋದಿ, ಸ್ಮೃತಿ ಇರಾನಿ ಇವರೆಲ್ಲರೂ ಪೋಸು ಕೊಟ್ಟು ಫೋಟೋ ತೆಗೆಸಿಕೊಂಡಿದ್ದು ನೋಡಿದಾಗಲೇ ಹಲವರು ಮೂಗು ಮುರಿದಿದ್ದರು. 'ಇವರ ಪ್ರಯತ್ನ ಪ್ರಾಮಾಣಿಕವಾದ್ದಲ್ಲ' 'ಇದು ಕೇವಲ ಪ್ರಚಾರಕ್ಕಾಗಿ ಮಾಡುತ್ತಿರುವ ಕಾರ್ಯಕ್ರಮ' ಇತ್ಯಾದಿ ಮಾತುಗಳು ಸಾಕಷ್ಟು ಬಂದವು. ಆದರೂ, ಪ್ರಚಾರದ ದೃಷ್ಟಿಯಿಂದಲಾದರೂ ದೇಶ ಸ್ವಲ್ಪ ಸ್ವಚ್ಛವಾಗುವುದಾದರೆ ಯಾಕೆ ಆಗಬಾರದು, ಆಗಲಿ ಎಂದುಕೊಂಡವರೂ ಇದ್ದರು. ಇತ್ತೀಚೆಗೆ ಸಿಕ್ಕ ಸ್ನೇಹಿತರೊಬ್ಬರ ಹತ್ತಿರ 'ಮೋದಿಯ ಸಾಧನೆ'ಗಳ ಕುರಿತು ಮಾತನಾಡುತ್ತಿರುವಾಗ ಅವರು 'ಅದೇನೇ ಇದ್ದರೂ ಸ್ವಚ್ಛ ಭಾರತದ ಕಾರಣಕ್ಕೆ ಜನರಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಹೆಚ್ಚಾಯ್ತಲ್ಲಾ, ಅದೇ ದೊಡ್ಡ ಸಾಧನೆ' ಎಂದರು. 'ನಿಮ್ಮಲ್ಲಿ ಸ್ವಚ್ಛತೆಯ ಕುರಿತು ಏನಾದರೂ ಜಾಗೃತಿ ಉಂಟಾಯಿತಾ?' ಎಂದು ಕೇಳಿದರೆ, 'ನನ್ನಲ್ಲಿ ಯಾವುದೇ ಬದಲಾವಣೆ ಉಂಟಾಗಲಿಲ್ಲ', 'ಹಾಗಾದರೆ ಜನರಲ್ಲಿ ಅಂಥದ್ದು ಆಗಿದೆ ಎಂಬ ಅಭಿಪ್ರಾಯಕ್ಕೆ ಹೇಗೆ ಬಂದಿರಿ?', 'ಬಂದಿರಬಹುದು ಅನ್ನಿಸುತ್ತೆ' ಎಂದರು. ಅವರು ಮೋದಿಯನ್ನು ಆರಾಧಿಸುವ ಈ ದೇಶದ ಯುವಜನತೆಯ ಒಂದು ವಿಭಾಗದ ಸದಸ್ಯರಾಗಿ 2 ವರ್ಷಕ್ಕೂ ಹೆಚ್ಚು ಕಾಲವಾಗಿದೆ.

ವಾಸ್ತವವೇನೆಂದರೆ, ದೇಶದಲ್ಲಿ ಸ್ವಚ್ಛತೆಗೆ ಮೀಸಲಾಗಿದ್ದ ಹಣವನ್ನು ಮೋದಿ-ಜೈಟ್ಲಿಯ ಬಜೆಟ್ ಕಡಿಮೆ ಮಾಡಿತ್ತು. ಸ್ವಚ್ಛ ಭಾರತ ಕಾರ್ಯಕ್ರಮವೇ, ಈ ಹಿಂದಿನ ಸರ್ಕಾರದ ನಿರ್ಮಲ ಭಾರತ ಯೋಜನೆಯನ್ನು ಬೇರೊಂದು ಮುಖವಾಡದಲ್ಲಿ ತಂದದ್ದಾಗಿತ್ತು, ಹಿಂದಿನ ವರ್ಷ ನಿರ್ಮಲ ಭಾರತ ಮತ್ತು ಗ್ರಾಮೀಣ ಕುಡಿಯುವ ನೀರು ಯೋಜನೆಗೆ ಮೀಸಲಿಟ್ಟಿದ್ದ ಹಣ 17,336 ಕೋಟಿ ರೂ.ಗಳಾಗಿತ್ತು. ಸ್ವಚ್ಛ ಭಾರತ ಯೋಜನೆಯನ್ನು ಘೋಷಿಸಿದ 5 ತಿಂಗಳ ನಂತರ ಮಂಡಿಸಿದ ಬಜೆಟ್‌ನಲ್ಲಿ ಇದೇ ಕ್ಷೇತ್ರಕ್ಕೆ ಮೋದಿ ಸರ್ಕಾರ ಮೀಸಲಿಟ್ಟಿದ್ದು ಕೇವಲ 5,236 ಕೋಟಿ ರೂ.ಗಳು ಮಾತ್ರ. ಆದರೂ, ಸ್ವಚ್ಛ ಭಾರತ ಯೋಜನೆಗೆ ಸುಮಾರು 3,000 ಕೋಟಿ ರೂ.ಗಳಷ್ಟು ಹೆಚ್ಚು ಹಣ ಮೀಸಲಿಡಲಾಗಿದೆ ಎಂದು ಘೋಷಿಸಲಾಯಿತು. ಅದು ಹೇಗೆಂದರೆ, ಒಟ್ಟಾರೆ ಗ್ರಾಮೀಣ ಕುಡಿಯುವ ನೀರಿಗೆ ನೀಡಲಾದ ಹಣವನ್ನು ಬಹುತೇಕ ಕಡಿಮೆ ಮಾಡಿ, ಇದಕ್ಕೇ ನೀಡಿ ಎಂದು ಸೂಚಿಸಲಾಗಿತ್ತು!

ಅದೇನೇ ಇರಲಿ, ಇದೀಗ ಕೇಂದ್ರ ಸರ್ಕಾರ ಘೋಷಿಸಿರುವ ಸೆಸ್‌ನಿಂದ ಎಷ್ಟು ಪ್ರಯೋಜನವಾಗಬಹುದು? ಉಳಿದಿರುವ ಹಣಕಾಸು ವರ್ಷದಲ್ಲಿ ಸುಮಾರು 3,800 ಕೋಟಿ ರೂ.ಗಳ ಸಂಗ್ರಹವಾಗುವ ನಿರೀಕ್ಷೆಯಿದೆ. ಮುಂದಿನ ಹಣಕಾಸು ವರ್ಷದಲ್ಲಿ ಒಟ್ಟಾರೆ 10,000 ಕೋಟಿ ರೂ.ಗಳು ಸಂಗ್ರಹವಾಗುತ್ತದೆ. ಅದೇನೇ ಆದರೂ, ಗ್ರಾಮೀಣ ಕುಡಿಯುವ ನೀರು ಮತ್ತು ಶೌಚಾಲಯ ಯೋಜನೆಗೆ ಇದೇ ಸರ್ಕಾರ ಕಡಿತಗೊಳಿಸಿರುವ ಹಣದಷ್ಟನ್ನಂತೂ ನೀಡುವುದಿಲ್ಲ, ಇದಕ್ಕೆ ಕೇಂದ್ರ ಸರ್ಕಾರದ ಸ್ಪಷ್ಟೀಕರಣ ಏನೆಂದರೆ, ಕೇಂದ್ರ ಸರ್ಕಾರದ ತೆರಿಗೆಯಲ್ಲಿ ಹಿಂದಿನ ವರ್ಷದವರೆಗೆ ಶೇ.32ರಷ್ಟು ಪಾಲನ್ನು ಪಡೆಯುತ್ತಿದ್ದ ರಾಜ್ಯ ಸರ್ಕಾರಗಳು (14ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ) ಈಗ ಶೇ.42ರಷ್ಟನ್ನು ಪಡೆಯಲಿವೆ. ಹೀಗಾಗಿ ಆ ಹಣದಿಂದ ಹೆಚ್ಚಿನ ಪಾಲನ್ನು ರಾಜ್ಯ ಸರ್ಕಾರಗಳು ಸ್ವಚ್ಛ ಭಾರತಕ್ಕೆ ನೀಡಬಹುದು ಎಂದು. ಯಾವ ರೀತಿಯಲ್ಲೂ ಯುಪಿಎ ಸರ್ಕಾರಕ್ಕಿಂತ ಹೆಚ್ಚಿನ ಹಣವಾಗಲೀ, ವಿಶೇಷ ಯೋಜನೆಯಾಗಲೀ ಇಲ್ಲದೇ ಹಳೆಯ ಯೋಜನೆಯ ರೀಪ್ಯಾಕೇಜಿಂಗ್ ಮಾಡಿದ್ದಷ್ಟೇ ಮೋದಿ ಸರ್ಕಾರದ ಸಾಧನೆ. ಅದನ್ನು ಪ್ರಚಾರ ಮಾಡಲು ಬಳಸಿದ್ದು 94 ಕೋಟಿ ರೂ. ಅದನ್ನೂ ಸಹ ಈ ಯೋಜನೆಗೆ ಮೀಸಲಿಟ್ಟ ಹಣದಿಂದಲೇ ಬಳಸಿಕೊಳ್ಳಲಾಯಿತು!!

ಅಂದರೆ, ಮೋದಿ ಅಂದರೆ ಕ್ಲೀನ್ ಮನುಷ್ಯ ಎನ್ನುವ ಇಮೇಜ್ ಕಟ್ಟಲು ಬೇಕಾದಷ್ಟು ಕೆಲಸ ನಡೆಯುತ್ತಿದೆ. ಕೆಲಸ ಮಾತ್ರ ಹೆಚ್ಚೇನೂ ನಡೆಯುತ್ತಿಲ್ಲ, ಇಷ್ಟೇ ವಾಸ್ತವ ಎಂಬುದು ಒಂದು ಅಭಿಪ್ರಾಯ. ಇಲ್ಲ, ಅಷ್ಟೇ ವಾಸ್ತವವಲ್ಲ, ಇವರು ಇನ್ನೂ ಒಂದು ಹೆಜ್ಜೆ ಮುಂದಿದ್ದಾರೆ. ಅದೇನೆಂದರೆ, ಕಾರ್ಪೋರೇಟ್‌ಗಳಿಗೆ ಹಾಕಬೇಕಾದ ತೆರಿಗೆಯನ್ನು ಜನಸಾಮಾನ್ಯರ ಮೇಲೆ ಹಾಕುತ್ತಿದ್ದಾರೆ. ಉದಾಹರಣೆಗೆ ಈಗ ಹಾಕಿರುವ ಸೆಸ್‌ಅನ್ನು ಅಂದರೆ, ಫೋನ್, ಪ್ರಯಾಣ ಇತ್ಯಾದಿ ವಿವಿಧ ಸೇವೆಗಳನ್ನು ಬಳಸುವ ಈ ದೇಶದ ಎಲ್ಲಾ ಜನಸಾಮಾನ್ಯರು ತೆರಬೇಕು. ಅದಕ್ಕೆ ಒಂದು ಸ್ಪಷ್ಟೀಕರಣವನ್ನೂ ಸರ್ಕಾರ ನೀಡಿಬಿಟ್ಟಿದೆ.



ಸ್ವಚ್ಛ ಭಾರತ ಸೆಸ್‌ಅನ್ನು ನೋಟಿಫೈ ಮಾಡಿದ ಅದೇ ಆದೇಶದಲ್ಲಿ 'ಈ ತೆರಿಗೆಯು ಕೇವಲ ಮತ್ತೊಂದು ತೆರಿಗೆಯಷ್ಟೇ ಅಲ್ಲ; ಬದಲಿಗೆ ದೇಶದ ಪ್ರತಿಯೊಬ್ಬ ನಾಗರಿಕರನ್ನು ಸ್ವಚ್ಛ ಭಾರತ ಯೋಜನೆಯಲ್ಲಿ ಪಾಲುದಾರರನ್ನಾಗಿ ಮಾಡುವುದು' ಎಂದು ಹೇಳಲಾಗಿದೆ. ಆಹಾ, ಎಂತಹ ಸುಂದರ ಮಾತುಗಳು? ಆದರೆ, ಇದೇ ಸರ್ಕಾರ ಕೆಲವೇ ತಿಂಗಳ ಹಿಂದೆ ಏನು ಹೇಳಿತ್ತು ಗೊತ್ತೇ? 'ನಾವು ಸ್ವಚ್ಛ ಭಾರತಕ್ಕಾಗಿ 2% ತೆರಿಗೆ ಹಾಕಬೇಕಾಗಿ ಬರಬಹುದು. ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ಹಾಗೂ ಇನ್ನಿತ್ಯಾದಿ ತೆರಿಗೆಗಳ ಮುಖಾಂತರ ಹೇಗೋ ತುಂಬಿಕೊಳ್ಳುತ್ತೇವೆ'. ಅಂದರೆ ದೇಶದ ಬಹುಸಂಖ್ಯಾತರನ್ನು ಬಡವರನ್ನಾಗಿಟ್ಟಿರುವ, ನಮ್ಮ ಫೋನ್ ಸೇರಿದಂತೆ ಎಲ್ಲಾ ಸೇವೆಗಳಲ್ಲೂ ಲಾಭ ಮಾಡಿಕೊಳ್ಳುತ್ತಿರುವ ಕಾರ್ಪೋರೇಟ್‌ಗಳಿಂದ ಹಣ ಕಿತ್ತುಕೊಳ್ಳುತ್ತಾರೆಂದು ಭಾವಿಸಬೇಕು. ಆದರೆ, ತೆರಿಗೆ ಜಡಿದದ್ದು ಮಾತ್ರ ಜನಸಾಮಾನ್ಯರಿಗೆ. ಜನಸಾಮಾನ್ಯರ ತಿಂಗಳ ವೆಚ್ಚ ಹೆಚ್ಚಾಗಲು ಇಂತಹ ಹಲವು ತೆರಿಗೆಗಳನ್ನು ಈಗಾಗಲೇ ಹಾಕಲಾಗಿದೆ. ಒಟ್ಟು ಕೇಂದ್ರ ತೆರಿಗೆಯ ಶೇ.10ರಷ್ಟು ಈಗಾಗಲೇ ಸೆಸ್ ಮತ್ತು ಸರ್ಚಾರ್ಜ್‌ಗಳಿಂದಲೇ ಬರುತ್ತಿದೆ. ಆದರೆ ಎಲ್ಲವನ್ನೂ ಒಂದೇ ಸಾರಿ ಹಾಕಿ ನಿಮ್ಮನ್ನು ಗಾಬರಿಗೊಳಿಸುವುದಿಲ್ಲ, ನಿಧಾನಕ್ಕೆ ವಿಷ ನೀಡಿ, ನೀವು ಅದಕ್ಕೆ ಹೊಂದಿಕೊಳ್ಳುವಂತೆ ಮಾಡುವ ಕಲೆಗಾರಿಕೆ ಈ ದೇಶದ ಆಳುವವರಿಗೆ ಸಿದ್ಧಿಸಿದೆ. ಮೋದಿ ಸರ್ಕಾರವು ಇನ್ನೂ ಒಂದು ಕಲೆಯಲ್ಲಿ ಪರಿಣಿತಿ ಸಾಧಿಸಿದೆ. ಅದೇನೆಂದರೆ, ಒಂದು ಅದ್ಭುತ ಪ್ಯಾಕೇಜಿಂಗ್ ಮುಖಾಂತರ ಒಂದು ಯೋಜನೆಯನ್ನು ಘೋಷಿಸುವುದು. ವಾಸ್ತವದಲ್ಲಿ ಅದು ಹಿಂದಿನ ಸರ್ಕಾರದ ಯೋಜನೆಯ ರೀಪ್ಯಾಕೇಜಿಂಗ್ ಆಗಿರುತ್ತದೆ. ಅದಕ್ಕೆ ಹಿಂದಿನ ಸರ್ಕಾರ ನೀಡಿದ್ದಕ್ಕಿಂತ ಕಡಿಮೆ ಹಣ ನೀಡುವುದು. ಆ ನಂತರ ಅಂತಹ ಅದ್ಭುತ ಯೋಜನೆಗೆ ಜನರಿಂದಲೇ ಹಣ ಕೀಳುವುದು.

'ಹಾಗೇನೂ ಇಲ್ಲ, ನಾವು ಹಿಂದಿನ ಸರ್ಕಾರಕ್ಕಿಂತ ಚೆನ್ನಾಗಿ ಕೆಲಸ ಮಾಡುತ್ತಿದ್ದೇವೆ' ಎಂದು ನಂಬಿಸಲೂ ಅವರಲ್ಲಿ ವಿಧಾನಗಳಿವೆ. ಉದಾಹರಣೆಗೆ, ಇದೇ ಸ್ವಚ್ಛ ಭಾರತದ ಅತೀಮುಖ್ಯ ಭಾಗವಾದ ಗ್ರಾಮೀಣ ಶೌಚಾಲಯಗಳದ್ದೇ ನೋಡಿ. ಮೋದಿ ಸರ್ಕಾರ ಹೇಳಿದ್ದೇನೆಂದರೆ, 2013-14ಕ್ಕೆ ಹೋಲಿಸಿದರೆ (4.97 ದಶಲಕ್ಷ ಟಾಯ್ಲೆಟ್ಟುಗಳು), 2014-15ರಲ್ಲಿ ಹೆಚ್ಚಿನ [illegible] ದಶಲಕ್ಷ ಟಾಯ್ಲೆಟ್ಟುಗಳು) ಸಾಧನೆ ನಾವು ಮಾ[illegible] ಎಂದು. ಅದು ನಿಜ. ಈ ಸರ್ಕಾರವು ಹಿಂದಿನ ವ[illegible] 17.7% ಹೆಚ್ಚಿನ ಶೌಚಾಲಯಗಳನ್ನು ಕಟ್ಟಿತ್ತು[illegible] ಅವರು ಮರೆಮಾಚಿದ್ದ ಸತ್ಯವೇನೆಂದರೆ, 2008[illegible] 11.3 ದಶಲಕ್ಷ (ಮೋದಿ ಸರ್ಕಾರಕ್ಕಿಂತ 92% [illegible] 2009-10ರಲ್ಲಿ 12.4 ದಶಲಕ್ಷ (111% [illegible] 2010-11ರಲ್ಲಿ 12.2 ದಶಲಕ್ಷ (109% ಹೆಚ್ಚು[illegible] 2011-12ರಲ್ಲಿ 8.8 ದಶಲಕ್ಷ (50% [illegible] ಶೌಚಾಲಯಗಳನ್ನು ನಿರ್ಮಿಸಲಾಗಿತ್ತು!!! ಮೋದಿ[illegible] ಸುಳ್ಳು, ಸುಳ್ಳೆಂದರೆ ಮೋದಿ ಎನ್ನಬೇಕಾದ್ದು [illegible] ರೈಲನ್ನು ಮೋದಿ ಬುಲೆಟ್ ವೇಗದಲ್ಲಿ ಬಿಡುತ್ತಾ[illegible]

ಮೋದಿ ಪ್ರಧಾನಿಯಾದ ನಂತರ ಬಿಟ್ಟ ರೈ[illegible] ಬುಲೆಟ್ ಟ್ರೈನ್ ಸಹ ಒಂದು. ಭಾರತವನ್ನು [illegible] ಮತ್ತು ಚೀನಾದಂತೆ ಮಾಡುವ ಕನಸನ್ನು [illegible] ಬುಟ್ಟಿಯಲ್ಲಿಟ್ಟು ಮಾರಿದ್ದೇ ಮಾರಿದ್ದು. ಆದರೆ[illegible] ರೈಲ್ವೇ ವ್ಯವಸ್ಥೆಯು ಇದುವರೆಗೆ ಇದ್ದುದಕ್ಕಿಂತ [illegible] ರೀತಿಯಲ್ಲಿಯೂ ಉತ್ತಮವಾಗಲಿಲ್ಲ. ರೈ[illegible] ಟಾಯ್ಲೆಟ್ಟುಗಳು ಹಿಂದಿಗಿಂತಲೂ ಗಬ್ಬು ನಾರತ[illegible] ಈ ಗಬ್ಬು ನಾತ ಹಿಂದಿನ ಸರ್ಕಾರದಲ್ಲೇ ಆರಂಭವಾ[illegible] ರೈಲ್ವೇ ಸಚಿವರಾಗಿದ್ದ ಲಾಲೂ ಪ್ರಸಾದ್ ಯಾದವ್ [illegible] ರೈಲ್ವೇ ಹಳಿಗಳ ಮೇಲೆಯೇ ಹೆಚ್ಚೆಚ್ಚು ರೈಲ[illegible] ಓಡಿಸಲು ಶುರು ಮಾಡಿದ್ದರು. ದೂರದ ನಗ[illegible] ಬೆಳಗ್ಗೆ ಬಂದು ಇನ್ನೊಂದು ನಗರವನ್ನು ಸೇರಿಕೆ[illegible] ರೈಲು ಅಲ್ಲಿಯೇ ರಾತ್ರಿಯವರೆಗೆ ನಿಲ್ಲುತ್ತಿತ್ತು[illegible] ಹೊರಡುವ ಮುನ್ನ ಅದನ್ನು ಸ್ವಚ್ಛಗೊಳಿಸುವ[illegible] ಆಗುತ್ತಿತ್ತು, ಇದನ್ನು ಬದಲಿಸಿ, ರಾತ್ರಿ ಮತ್ತೆ ಹೊ[illegible] ಮುನ್ನ ಇನ್ನೊಂದಷ್ಟು ದೂರ ಹೋಗಿ ಬರುವ ವಿ[illegible] ಆಯಿತು. ಕಳೆದ 7-8 ವರ್ಷಗಳಿಂದ ಬೆಂಗಳೂರು[illegible] ಮೈಸೂರಿನ ನಡುವೆ ರೈಲು ಸಂಚಾರ ಹೆಚ್ಚಾಗಲು[illegible] ಕಾರಣ. ಇವೆರಡೂ ನಗರಗಳ ಮಧ್ಯೆ ಮಾತ್ರ ಓ[illegible] ಒಂದೇ ಒಂದು ರೈಲೂ ಹೆಚ್ಚಾಗಲಿಲ್ಲ. [illegible] ಬೆಂಗಳೂರಿನಲ್ಲಿ ನಿಲ್ಲುವ ಬದಲು ಮೈಸೂರು [illegible] ಚಾಮರಾಜನಗರದವರೆಗೆ ಹೋಗಿಬರುವ ರೈ[illegible] ಇದರಿಂದ ಸ್ವಚ್ಛತೆಯು ಕಡಿಮೆಯಾಯಿತು.

ಆದರೆ, ಬುಲೆಟ್ ಟ್ರೈನ್ ಮೋದಿ ಅ[illegible] ಸ್ವಚ್ಛ ಭಾರತ್ ಮೋದಿಯವರು ಇದನ್ನೇನಾದರು[illegible] ಮಾಡಿದರಾ? ಈ ಹಿಂದೆ ರೈಲ್ವೇ ನಿಲ್ದಾಣದಲ್ಲಿ ರ[illegible] ಕೂರುವುದು ಕಷ್ಟವಾಗುತ್ತಿತ್ತು. ರೈಲು ಹೊರಟರೆ [illegible] ಇರುತ್ತಿರಲಿಲ್ಲ. ಶೌಚಾಲಯಕ್ಕೆ ಹೋದಾಗ [illegible] ಉಸಿರುಗಟ್ಟಿ ಕೆಲಸ ಮುಗಿಸಿಕೊಳ್ಳಬೇಕಿತ್ತು. ಆದರೆ, [illegible] ರೈಲು ವೇಗವಾಗಿ ಹೋಗುವಾಗಲೂ ಶೌಚಾ[illegible] ವಾಸನೆಯು ಅಕ್ಕಪಕ್ಕದ 2-3 ಸಾಲುಗಳಿಗೆ [illegible] ಬಡಿಯುತ್ತದೆ. ಇದೇ ಸ್ವಚ್ಛ ಭಾರತ.

ಸ್ವಚ್ಛ ಭಾರತ ಯೋಜನೆಗೆ ಬಳಸಿಕೊಳ್ಳಲಾ[illegible] ಅದೇ ಸಂದರ್ಭದಲ್ಲಿ ಅನಂತ್‌ಕುಮಾರ್ ಕಸದಿಂದ [illegible] ತಯಾರಿಸಿ ಮಾರುವ ಬಗ್ಗೆಯೂ ಮಾತನಾಡಿದ್ದಾ[illegible]

ಬುಲೆಟ್ ರೈಲು ಯಾರಿಗೆ? ನಾರುವ ಟಾ[illegible] ಯಾರಿಗೆ ಗೊತ್ತಾಯ್ತಲ್ಲ?

ಇಂಗ್ಲೆಂಡ್‌ನಲ್ಲಿ ಎನ್ನಾರೈಗಳೆದುರು ಮೋದಿ ಭಾಷಣ

ವಿಡಂಬನೆ

"ಮೇರೇ ಭಾಯಿಯೋ, ಔರ್ ಬೆಹೆನೋ,

ಇಂದು ನನಗೆ ಅತ್ಯಂತ ಖುಷಿಯ ದಿನ (ಚಪ್ಪಾಳೆ, ಕೇಕೆ). ಮಿನಿ ಭಾರತವೇ ಇಂದು ನನ್ನ ಕಣ್ಮುಂದಿದೆ (ಚಪ್ಪಾಳೆ, ಕೇಕೆ). ಭಾರತಕ್ಕೆ ಈ ಮೊದಲು ಘನತೆ, ಗೌರವಗಳೇ ಇರಲಿಲ್ಲ, ನೀವು ಅವೆರಡನ್ನೂ ತಂದುಕೊಟ್ಟಿರಿ (ಚಪ್ಪಾಳೆ, ಕೇಕೆ). ಹೇಗೆಂದು ಕೇಳಿರಿ. ಕೇಳ್ತೀರಾ? (ಎಸ್). ಕೇಳ್ತೀರಾ? (ಎಸ್). ಕೇಳ್ತೀರಾ (ಎಸ್). ಹೇಗೆಂದರೆ, ನೀವೆಲ್ಲ ಸೋಷಲ್ ಮೀಡಿಯಾದಲ್ಲಿ ನನಗಾಗಿ ಪ್ರಚಾರ ಮಾಡಿ, ದುಡಿದು, ನನ್ನ ಬಗ್ಗೆ ಹಾಡಿ ಹೊಗಳಿ ನನ್ನನ್ನು ಗೆಲ್ಲಿಸಿದಿರಿ (ಚಪ್ಪಾಳೆ, ಕೇಕೆ). ಪರಿಣಾಮ, ಕಳೆದ ವರ್ಷ ಭಾರತಕ್ಕೆ ದಿಢೀರನೆ ಘನತೆ, ಗೌರವಗಳು ಬಂದುಬಿಟ್ಟವು (ಚಪ್ಪಾಳೆ, ಕೇಕೆ). ಇಂದು ಭಾರತವೆಂದರೆ ಪ್ರಪಂಚದ ಎಲ್ಲ ದೇಶಗಳೂ ಕಣ್‌ಕಣ್ ಬಿಟ್ಟು ನೋಡುವಂತಾಗಿದೆ (ಚಪ್ಪಾಳೆ, ಕೇಕೆ). ಪ್ರತಿಯೊಂದು ದೇಶದ ಪ್ರತಿಯೊಂದು ದಿನಪತ್ರಿಕೆಯ ಪ್ರತಿದಿನದ ಪ್ರತಿ ಪುಟದಲ್ಲೂ ಭಾರತದ್ದೇ ಸುದ್ದಿ (ಚಪ್ಪಾಳೆ, ಕೇಕೆ). ಈ ಪ್ರಧಾನ ಸೇವಕನನ್ನು ಗೆಲ್ಲಿಸಿದ್ದಕ್ಕಾಗಿ ನಿಮಗೆ ನಾನು ಆಭಾರಿ (ಚಪ್ಪಾಳೆ, ಕೇಕೆ).

ಮೇರೇ ಪ್ಯಾರೇ ಭಾಯಿಯೋ, ಔರ್ ಬೆಹೆನೋ,

ಭಾರತದ ಘನತೆ, ಗೌರವಗಳಿಗೆ ನಿಮ್ಮ ನೇರ ಕೊಡುಗೆಯೂ ಇದೆ (ಭಾರೀ ಚಪ್ಪಾಳೆ, ಭಾರೀ ಕೇಕೆ). ತಲಾ ಲಕ್ಷಾಂತರ ರೂಪಾಯಿಗಳ ತೆರಿಗೆ ಹಣವನ್ನು ನಿಮ್ಮ ವಿದ್ಯಾಭ್ಯಾಸಕ್ಕಾಗಿ ಭಾರತ ಸರ್ಕಾರದಿಂದ ಖರ್ಚು ಮಾಡಿಸಿ ಓದಿದ ನೀವೆಲ್ಲ ನೌಕರಿ ಮಾಡಲು ಇಂಗ್ಲೆಂಡ್, ಅಮೆರಿಕ ಮೊದಲಾದ ದೇಶಗಳಿಗೆ ಬಂದು ಇಲ್ಲಿ ನಿಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಮೂಲಕ, ಇಲ್ಲಿನ ಪ್ರಜೆಗಳ ಸೇವೆ ಮಾಡುವ ಮೂಲಕ ಭಾರತಕ್ಕೆ ವಿಶೇಷ ಘನತೆ, ಗೌರವಗಳನ್ನು ತಂದುಕೊಟ್ಟಿದ್ದೀರಿ (ಚಪ್ಪಾಳೆ! ಕೇಕೆ!). ಭಾರತದಲ್ಲಿ ಸೂಕ್ತ ವೈದ್ಯಕೀಯ ನೆರವಿಲ್ಲದೆ ಕೋಟ್ಯಂತರ ಮಂದಿ ನರಳಿದರೇನಾಯಿತು, ಸತ್ತರೇನಾಯಿತು, ನೀವು ಇಲ್ಲಿ ವೈದ್ಯರಾಗಿ ಇಲ್ಲಿನವರ ಆರೋಗ್ಯ ಕಾಪಾಡುತ್ತಿದ್ದೀರಿ, ಪ್ರಾಣ ಉಳಿಸುತ್ತಿದ್ದೀರಿ (ಚಪ್ಪಾಳೆ! ಕೇಕೆ!). ಭಾರತದಲ್ಲಿ ಉತ್ತಮ ಇಂಜಿನಿಯರ್‌ಗಳ ಕೊರತೆಯಿಂದಾಗಿ ಎಷ್ಟೋ ಯೋಜನೆಗಳು ಭಗ್ನಕೊಂಡರೇನಾಯಿತು, ನೀವಿಲ್ಲಿ ನಿಮ್ಮ ಇಂಜಿನಿಯರಿಂಗ್ ಕೌಶಲದಿಂದಾಗಿ ಈ ದೇ[illegible] ನಳನಳಿಸುವಂತೆ ಮಾಡಿದ್ದೀರಿ (ಚಪ್ಪಾಳೆ! ಕೇಕೆ!). ಭಾ[illegible] ಮೈಕ್ರೊಸಾಫ್ಟ್, ಗೂಗಲ್‌ಗಳು ಹುಟ್ಟದಿದ್ದರೇನಾ[illegible] ನೀವು ವಿದೇಶಿ ನೆಲದಲ್ಲಿ ಇವುಗಳ ಮುಖ[illegible] ಭಾರತೀಯ ಟೆಕ್ಕಿಗಳನ್ನು ನಿಮ್ಮ ಈ ವಿದೇಶಿಗ[illegible] ದುಡಿಸಿಕೊಳ್ಳುತ್ತಿದ್ದೀರಿ (ಚಪ್ಪಾಳೆ! ಕೇಕೆ!).

ನಿಮ್ಮ ಭಾರೀ ಬುದ್ಧಿಶಕ್ತಿಗೆ ಭಾರತದಲ್ಲಿ ದೊರ[illegible] ಕಡಿಮೆ ಸಂಬಳದ ನೌಕರಿಗಳನ್ನು ತಿರಸ್ಕರಿಸಿ ವಿ[illegible] ಭಾರೀ ಸಂಬಳದ ನೌಕರಿಗಳಿಗೆ ಬಂದು ನೆಲೆಸಿರುವ [illegible] ನಿಜಕ್ಕೂ ಪರಮ ದೇಶಭಕ್ತರು (ಚಪ್ಪಾಳೆ, ಕೇಕೆ). ಭಾ[illegible] ಸಿಗುತ್ತಿದ್ದ ಗ್ರೇಡು, ಗೌರವಗಳಿಗಿಂತ ವಿದೇಶದಲ್ಲಿ [illegible] ಗ್ರೇಡು, ಗೌರವಗಳು ಹೆಚ್ಚೆಂದು ಇಲ್ಲಿಗೆ ಓಡಿಬಂ[illegible] ನೀವು ನಿಜಕ್ಕೂ ಅದ್ಭುತ ದೇಶಪ್ರೇಮಿಗಳು ([illegible] ಕೇಕೆ).

ಭಾರತದಲ್ಲಿ ತೊಗರಿಬೇಳೆಯ ಬೆಲೆ ಕೆ[illegible] ಇನ್ನೂರಾದರೇನಂತೆ. ನೀವಿಲ್ಲಿ ಸುಖವಾಗಿರ[illegible] ಭಾರತದಲ್ಲಿ ರೈತರು ಆತ್ಮಹತ್ಯೆಗೆ ಶರಣಾದರೇನಂತೆ, ಈ ವಿದೇಶಿಯರ ಸೇವೆ ಮಾಡಿಕೊಂಡಿರಬೇಕು. ಭಾರತದಲ್ಲಿ ▶▶

ಮೋದಿ ಎಂದರೆ ಸುಳ್ಳು, ಸುಳ್ಳು ಎಂದರೆ ಮೋದಿ




ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

2002ರ ಗುಜರಾತ್ ಹತ್ಯಾಕಾಂಡದ ಬಗ್ಗೆ ಎಲ್ಲಾ ದೇಶಗಳಲ್ಲಿ ತೀವ್ರ ಚರ್ಚೆಗಳೇನಾಗಲಿಲ್ಲ. ಆದರೆ ಅದು ಬ್ರಿಟನ್ನಿನಲ್ಲಿ ಪ್ರಮುಖ ವಿಷಯವಾಗಿತ್ತು. ಅದಕ್ಕೆ ಕಾರಣ ಭಾರತೀಯ ಮೂಲದವರು ಮತ್ತು ಬ್ರಿಟನ್ನಿನ ಪ್ರಜೆಗಳೂ ಆಗಿದ್ದ ಮೂವರು ಮುಸಲ್ಮಾನರು ಆ ಹತ್ಯಾಕಾಂಡದಲ್ಲಿ ಸಾವನ್ನಪ್ಪಿದ್ದು.

ಗುಜರಾತ್‌ನಲ್ಲಿರುವ ತಮ್ಮ ಪೂರ್ವಿಕರ ಹಳ್ಳಿಗೆ ಭೇಟಿ ನೀಡಲು ಲಂಡನ್ ನಿವಾಸಿಯಾದ ಇಮ್ರಾನ್ ದಾವೂದ್ ತನ್ನ ಮಾವಂದಿರಾದ ಸಯೀದ್ ಮತ್ತು ಶಕೀಲ್ ಹಾಗು ಮಿತ್ರ ಮೊಹಮ್ಮದ್ ಅಸ್ವಾತ್ ಎಂಬುವವರೊಂದಿಗೆ 2002ರ ಮಾರ್ಚ್ ತಿಂಗಳಲ್ಲಿ ಬಂದಿದ್ದರು. ಒಂದು ದಿನ ಅವರೆಲ್ಲ ಜೈಪುರದಿಂದ ತಮ್ಮ ಹಳ್ಳಿಗೆ ಹಿಂದಿರುಗುತ್ತಿದ್ದಾಗ, ಹಿಂದೂಗಳ ಗುಂಪೊಂದು ಅವರ ಮೇಲೆ ದಾಳಿ ಮಾಡಿ, ಸಯೀದ್, ಶಕೀಲ್ ಹಾಗು ಅಸ್ವಾತ್ ಅವರುಗಳನ್ನಲ್ಲದೆ ಅವರ ಕಾರ್ ಚಾಲಕ ಭಾರತೀಯ ಯೂಸಫ್ ಎಂಬುವವರನ್ನು ಕೊಂದು ಅವರ ಶವಗಳಿಗೆ ಬೆಂಕಿ ಇಟ್ಟಿತ್ತು. ಇದಾದನಂತರ ಲಂಡನ್ನಿಗೆ ವಾಪಸ್ಸಾದ ಪ್ರತ್ಯಕ್ಷದರ್ಶಿ ಇಮ್ರಾನ್ ದಾವೂದ್ ಗುಜರಾತ್‌ನಲ್ಲಾದ ಘೋರ ಹತ್ಯೆಗಳ ಬಗ್ಗೆ ಮಾಧ್ಯಮಗಳಿಗೆ ಮತ್ತು ಎನ್‌ಜಿಓಗಳಿಗೆ ತಿಳಿಸಿದ್ದರಿಂದ ಅಲ್ಲಿ ಅದು ದೊಡ್ಡ ಚರ್ಚೆಯನ್ನೇ ಹುಟ್ಟುಹಾಕಿತ್ತು. ಯಾವ ಕಾರಣಕ್ಕೂ ಬ್ರಿಟನ್ನಿನ ಸರ್ಕಾರ ಮೋದಿಯೊಂದಿಗಾಗಲಿ, ಗುಜರಾತ್ ಸರ್ಕಾರದೊಂದಿಗಾಗಲಿ ಸಂಪರ್ಕವನ್ನು ಇಟ್ಟುಕೊಳ್ಳಬಾರದೆಂದು ಅಲ್ಲಿನ ಮಾನವ ಹಕ್ಕು ಸಂಘಟನೆಗಳು ಸರ್ಕಾರದ ಮೇಲೆ ಒತ್ತಡ ಹೇರಿದ್ದವು. ಆ ಕಾರಣಕ್ಕೇ ಬ್ರಿಟನ್ ಸರ್ಕಾರ ಕೂಡ ಮೋದಿಯನ್ನು ದೂರ ಇಟ್ಟಿತ್ತು.



ಆದರೆ ಕಳೆದ ವಾರ ಮೋದಿ ಬ್ರಿಟನ್ನಿಗೆ ಭೇಟಿ ನೀಡಿದಾಗ ಅಲ್ಲಿ ಆತನಿಗೆ ಸರ್ಕಾರದಿಂದ ಸ್ವಾಗತ ಮತ್ತು ಭಾರತ ಮೂಲದ ಹಲವಾರು ಜನರಿಂದ ಹಾಗು ಮಾನವ ಹಕ್ಕು ಸಂಘಟನೆಗಳಿಂದ ವಿರೋಧವೂ ವ್ಯಕ್ತವಾಯಿತು.

ಹಿನ್ನೆಲೆಯಲ್ಲಿ ಬ್ರಿಟನ್ನಿನ ಪತ್ರಕರ್ತರೊಬ್ಬರು ಬ್ರಿಟನ್ನಿನ ಪ್ರಧಾನಿ ಜೇಮ್ಸ್ ಕ್ಯಾಮರೂನ್ ಮತ್ತು ಮೋದಿ ಇದ್ದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಕ್ಯಾಮರೂನ್ ಅವರನ್ನು ಉದ್ದೇಶಿಸಿ "ಗುಜರಾತ್‌ನಲ್ಲಾದ ಗಲಭೆಗೆ ಸಂಬಂಧಪಟ್ಟಂತೆ ನಿಮ್ಮ ಸರ್ಕಾರ ಕಳೆದ ಎರಡು ವರ್ಷಗಳಿಂದ ಇಲ್ಲಿಗೆ ಆಗಮಿಸಲು ಮೋದಿಗೆ ಅನುಮತಿಯನ್ನು ನೀಡಿರಲಿಲ್ಲ. ಈಗ ಅದೇ ವ್ಯಕ್ತಿಯನ್ನು ಆಹ್ವಾನಿಸುತ್ತಿರುವ ನಿಮಗೆ ಅದರ ಬಗ್ಗೆ ಮುಜುಗರವಾಗುತ್ತಿಲ್ಲವೇ?" ಎಂದು ಪ್ರಶ್ನಿಸಿದರು. ಆ ಪ್ರಶ್ನೆಗೆ ಕ್ಯಾಮರೂನ್ ಉತ್ತರ ಕೊಡುವ ಮುನ್ನವೇ ಸ್ವತಃ ಮೋದಿಯೇ ಮಧ್ಯೆ ಬಾಯಿ ಹಾಕಿ ಅದು ಹಾಗಲ್ಲ, ಇಲ್ಲಿ ಒಂದು ಅಂಶವನ್ನು ಸ್ಪಷ್ಟಪಡಿಸ[illegible]. ಬ್ರಿಟನ್ ಸರ್ಕಾರ ಎಂದೂ ನನ್ನ ವಿರುದ್ಧ ನಿಷೇಧ [illegible] ಹೇರಿರಲಿಲ್ಲ. ವಾಸ್ತವವಾಗಿ 2003ರಲ್ಲಿ ನಾನು ಇಂಗ್ಲೆಂಡಿಗೆ ಬಂದಿದ್ದಾಗ ನನಗೆ ಆತ್ಮೀಯ ಸ್ವಾಗತ ಸಿಕ್ಕಿತ್ತು. ಅದರ ಅನಂತರ ನಾನು ಗುಜರಾತ್ ಮುಖ್ಯಮಂತ್ರಿಯಾಗಿ [illegible] ಆಗಿದ್ದರಿಂದ ಇಲ್ಲಿಗೆ ಬರಲಾಗಿರಲಿಲ್ಲ" ಎಂದು [illegible]ಸಿದ.

ಇದು ಕೂಡ ತನ್ನ ಎಂದಿನ ಛಾಳಿಯಂತೆ ಮೋದಿ ಹೇಳಿದ ಮತ್ತೊಂದು ಹಸಿ ಸುಳ್ಳು ಎಂಬುದು ಈಗ ಬಯಲಾಗಿದೆ. ಲಂಡನ್ನಿನಲ್ಲಿರುವ ಭಾರತೀಯ ಹೈಕಮಿಷನ್‌ನಲ್ಲಿ ಆಗ ಡೆಪ್ಯೂಟಿ ಹೈಕಮಿಷನರ್ ಆಗಿದ್ದ ಸತ್ಯಬ್ರತ ಪಾಲ್ ಎಂಬುವವರು ಆಗಿನ ದಿನಗಳಲ್ಲಿ ನಿಜವಾಗಲೂ ನಡೆದದ್ದೇನು ಎಂಬುದನ್ನು ಒಂದು ಲೇಖನದಲ್ಲಿ ಹೊರಹಾಕಿದ್ದಾರೆ.

"ಮೋದಿ ನೀಡಿದ ಸ್ಪಷ್ಟೀಕರಣ ಕೇಳಿ ನನಗೆ ಪೊಲೀಸ್ ಠಾಣೆಯಲ್ಲಿ ಒಬ್ಬ ಸಾವನ್ನಪಿದ ಪ್ರಕರಣ ನೆನಪಾಯಿತು. ರಾಷ್ಟ್ರೀಯ ಮಾನವಹಕ್ಕು ಆಯೋಗವು 'ಆತನ ಸಾವು ಉಸಿರುಗಟ್ಟಿಸಿದ್ದರಿಂದ ಸಂಭವಿಸಿದೆ' ಎಂದರೆ, ಪೊಲೀಸರು 'ಇಲ್ಲಾ ಆತ ಸತ್ತಿದ್ದು ಉಸಿರಾಟದ ಸಮಸ್ಯೆಯಿಂದ' ಎಂದಿದ್ದರು" ಎಂದಿರುವ ಪಾಲ್ ಮೋದಿಯ ಸ್ಪಷ್ಟೀಕರಣವನ್ನು ಲೇವಡಿ ಮಾಡಿದ್ದಾರೆ. ಅಷ್ಟೇ ಅಲ್ಲ, ಮೋದಿ ಹೇಗೆ ತನ್ನ ಸ್ವಾರ್ಥಕ್ಕೆ ಮತ್ತು ಅಹಮ್ಮಿಗೆ ಏನು ಮಾಡಲೂ ಹೇಸದ ವ್ಯಕ್ತಿ ಎಂಬುದನ್ನೂ ಪಾಲ್ ಅವರು ಮತ್ತೊಮ್ಮೆ ಬಯಲಿಗೆಳೆದಿದ್ದಾರೆ.

2002ರಲ್ಲಿ ಏನಾಗಿತ್ತೆಂದರೆ ಬ್ರಿಟನ್ನಿನ ಮೂವರು ಪ್ರಜೆಗಳು ಮೋದಿ ಆಡಳಿತದ ಗುಜರಾತ್‌ನಲ್ಲಿ ಕೊಲ್ಲಲ್ಪಟ್ಟಿದ್ದರಿಂದ ಬ್ರಿಟನ್ನಿನ ಕನ್ಸರ್ವೇಟೀವ್ ಪಕ್ಷ ಆಗ ಅಧಿಕಾರದಲ್ಲಿದ್ದ ಲೇಬರ್ ಪಕ್ಷದ ಮೇಲೆ ಒತ್ತಡ ತಂದು ವಿದೇಶಿ ನೀತಿಯಲ್ಲಿ ನೈತಿಕತೆಯನ್ನು ಕಾಪಾಡಿಕೊಳ್ಳಬೇಕು ಎಂದಿತ್ತು. ಹಾಗೆಯೇ ಅಮ್ನೆಸ್ಟಿ ಮತ್ತು ಇತರೆ ಮಾನವ ಹಕ್ಕು ಸಂಘಟನೆಗಳೂ ತೀವ್ರವಾಗಿ ಬ್ರಿಟನ್ನಿನ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದವು. ಅಲ್ಲಿನ ಮಾಧ್ಯಮಗಳು ಕೂಡ ಗುಜರಾತ್ ಗಲಭೆಯಲ್ಲಿ ಮೋದಿಯ ಪಾತ್ರದ ಬಗ್ಗೆ ವರದಿಗಳನ್ನು ಪ್ರಕಟಿಸಿದ್ದವು. ಇವೆಲ್ಲವೂ ಭಾರತ ಮತ್ತು ಬ್ರಿಟನ್ ನಡುವಿನ ಸಂಬಂಧದ ಮೇಲೆ ಪರಿಣಾಮ ಬೀರಿದ್ದವು. ಆಗ ಭಾರತದ ಇಮೇಜಿಗೆ ಧಕ್ಕೆ ಆಗದಂತೆ ನೋಡಿಕೊಳ್ಳುವ ತಲೆನೋವು ಭಾರತದ ಹೈಕಮಿಷನ್ ಮೇಲೆ ಬಿದ್ದಿತ್ತು.

ಇಂತಹ ಸಂದರ್ಭದಲ್ಲಿಯೇ ಮೋದಿ ಒಂದು ಕುತಂತ್ರವನ್ನು ಮಾಡಿದ. ಅದೇನೆಂದರೆ ಈಗ ದೊಡ್ಡ ಸಂಖ್ಯೆಯಲ್ಲಿ ಇಂಗ್ಲೆಂಡಿನಲ್ಲಿ ನೆಲೆಸಿರುವ ಗುಜರಾತಿ ಮೂಲದ ಹಿಂದೂಗಳು ತನ್ನನ್ನು ಆಹ್ವಾನಿಸಿರುವಂತೆಯೂ, ತನಗೆ ಬ್ರಿಟನ್ನಿನಲ್ಲಿ ಯಾವ ವಿರೋಧವಾಗಲಿ, ನಿಷೇಧವಾಗಲಿ ಇಲ್ಲವೆಂದೂ ತೋರಿಸಲು ಮುಂದಾದ. ಅದರಂತೆ ಬ್ರಿಟನ್ನಿನಲ್ಲಿರುವ ಹಲವು ಹಿಂದೂಗಳು ಆತನನ್ನು ಆಹ್ವಾನಿಸಿದರು. ಆಗ ಮೋದಿ ಸೂಟು ಬೂಟುಗಳನ್ನು ಪ್ಯಾಕ್ ಮಾಡಿಕೊಂಡು ಹೊರಟ.

ಮೋದಿ ಬ್ರಿಟನ್ನಿಗೆ ಬರುತ್ತಿರುವುದು ಅಲ್ಲಿನ ಸರ್ಕಾರಕ್ಕೆ ಕಿಂಚಿತ್ತೂ ಇಷ್ಟವಿರಲಿಲ್ಲ. ಆಗಿನ್ನೂ ಗುಜರಾತ್ ಗಲಭೆಯಲ್ಲಿ ಮೋದಿಯ ಪಾತ್ರ ಕುರಿತ ವಿಚಾರಣೆ ನ್ಯಾಯಾಲಯದ ಮುಂದೆ ಇತ್ತಾದ್ದರಿಂದ ಆತನ ವಿರುದ್ಧ ನಿಷೇಧ ಹೇರುವಂತಿರಲಿಲ್ಲ. ಜೊತೆಗೆ ಅದೇ ಹೊತ್ತಿಗೆ ಇರಾಕ್ ಮೇಲೆ ಅಮೆರಿಕದೊಂದಿಗೆ ಸೇರಿಕೊಂಡು ಬ್ರಿಟನ್ ದಾಳಿ ಮಾಡಿದ್ದರಿಂದ ಅಲ್ಲಿನ ಮುಸಲ್ಮಾನರಿಗೆ ಸರ್ಕಾರದ ವಿರುದ್ಧ ಕೋಪವೇರಿತ್ತು. ಅಂತಹ ಸಂದರ್ಭದಲ್ಲಿ ಮೋದಿಯಂತಹ ವ್ಯಕ್ತಿ ಬ್ರಿಟನ್ನಿಗೆ ಬಂದರೆ ಅಲ್ಲಿನ ವಲಸಿಗ ಸಮುದಾಯಗಳ ನಡುವೆ ಮನಸ್ತಾಪಗಳು ಭುಗಿಲೇಳುವ ಅಪಾಯಗಳಿದ್ದವು. ಅದಕ್ಕೇ ಆಗ ಬ್ರಿಟನ್ನಿನ ಸರ್ಕಾರ ಭಾರತದ ಹೈ ಕಮಿಷನ್‌ಗೆ ಒಂದು ತುರ್ತು ಸಂದೇಶವನ್ನು ರವಾನಿಸಿತ್ತು. ಅದೇನೆಂದರೆ "ಭಾರತ ಮತ್ತು ಬ್ರಿಟನ್ ನಡುವಿನ ಸಂಬಂಧ ಜಟಿಲಗೊಳ್ಳಬಾರದೆಂದರೆ ಯಾವುದೇ ಕಾರಣಕ್ಕೂ ಮೋದಿ ಬ್ರಿಟನ್ನಿಗೆ ಬರದಂತೆ ಭಾರತದ ಸರ್ಕಾರ ಆತನನ್ನು ತಡೆಯಬೇಕು."

ಭಾರತದ ಹೈಕಮಿಷನ್ನಿಗೆ ಬ್ರಿಟನ್ ಸರ್ಕಾರದ ಆತಂಕ ಅರ್ಥವಾಯಿತು. ಮೋದಿಯಂತಹ ಕೋಮುವಾದಿ ವ್ಯಕ್ತಿ ಬ್ರಿಟನ್ನಿಗೆ ಭೇಟಿ ನೀಡಿದರೆ ಅದು ಅಂತರರಾಷ್ಟ್ರೀಯ ಸಂಬಂಧಕ್ಕೆ ಧಕ್ಕೆ ಮಾಡುತ್ತದೆ ಎಂಬುದೂ ಹೈಕಮಿಷನ್‌ಗೆ ಗೊತ್ತಿತ್ತು. ಆದ್ದರಿಂದ ಹೈ ಕಮಿಷನ್ ಕೂಡ ಭಾರತದ ವಿದೇಶಾಂಗ ಇಲಾಖೆಗೆ ಪತ್ರ ಬರೆದು ಬ್ರಿಟನ್ನಿನ ಹಿಂದೂಗಳು ಕೊಟ್ಟಿದ್ದ ಆಹ್ವಾನವನ್ನು ತಿರಸ್ಕರಿಸುವ ಮೂಲಕ ಮೋದಿ ತನ್ನ ಭೇಟಿಯನ್ನು ರದ್ದು ಮಾಡಬೇಕು ಎಂದು ಸಲಹೆ ನೀಡಿತ್ತು. ಈ ಸಲಹೆಯನ್ನು ಆಗಿನ ವಿದೇಶಾಂಗ ಮಂತ್ರಿಯೂ ಒಪ್ಪಿಕೊಂಡಿದ್ದರು. ಮಾತ್ರವಲ್ಲ, ಅವರು ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರಿಗೂ ಇದರ ಬಗ್ಗೆ ತಿಳಿಸಿದ್ದರು. ವಾಜಪೇಯಿ ಕೂಡ ಮೋದಿಯ ಇಂಗ್ಲೆಂಡ್ ಭೇಟಿಯಿಂದಾಗಿ ಭಾರತ ಮತ್ತು ಬ್ರಿಟನ್ ನಡುವಿನ ಸಂಬಂಧ ಕದಡುತ್ತದೆ ಎಂದೇ ಅಭಿಪ್ರಾಯಪಟ್ಟಿದ್ದರು. ಆದರೇನಂತೆ, ಮೋದಿ ಮಾತ್ರ ಸುತರಾಂ ತನ್ನ ಪ್ರಯಾಣವನ್ನು ರದ್ದು ಮಾಡಲು ಒಪ್ಪಲಿಲ್ಲ. "ನನಗೆ ಬಂದಿರುವ ಆಹ್ವಾನವನ್ನು ಸ್ವೀಕರಿಸಿ ನಾನು ಇಂಗ್ಲೆಂಡಿಗೆ ಹೋಗಲೇಬೇಕು. ಇಲ್ಲವಾದರೆ ಬ್ರಿಟನ್ ಸರ್ಕಾರ ಆಕ್ಷೇಪಿಸಿದ್ದರಿಂದ ಪ್ರಯಾಣವನ್ನು ರದ್ದುಗೊಳಿಸಿದರೆ ನಾನು ನಿಶಕ್ತನೂ, ಕೊಲೆಗಡುಕನೂ ಎಂದು ಒಪ್ಪಿಕೊಂಡಂತಾಗುತ್ತದೆ" ಎಂಬುದು ಆತನ ವಾದವಾಗಿತ್ತು.

ಹೀಗೆ ಭಾರತ ಮತ್ತು ಇಂಗ್ಲೆಂಡ್ ಎರಡೂ ಸರ್ಕಾರಗಳಿಗೆ ಬೇಡವಾಗಿದ್ದ ಈ ಭೇಟಿಗೆ ಮೋದಿ ಮುಂದಾಗಿದ್ದ. ಮಾತ್ರವಲ್ಲ ಎರಡೂ ಸರ್ಕಾರಗಳು ನಿರೀಕ್ಷಿಸಿದ್ದಂತೆ ಮೋದಿಯ ಆಗಮನವನ್ನು ಅಲ್ಲಿನ ಹಲವು ಹಿಂದೂಗಳು ಸಂಭ್ರಮಿಸಿದ್ದರೆ ಇತರರು ವಿರೋಧಿಸಿದ್ದರು. ಅಂದಹಾಗೆ, ಮುಂಚಿತವಾಗಿಯೇ ಬ್ರಿಟನ್ನಿನ ಸರ್ಕಾರ ಎಚ್ಚರಿಕೆ ನೀಡಿದ್ದಂತೆ ಆಗಿನ ಮೋದಿಯ ಭೇಟಿಗೂ ಅಲ್ಲಿನ ಸರ್ಕಾರಕ್ಕೂ ಯಾವುದೇ ಸಂಬಂಧವಿರಲಿಲ್ಲ. ಅಷ್ಟೇ ಅಲ್ಲ ಅಲ್ಲಿನ ಗೃಹ ಸಚಿವಾಲಯವು "ಆತ ಬ್ರಿಟನ್ನಿಗೆ ಬಂದಿರುವ ವಿಷಯ ನಮ್ಮ ಗಮನಕ್ಕೆ ಬಂದಿದೆ. ಆದರೆ ಆತ ಸರ್ಕಾರದ ಆಹ್ವಾನದ ಮೇರೆಗೆ ಬಂದಿಲ್ಲ. ಆತ ಇಲ್ಲಿರುವ ಅವಧಿಯಲ್ಲಿ ನಮ್ಮ ಸರ್ಕಾರ ಮತ್ತು ಆತನ ನಡುವೆ ಯಾವುದೇ ಸಂಪರ್ಕ ಇರುವುದಿಲ್ಲ. ಆತನ ಭೇಟಿಯ ಬಗ್ಗೆ ಜನರಲ್ಲಿ ಇರುವ ಆತಂಕ ನಮಗೆ ಅರ್ಥವಾಗುತ್ತದೆ. ಆದರೆ ಆತನಿಗೆ ವೀಸಾ ನಿರಾಕರಿಸಲು ಸೂಕ್ತವಾದ ಆಧಾರಗಳು ಇಲ್ಲದಿರುವುದರಿಂದ ಅದನ್ನು ಕೊಟ್ಟಿದ್ದೇವೆ" ಎಂದು ಹೇಳಿಕೆ ನೀಡಿತ್ತು.

ಅಂದಹಾಗೆ, ಚಿಲಿ ದೇಶದ ಮಾಜಿ ಸರ್ವಾಧಿಕಾರಿ ಜನರಲ್ ಆಗಸ್ಟೋ ಪಿನೋಶೆಯನ್ನು ಸ್ಪೇನ್ ದೇಶದ ನ್ಯಾಯಾಲಯದ ಆದೇಶದ ಪ್ರಕಾರ ಮಾನವ ಹಕ್ಕುಗಳ ಉಲ್ಲಂಘನೆ ಆರೋಪದ ಮೇಲೆ 1998ರಲ್ಲಿ ಇದೇ ಲಂಡನ್‌ನಲ್ಲಿ ಬಂಧಿಸಲಾಗಿತ್ತು. ಹಾಗೆಯೇ 1999ರಲ್ಲಿ ಜಿಂಬಾಬ್ವೆಯ ಅಧ್ಯಕ್ಷ ರಾಬರ್ಟ್ ಮುಗಾಬೆ ಇಂಗ್ಲೆಂಡಿಗೆ ಭೇಟಿ ನೀಡಿದಾಗ ಹಲವು ಮಾನವ ಹಕ್ಕು ಕಾರ್ಯಕರ್ತರು ಆತನನ್ನು ಬಂಧಿಸಲು ಯತ್ನಿಸಿದ್ದರು. ಬ್ರಿಟನ್ನಿನಲ್ಲಿ 'ಸಿಟಿಜನ್ಸ್ ಅರೆಸ್ಟ್' ಎಂಬ ಕಾನೂನಿದೆ. ಅದರಡಿ ಜಗತ್ತಿನ ಎಲ್ಲಿಯಾದರೂ ಯಾರಾದರೂ ಮಾನವ ಹಕ್ಕುಗಳನ್ನು ಉಲ್ಲಂಘಿಸಿದ್ದರೆ ಸಾರ್ವಜನಿಕರಿಗೆ ಅಪರಾಧಿಯನ್ನು ಲಂಡನ್ನಿನಲ್ಲಿ ಬಂಧಿಸುವ ಅವಕಾಶವಿದೆ.

ಮೋದಿ ಬ್ರಿಟನ್ನಿಗೆ ಹೋಗಿ ಎರಡು ದಿನಗಳಾದಾಗ, ಆ ದೇಶದ ವಿದೇಶಾಂಗ ಸಚಿವಾಲಯ ಭಾರತದ ಹೈ ಕಮಿಷನ್‌ಅನ್ನು ಸಂಪರ್ಕಿಸಿ ಮೋದಿಯನ್ನು 'ಸಿಟಿಜನ್ಸ್ ಅರೆಸ್ಟ್' ಕಾನೂನಿನಡಿ ಬಂಧಿಸುವ ಯೋಜನೆಯನ್ನು ಹಲವರು ಹಾಕಿಕೊಂಡಿದ್ದಾರೆಂದೂ, ಅದರ ಜೊತೆಗೆ ಹಲವು ವಕೀಲರು ನ್ಯಾಯಾಲಯದಿಂದಲೇ ಆತನ ಬಂಧನಕ್ಕೆ ಆದೇಶವನ್ನು ಕೋರಿ ಅರ್ಜಿ ಸಲ್ಲಿಸಿದ್ದಾರೆಂದೂ ತಿಳಿಸಿತು. ಈ ಎರಡೂ ಪ್ರಯತ್ನಗಳಲ್ಲಿ ಒಂದು ಯಶಸ್ವಿಯಾದರೂ ಸಮಸ್ಯೆ ಎದುರಾಗುತ್ತಿತ್ತು. ಯಾಕೆಂದರೆ ಭಾರತ ಮತ್ತು ಬ್ರಿಟನ್ ನಡುವಿನ ಸಂಬಂಧವನ್ನು ಕಾಪಾಡಬೇಕೆಂದರೆ ಆ ದೇಶದ ಸರ್ಕಾರ ತನ್ನ ಕಾನೂನನ್ನೇ ಉಲ್ಲಂಘಿಸಿ ಮೋದಿಯನ್ನು ಬಿಡುಗಡೆ ಮಾಡಬೇಕಾಗುತ್ತಿತ್ತು ಅಥವಾ ಆತ ಕಾನೂನನ್ನು ಎದುರಿಸಲಿ ಎಂದು ಸುಮ್ಮನಾದರೆ ಭಾರತದ ಅಸಹಕಾರವನ್ನು ಎದುರಿಸಬೇಕಾಗುತ್ತಿತ್ತು. ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಬ್ರಿಟನ್ ಸರ್ಕಾರವು ಭಾರತದ ಸರ್ಕಾರಕ್ಕೆ "ಹೇಗಾದರೂ ಮಾಡಿ ಈತ ಆದಷ್ಟು ಬೇಗ ಇಲ್ಲಿಂದ ವಾಪಸ್ ಹೊರಡುವಂತೆ ನೋಡಿಕೊಳ್ಳಿ" ಎಂದು ಮನವಿ ಮಾಡಿಕೊಂಡಿತ್ತು. ಅದಕ್ಕೆ ಸ್ಪಂದಿಸಿದ ಭಾರತದ ಸರ್ಕಾರ ಕೂಡ ಉನ್ನತ ವಲಯದಿಂದ ಮೋದಿಗೆ ಕೂಡಲೇ ಬ್ರಿಟನ್ ಬಿಟ್ಟು ಹೊರಡುವಂತೆ ಸಂದೇಶವೂ ರವಾನೆ ಆಗಿತ್ತು. ಆದರೆ ಆದಕ್ಕೂ ಮೋದಿ ಕ್ಯಾರೆ ಅನ್ನಲಿಲ್ಲ. ಬದಲಾಗಿ ತನ್ನನ್ನು ಬಂಧಿಸಿದರೆ ತಾನು ಭಾರತದಲ್ಲಿ ಹುತಾತ್ಮನಾಗುತ್ತೇನೆಂದೂ, ತನ್ನ ರಾಜಕೀಯ ಹಾದಿ ಸುಗಮವಾಗುತ್ತದೆಂದೂ ಭಂಡತನವನ್ನು ಪ್ರದರ್ಶಿಸಿದ. ಆತನ ಅದೃಷ್ಟಕ್ಕೆ ಆತನ ವಿರುದ್ಧ ನ್ಯಾಯಾಲಯದ ಮುಂದೆ ಸಲ್ಲಿಸಲಾಗಿದ್ದ ಅರ್ಜಿ ತಾಂತ್ರಿಕ ಕಾರಣಗಳಿಂದಾಗಿ ರದ್ದಾಯಿತು. ಆದರೂ ಯಾವುದಕ್ಕೂ ಇರಲಿ ಎಂದು ಬ್ರಿಟನ್ನಿನ ಸರ್ಕಾರ ಅದೃಶ್ಯವಾದ ರಕ್ಷಣಾ ಪಹರೆಯನ್ನು ಆತನ ಸುತ್ತ ಒದಗಿಸಿತ್ತು. ಹಲವು ದಿನಗಳ ಕಾಲ ಲಂಡನ್‌ನಲ್ಲಿ ಮೆರೆದಾಡಿದ ಮೋದಿ ಮೊದಲೇ ನಿರ್ಧರಿಸಿದ್ದ ದಿನದಂದು ಭಾರತಕ್ಕೆ ವಾಪಸಾದ. ಕೊನೆಗೂ ಆತ ನಿರ್ಗಮಿಸಿದ್ದನ್ನು ಭಾರತ ಮತ್ತು ಬ್ರಿಟನ್ ಎರಡೂ ದೇಶಗಳ ಸರ್ಕಾರಗಳು ಸ್ವಾಗತಿಸಿದ್ದವು.

ಇದಾದ ಹಲವು ತಿಂಗಳುಗಳ ನಂತರ ಬ್ರಿಟನ್ ಸರ್ಕಾರದ ಮುಂದಾಳತ್ವದಿಂದಾಗಿ ಯೂರೋಪಿಯನ್ ಯೂನಿಯನ್ ಮೋದಿ ವಿರುದ್ಧ ಬಹಿಷ್ಕಾರವನ್ನು ಘೋಷಿಸಿತು. ಆಗ ಮೋದಿ ಮತ್ತೊಂದು ಕುತಂತ್ರಕ್ಕೆ ಮುಂದಾದ. ಬ್ರಿಟನ್ನಿನಲ್ಲಿ ಹಲವು ಸಂಸದರು ಚುನಾವಣೆಗಳಲ್ಲಿ ಗೆಲ್ಲಲು ಭಾರತ ಮೂಲದ ಮತದಾರರನ್ನು ಅವಲಂಬಿಸಿರುವುದರಿಂದ ಅಂತಹ ಸಂಸದರ ಮೇಲೆ ಪರೋಕ್ಷ ಒತ್ತಡ ಸೃಷ್ಟಿಯಾಗುವಂತೆ ನೋಡಿಕೊಂಡ. ಅದರಂತೆ ಹಲವು ಸಂಸದರಿಗೆ ಅಲ್ಲಿನ ಭಾರತ ಮೂಲದ ಮತದಾರರು "ನೀವು ಮೋದಿಯನ್ನು ಸಂಪ್ರೀತಗೊಳಿಸದಿದ್ದರೆ ಮುಂದಿನ ಬಾರಿ ನಮ್ಮ ಮತ ನಿಮಗೆ ಸಿಗುವುದಿಲ್ಲ" ಎಂದು ಬೆದರಿಸಿದರು. ಆ ಬೆದರಿಕೆ ತನ್ನ ಪರಿಣಾಮವನ್ನು ಬೀರಿತು. ಹೇಗೆಂದರೆ ಒಬ್ಬ ಸಂಸದ ಭಾರತೀಯ ಹೈ ಕಮಿಷನ್ ಅನ್ನು ಸಂಪರ್ಕಿಸಿ "ನಾನು ಭಾರತಕ್ಕೆ ಭೇಟಿ ನೀಡುತ್ತಿದ್ದೇನೆ. ದೆಹಲಿಯಲ್ಲಿನ ಭೇಟಿಗಳು ಮುಗಿದನಂತರ ನಾನು ಗುಜರಾತ್‌ನಲ್ಲಿರುವ ಅಕ್ಷರಧಾಮ ದೇವಸ್ಥಾನವನ್ನು ನೋಡಲು ಇಚ್ಛಿಸಿದ್ದೇನೆ. ಅದಕ್ಕೆ ಕಾರಣ ನನ್ನ ಕ್ಷೇತ್ರದ ಮತದಾರರಲ್ಲಿ ಗುಜರಾತ್ ಮೂಲದ ಭಾರತೀಯರು ಗಣನೀಯ ಸಂಖ್ಯೆಯಲ್ಲಿರುವುದು. ಅಂದಹಾಗೆ, ನಾನು ಗುಜರಾತ್‌ಗೆ ಭೇಟಿ ಕೊಡುವಾಗ ಯಾರಿಗೂ ಗೊತ್ತಾಗದಂತೆ ಅಲ್ಲಿನ ಮುಖ್ಯಮಂತ್ರಿಯೊಂದಿಗೆ ನನಗೆ ಒಂದು ಭೇಟಿಯನ್ನು ಏರ್ಪಡಿಸಲು ಸಾಧ್ಯವಾ?" ಎಂದು ಮನವಿ ಸಲ್ಲಿಸಿದರು. ಆದಾದನಂತರ ಗುಜರಾತ್ ಮೂಲದ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿರುವ ಇತರೆ ಕ್ಷೇತ್ರಗಳ ಮೂವರು ಸಂಸದರೂ ಇಂತಹದ್ದೇ ಮನವಿಗಳನ್ನು ಹೈಕಮಿಷನ್‌ಗೆ ಸಲ್ಲಿಸಿದ್ದರು. ಇದೆಲ್ಲದರ ಅರ್ಥ ತನ್ನ ತಾಕತ್ತನ್ನು ಅತ್ತ ಬ್ರಿಟನ್ ಸರ್ಕಾರಕ್ಕೂ ಇತ್ತ ವಾಜಪೇಯಿ ಸರ್ಕಾರಕ್ಕೂ ತೋರಿಸುವ ಉದ್ದೇಶ ಮೋದಿಯದಾಗಿತ್ತು. ಆದರೆ ಆತನ ಈ ಎಲ್ಲ ಪೌರುಷ ಎನ್‌ಡಿಎ ಸರ್ಕಾರ ಉರುಳಿ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದಕೂಡಲೇ ಮಂಗಮಾಯವಾಯಿತು.

2005ರಲ್ಲಿ ಮೋದಿ ಮತ್ತೊಮ್ಮೆ ಬ್ರಿಟನ್ನಿನ ಹಿಂದೂಗಳಿಂದ ಆಹ್ವಾನ ಬರುವಂತೆ ಏರ್ಪಡಿಸಿಕೊಂಡು ಅಲ್ಲಿಗೆ ಹೋಗಲು ಸಜ್ಜಾದ. ಆಗ ಬ್ರಿಟನ್ ಸರ್ಕಾರ ಹಿಂದಿಗಿಂತಲೂ ಗಟ್ಟಿಯಾಗಿ ಆತನ ಆಗಮನವನ್ನು ವಿರೋಧಿಸಿತು. ಯಾಕೆಂದರೆ 2003ರಲ್ಲಿ ನ್ಯಾಯಾಲಯದಲ್ಲಿ ವಿಫಲವಾಗಿದ್ದ ಬಂಧನದ ಅರ್ಜಿ ಈ ಬಾರಿ ಯಶಸ್ವಿಯಾಗುವ ಸೂಚನೆಗಳಿದ್ದವು. ಅದನ್ನು ನಿರ್ಲಕ್ಷಿಸಿದ ಮೋದಿ ಮತ್ತೊಮ್ಮೆ ತನ್ನ ವರ್ಚಸ್ಸು, ಪರ್ಚಸ್ಸು ಎಂದೆಲ್ಲ ವರಾತೆ ತೆಗೆದ. ಆದರೆ ಅದಕ್ಕೆ ಮನಮೋಹನ್ ಸಿಂಗ್ ಸರ್ಕಾರ ಸೊಪ್ಪು ಹಾಕಲಿಲ್ಲ. "ಅವರು ಬರಬೇಡ ಅಂತಿದ್ದಾರೆ. ನಾವೂ ಹೋಗಬೇಡ ಅಂತಿದ್ದೀವಿ. ಇಷ್ಟರ ಮೇಲೂ ಹೋಗೇ ಹೋಗುತ್ತೀನಿ ಅಂದರೆ ಆಗ್ಲಾಗುವುದನ್ನು ನೀನೇ ಎದುರಿಸಬೇಕು. ನಿನ್ನ ಸಹಾಯಕ್ಕೆ ನಾವು ಕಿರುಬೆರಳನ್ನೂ ಎತ್ತುವುದಿಲ್ಲ" ಎಂದು ಕಡ್ಡಿ ಮುರಿದಂತೆ ಹೇಳಿತು. ಆಗ ಮೋದಿ ತನ್ನ ಪರಾಕ್ರಮದ ಬಾಲ ಮುದುರಿಕೊಂಡು ತೆಪ್ಪಗಾದ.

ಇದು ಮೋದಿಯ 2003ರ ಲಂಡನ್ ಭೇಟಿಯ ಅಸಲೀಯತ್ತು. ಮೋದಿ ಎಂದರೆ ಸುಳ್ಳು, ಸುಳ್ಳು ಎಂದರೆ ಮೋದಿ ಎಂಬುದನ್ನು ಆತನೇ ಮತ್ತೊಮ್ಮೆ ಸಾಬೀತುಪಡಿಸಿದ್ದಾನೆ. ■

ಬೆಳ್ತಂಗಡಿ

ಧರ್ಮವ್ಯಾಪಾರಿ ದಂಡಿನ ದಗಾಕೋರ ದಂಧೆ ಪುರಾಣ

ಧರ್ಮಸ್ಥಳದ ದೇವರ ದೊರೆಗಳು ದಿಗಿಲು ಬಿದ್ದಿದ್ದಾರೆ! ಆದಾಯಕರ ಭಯ-ಭಕ್ತಿ-ಭಾವನೆಗಳನ್ನೇ ಬಂಡವಾಳ ಮಾಡಿಕೊಂಡು ಭರ್ಜರಿ 'ದೇವಸ್ಥಾನೋದ್ಯಮ' ಸಾಮ್ರಾಜ್ಯ ವಿಸ್ತರಿಸಿಕೊಳ್ಳುತ್ತ ಸಾಗುತ್ತಿರುವ ಈ ದೋಖಾ ದೇವದೂತರ ದಗಲುಬಾಜಿ ದಂಧೆಗಳು ಒಂದೊಂದಾಗಿ ಬಯಲಿಗೆ ಬೀಳುತ್ತಿವೆ. ಸ್ವಯಂಘೋಷಿತ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಪರಿವಾರದ ಆಕ್ರಮ-ಅನ್ಯಾಯ-ಅನ್ಯಾಚಾರ ಗುಟ್ಟುಗಳು ಬೆಳ್ತಂಗಡಿ ಗಡಿದಾಟಿ ದಕ್ಷಿಣ ಕನ್ನಡವನ್ನು ಹಾದು ರಾಜ್ಯವ್ಯಾಪ್ತಿ ತಲುಪುತ್ತಿವೆ. ಧರ್ಮಸ್ಥಳದ ಪಕ್ಕದ ಗುರುವಾಯನಕೆರೆಯ ನಾಗರಿಕ ಸೇವಾ ಟ್ರಸ್ಟ್ ಮೂರ್ನಾಲ್ಕು ವರ್ಷದಿಂದ ಧರ್ಮಸಂಸ್ಥಾನದ ಧರ್ಮಾಧಾರಿತ ಕರ್ಮಕಾಂಡದ ವಿರುದ್ಧ ಮಾಡುತ್ತ ಬಂದಿರುವ ಹೋರಾಟವೀಗ ರಾಜ್ಯ ವ್ಯಾಪಿ ಕಿಚ್ಚಾಗುತ್ತಿದೆ....

ನಾಗರಿಕ ಸೇವಾ ಟ್ರಸ್ಟಿನ ಮುಖ್ಯಸ್ಥ ಕೆ. ಸೋಮನಾಥ ನಾಯಕ್ ಒಂದು ಕಾಲದಲ್ಲಿ ವೀರೇಂದ್ರ ಹೆಗ್ಗಡೆಯ ಆಪ್ತಾಪ್ತ ಬಳಗದಲ್ಲಿದ್ದವರು. ಆದರೆ ಇದ್ದಕ್ಕಿದ್ದಂತೆ ಧರ್ಮಸ್ಥಳದವರ ಸಹವಾಸದಿಂದ ಹೊರಬಿದ್ದ ಸೋಮನಾಥ ನಾಯಕ್ ತಾನೇ ಒಂದು ಎನ್‌ಜಿಓ ಕಟ್ಟಿ ಕಾರ್ಯಾಚರಣೆಗೆ ಇಳಿದುಬಿಟ್ಟರು. ಸೋಮನಾಥ ನಾಯಕ್ ಸರ್ವಶಕ್ತ ಧರ್ಮಾಧಿಕಾರಿಯ ಮುಖವಾಡಕ್ಕೆ ಕೈಹಾಕುವ ರಿಸ್ಕ್ ತೆಗೆದುಕೊಂಡರು.

ಧರ್ಮಸಂಸ್ಥಾನದ ಹೆಗ್ಗಡೆ ಪರಿವಾರದ ಕಪ್ಪು- ಬಿಳಿ ವ್ಯವಹಾರ, ದೈವತ್ವದ ನಗೆ ಬೀರುತ್ತಲೇ ಮಾಡುವ ವಂಚನೆ-ಶೋಷಣೆ-ಪಾಳೆಗಾರಿ ಪ್ರವರ ಬಲು ಹತ್ತಿರದಿಂದ ಕಂಡವರು ನಾಯಕ್. ಹೆಗ್ಗಡೆ ಮತ್ತವರ ಸಹೋದರ ಹರ್ಷೇಂದ್ರ ಹೆಗ್ಗಡೆ ಗ್ಯಾಂಗಿನ ಪ್ರತಿ ಪಟ್ಟು ನಾಯಕ್‌ಗೆ ಗೊತ್ತಿದೆ. ಹೀಗಾಗಿ ಆತ ಧರ್ಮಸಂಸ್ಥಾನದ ಅಸಲಿಯತ್ತು ಎಳೆಎಳೆಯಾಗಿ ಬಹಿರಂಗ ಮಾಡುವ ಅಭಿಯಾನ ತುಂಬ ವ್ಯವಸ್ಥಿತವಾಗಿ ಹೆಣೆದಿದ್ದಾರೆ. ಸರಿಸುಮಾರು 4000 ಪುಟಗಳಷ್ಟು ಹೆಗ್ಗಡೆ ಮೇಳದ ಪಾತಕ ಪುರಾಣ ಮಾಹಿತಿ ಹಕ್ಕಿನಲ್ಲಿ ಕಲೆ ಹಾಕಿದ್ದಾರೆ.

ಆದರೆ ಧರ್ಮಸಂಸ್ಥಾನ ದೊರೆಗಳು ತಮ್ಮ ಮೇಲೆ ಬಂದಿರುವ ಭೂಕಬಳಿಕೆ, ಶಿಕ್ಷಣ ವ್ಯಾಪಾರ, ದೇವಸ್ಥಾನ ದಂಧೆ, ಮೈಕ್ರೋಫೈನಾನ್ಸ್ ಮೋಸ.... ಮುಂತಾದ ಸತ್ಯಾರೋಪಗಳನ್ನು ಸಾಕ್ಷ್ಯಾಧಾರ ಸಮೇತ ನಿರಾಕರಿಸುತ್ತಿಲ್ಲ, ಬದಲಿಗೆ 'ಅವಹೇಳನ ನಡೆಯುತ್ತಿದೆ, ಸುಳ್ಳು, ಅಪಪ್ರಚಾರ ಕ್ಷೇತ್ರದ ವಿರುದ್ಧ ನಡೆಯುತ್ತಿದೆ' ಎಂದಷ್ಟೇ ಹೇಳುತ್ತಿದ್ದಾರೆ ಹೆಗ್ಗಡೆ ಹಿತಚಿಂತಕರು. ಆದರೆ ಎದುರಾಳಿಗಳು ಹೊರಹಾಕುತ್ತಿರುವ ದಾಖಲೆಗಳು ಧರ್ಮಸ್ಥಳ ರಿಪಬ್ಲಿಕ್‌ನಲ್ಲಿ ಕಾನೂನು ಬಾಹಿರ ಕರ್ಮಕಾಂಡಗಳು ಅವ್ಯಾಹತವಾಗಿ ನಡೆಯುತ್ತ ಬಂದಿದೆ ಎಂಬುದು ನಿಸ್ಸಂಶಯವಾಗಿ ಸಾಬೀತುಪಡಿಸುತ್ತಿವೆ.

ಲ್ಯಾಂಡ್ ಲೂಟಿ

ಧರ್ಮ ಸಂಸ್ಥಾನದ್ದು ಬೃಹತ್ ಭೂಸಾಮ್ರಾಜ್ಯ! ಇದರಲ್ಲಿ ಕಮ್ಮಿಕಮ್ಮಿಯೆಂದರೂ 1500 ರಿಂದ 2000 ಎಕರೆ ಭೂಮಿ ದೇವದೂತರು ಅಕ್ರಮವಾಗಿ ಕಬ್ಜಾ ಮಾಡಿಕೊಂಡು ಅನುಭವಿಸುತ್ತಿದ್ದಾರೆ. ಸತ್ಯ-ಧರ್ಮ-ನ್ಯಾಯ-ನೀತಿ ಪೇಟೆಂಟ್ ಪಡೆದಂತೆ ಕಂಡಕಂಡ ವೇದಿಕೆಗಳಲ್ಲಿ ಪ್ರೋಸು ಕೊಡುವ, ಉದ್ದುದ್ದ ಪ್ರವಚನ ಲೇಖನ ಬರೆಯುವ ವೀರೇಂದ್ರ ಹೆಗ್ಗಡೆ ಅವಿಭಕ್ತ ಕುಟುಂಬ 4671 ಎಕರೆ ಕೃಷಿ ಭೂಮಿ ತನಗಿದೆ ಎಂದು ಬೆಳ್ತಂಗಡಿ ಭೂನ್ಯಾಯಮಂಡಳಿಗೆ ಡಿಕ್ಲರೇಷನ್ ನೀಡಿತ್ತು. LRY72/74-75ರ ಪ್ರಕಾರ ನೀಡಲಾದ ಈ ಘೋಷಣೆ ಅಷ್ಟೂ ಸುಳ್ಳು. ಭೂನ್ಯಾಯ ಮಂಡಳಿಯೇ ದಿನಾಂಕ 6-3-2012ರಂದು ಹೊರಡಿಸಿರುವ ಆದೇಶವೇ ಇದನ್ನು ಸಾಕ್ಷ್ಯಾಧಾರ ಸಮೇತ ಸಾಬೀತು ಪಡಿಸುವಂತಿದೆ!

ಇದು ಕರ್ನಾಟಕ ಭೂಸುಧಾರಣಾ ಕಾನೂನಿನ ಸ್ಪಷ್ಟ ಉಲ್ಲಂಘನೆ. ಕೃಷಿ ಭೂಮಿಯನ್ನು 400 ಎಕರೆ ಪ್ಲಾಂಟೇಷನ್, 335 ಎಕರೆ ಡೀಮ್ಡ್ ಕನ್ವರ್ಷನ್ ಎಂದು ಸುಳ್ಳು ಹೆಗ್ಗಡೆ ಕುಟುಂಬ ಹೇಳಿದೆ. ಇದನ್ನು ತನಿಖೆ ಮಾಡುವಂತೆ ಮುಖ್ಯಮಂತ್ರಿ ಮತ್ತು ಕಂದಾಯ ಮಂತ್ರಿ ಆದೇಶ ಮಾಡಿದ್ದಾರೆ. ಈ ಪ್ರಕರಣ ಹೈಕೋರ್ಟ್ ಮೆಟ್ಟಲೇರುವ ತಯಾರಿಯಲ್ಲಿದೆ. 1974ರಲ್ಲೇ ಈ ದೇವಸ್ಥಾನದ ಭೂಮಿ ತಮ್ಮ ಕುಟುಂಬದ್ದೆಂದು ಹೆಗ್ಗಡೆಜೀ ಘೋಷಣೆ ಮಾಡಿದ್ದಾರೆ. ಅಂದರೆ 70ರ ದಶಕದಲ್ಲೇ ಧರ್ಮಾತ್ಮರ ಭೂದಾಹ ಶುರುವಾಗಿತ್ತು ಎಂದಾಯ್ತು. ಸದ್ರಿ ಭೂಮಿ ಕ್ಷೇತ್ರದ ಪರಂಪರೆ ಆಸ್ತಿ ಎಂದು ವೀರೇಂದ್ರ ಹೆಗ್ಗಡೆಯೇ 8-5-2015ರಂದು ಪುತ್ತೂರು ಸಹಾಯಕ ಆಯುಕ್ತರಿಗೆ ಅಧಿಕೃತ ಹೇಳಿಕೆ ಕೊಟ್ಟಿದ್ದಾರೆ. ಇದರರ್ಥ ಇಷ್ಟೆ! ಹೆಗ್ಗಡೆ ಪರಂಪರೆಯವರೇ ಈ ಜಾಗಕ್ಕೆಲ್ಲ ವಾರಸುದಾರರು ಎಂಬ ವಾದ ಧರ್ಮವ್ಯಾಪಾರಿಯದು.

ಹೆಗ್ಗಡೆ ಕುಟುಂಬ ಹೊಂದಿರುವ ಕೃಷಿ ಭೂಮಿಯ ಹಲವು ಸರ್ವೆ ನಂಬರ್‌ಗಳು LRY72/74-75 ಘೋಷಣೆಯಲ್ಲಿ ಬುದ್ಧಿಪೂರ್ವಕವಾಗೇ ಸೇರಿಸದಿರುವುದು ಈಗ ಬಹಿರಂಗವಾಗಿದೆ. 6-3-12ರ ಅಂತಿಮ ತೀರ್ಪಿಗೂ ಮೊದಲೇ ಎಲ್ಲ ಕಾನೂನು ಧಿಕ್ಕರಿಸಿ ಹೆಗ್ಗಡೆ ಕುಟುಂಬದವರು ಒಂದಿಷ್ಟು ಮಾರಾಟ ಮಾಡಿದ್ದಾರೆ. ಸುಮಾರು 208 ಎಕರೆ ಕೃಷಿಯೇತರ ಉದ್ದೇಶಕ್ಕಾಗಿ ಬದಲಾಯಿಸಿಕೊಂಡಿದ್ದಾರೆ. ಇದೆಲ್ಲ ಕಾಯ್ದೆಬಾಹಿರ. ತನಿಖೆಯೂ ನಡೆಯುತ್ತಿದೆ. ಹೆಗ್ಗಡೆ ಒಡೆತನದ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಶನ್ ಸೊಸೈಟಿ ಮತ್ತಿತರ ಸಂಸ್ಥೆಗಳು 1974ರ ನಂತರ ಕೃಷಿ ಭೂಮಿಯ ಒಡೆತನ ಕಾನೂನುಬಾಹಿರವಾಗಿ ಹೊಂದಿರುವುದು ಭೂಸುಧಾರಣಾ ಕಾಯ್ದೆ ಕಡೆಗಣನೆಯಾಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಜಿಲ್ಲಾಧಿಕಾರಿ ತನಿಖೆಗೆ ಆದೇಶ ಮಾಡಿದ್ದಾರೆ.

ಹೇಳೋದು ಸೇವೆ; ಮಾಡೋದು ಸ್ವಾಹಾ

ಶಿಕ್ಷಣ, ಸಮಾಜ ಸೇವೆ, ಭಕ್ತಾದಿಗಳ ಅನುಕೂಲ-ಸೌಕರ್ಯ-ಸಮಾಧಾನದ ಉದ್ದೇಶ ಮುಂದಿಟ್ಟು ಧರ್ಮಸ್ಥಳ ಸಂಸ್ಥಾನಿಗಳು ಲಪಟಾಯಿಸಿರುವ ಭೂಮಿಗೆ ಲೆಕ್ಕವೇ ಇಲ್ಲ. ಮಂಜುನಾಥ ಸ್ವಾಮಿ ದರ್ಶನಕ್ಕೆ ಬರುವ ಭಕ್ತರು ಖುಷಿಯಿಂದ ವಿಹರಿಸಲು ಹೂದೋಟ ಹಾಗು ಮೃಗಾಲಯ ಮಾಡುತ್ತೇವೆಂದು ಕ್ಷೇತ್ರ ಆಡಳಿತಗಾರರು 14 ಎಕರೆ ಭೂಮಿಗೆ ಬೇಡಿಕೆ ಸರ್ಕಾರದ ಮುಂದಿಟ್ಟಿದ್ದರು. ಯಾವ ಪಕ್ಷದವರೇ ರಾಜ್ಯಭಾರ ವಹಿಸಿಕೊಂಡರೂ ಆ ಆಸ್ಥಾನದಲ್ಲಿ ಧರ್ಮಸ್ಥಳದ ದೇವಮಾನವರಿಗೆ 'ವಿಶೇಷ' ಗೌರವ-ಪ್ರಭಾವ ಇದ್ದೇ ಇರುವುದು ವಾಡಿಕೆಯಂತಾಗಿ ಹೋಗಿದೆ. ಹೀಗಾಗಿ ಎಡಿಎಸ್ ಪಿಪಿಡಿಆರ್/44:82-83/1982 ಆದೇಶದಂತೆ ತಕ್ಷಣ ಭೂಮಂಜೂರಾತಿ ಆಗಿಹೋಗುತ್ತದೆ!

ಆದರೆ ಈ ಮಂಜೂರಾತಿ ಹಿಂದೆ ಲಾಭದ ಮಸಲತ್ತು ಅಡಗಿದೆ. ಹಲವು ಹೂದೋಟ ಹೊಂದಿರುವ ಧರ್ಮಸ್ಥಳ ಸಂಸ್ಥಾನಕ್ಕೆ ಹೂದೋಟ ಮಾಡುವ ಯೋಚನೆಯೇ ಇರಲಿಲ್ಲ. ಲಾಭದಾಯಕ ಪ್ರಕೃತಿ ಚಿಕಿತ್ಸಾಲಯಕ್ಕೆ ಜಾಗ ಧರ್ಮವಂತರಿಗೆ ಬೇಕಾಗಿತ್ತು. ಮಂಜೂರಾತಿಯ ಕೊನೆ ಹಂತದಲ್ಲಿ ಮಂಜುನಾಥ ಸ್ವಾಮಿ ಪವಾಡ ಮಾಡುತ್ತಾನೆ! ಮಂಜೂರಾತಿ ಹೂದೋಟದ ಬದಲಿಗೆ 'ಪ್ರಕೃತಿ ಚಿಕಿತ್ಸಾಲಯ'ಕ್ಕೆ ಎಂದು ಅಂದಿನ ತಹಸೀಲ್ದಾರ್ ಕ್ರಿಮಿನಲ್ ತಿದ್ದುಪಡಿ ಮಾಡುತ್ತಾನೆ!! ಪ್ರಕೃತಿ ಚಿಕಿತ್ಸಾಲಯಕ್ಕೆ ಬೇಡಿಕೆ ಇಲ್ಲದಿದ್ದರೂ ಆ ಉದ್ದೇಶಕ್ಕೆ 14.65 ಎಕರೆ ಭೂಮಿ ಹೆಗ್ಗಡೆ ಪರಿವಾರಕ್ಕೆ ಸಿಗುತ್ತದೆ. ಈ ಪಾತಕದ ಬಗ್ಗೆಯೂ ತನಿಖೆ ನಡೆಯುತ್ತಿವೆ. ಧರ್ಮವಂತರ ಅಧರ್ಮ ಬಟಾಬಯಲಾಗುತ್ತಿದೆ.

ಉಜಿರೆ ಗ್ರಾಮದಲ್ಲಿ ವೀರೇಂದ್ರ ಹೆಗ್ಗಡೆ ಅಧ್ಯಕ್ಷತೆಯ ಎಸ್‌ಡಿಎಂ ಎಜುಕೇಷನಲ್ ಟ್ರಸ್ಟ್‌ಗೆ 1948ರಲ್ಲಿ ಹುಟ್ಟುಬಿದ್ದ ಅನುದಾನವಾಗಿ 24.31 ಎಕರೆ ಜಮೀನು ಸರ್ಕಾರ ಕೊಟ್ಟಿತು. ಇದನ್ನು ಮಾರಾಟ ಮಾಡುವ ಹಕ್ಕು ಪಡೆದವರಿಗೆ ಇಲ್ಲವೇ ಇಲ್ಲ. ಆದನ್ನು ಶೈಕ್ಷಣಿಕ ಉದ್ದೇಶಕ್ಕಷ್ಟೇ ಬಳಸ... ಆದರೆ ಜಿಲ್ಲಾಧಿಕಾರಿಗಳ ಪೂರ್ವಾನುಮತಿ ಪಡೆ... ಸದ್ರಿ ಜಾಗವನ್ನು ಹೆಗ್ಗಡೆಯ ರಿಯಲ್ ಎಸ್ಟೇಟ್ ... ಬಳಿ ಮಾಡಿದೆ. ಕ್ರಯಪತ್ರ 2007ರಲ್ಲಿ ನೋಂದಾವಣೆ ... ಆಗಿದೆ. ಕೃಷಿ ಭೂಮಿ ಹೊಂದಲು ಸರ್ಕಾರದ ಅನು... ಇಲ್ಲದೆ ನೂರಾರು ಎಕರೆ ಭೂಮಿ ಹೆಗ್ಗಡೆ ಪರಿ... ಖರೀದಿಸಿದೆ. 1993ರಲ್ಲಿ ಮೈಸೂರಿನ ಏಸಿಯಿಂದ ... ಆದೇಶವನ್ನೇ ವಿಭಾಗೀಯ ಅಧಿಕಾರಿ ಆರ್ಡರ್ ... ಸಬ್‌ರಿಜಿಸ್ಟರ್ ಕಚೇರಿ, ತಹಸೀಲ್ದಾರ್ ಕಚೇರಿಗಳಲ್ಲಿ ಬ... ಕ್ರಯಪತ್ರ ಸಲೀಸಾಗಿ ಮಾಡಿಸಿಕೊಂಡಿದ್ದಾರೆ 'ಹಾಮಾ... ದೇವಮಾನವರು.

ಮೈಸೂರಿನ ಎಸಿ 1993ರಲ್ಲಿ ಒಂದು ... ಮಿತಿಹಾಕಿ ಮೈಸೂರು ವ್ಯಾಪ್ತಿಯಲ್ಲಷ್ಟೇ ಭೂಖರಿ... ಪರವಾನಗಿ ಎಸ್‌ಡಿಎಂ ಎಜುಕೇಷನಲ್ ಸೊಸೈ... ನೀಡಿದ್ದರು. ಇದನ್ನು ಇಡೀ ರಾಜ್ಯದಲ್ಲಿ ಬೇಕಾ... ಭೂಖರೀದಿಗೆ ಮೈಸೂರು ಡಿವಿಷನಲ್ ಕಮೀಷ... ಕೊಟ್ಟಿರುವ ಆದೇಶ ಎಂದು ಹೆಗ್ಗಡೆ ಗ್ಯಾಂಗ್ ಹೇಳಿಕೊ... ಬೆಳ್ತಂಗಡಿಯಲ್ಲಿ ಹಲವು ಎಕರೆ ಭೂಮಿ ಕೊಂಡುಕೊಂ... ಇದರಲ್ಲಿ 132 ಎಕರೆ ಜಾಗಕ್ಕೆ ಸಂಬಂಧಿಸಿದ 25 ಕ್ರಯ... (ಮ್ಯೂಟೇಷನ್)ಗಳನ್ನು ಪುತ್ತೂರು ಎಸಿ ರದ್ದುಪಡಿಸಿ... (ಕ್ರಸಿಡಿಸ್ ಕೆಎಲ್‌ಆರ್‌ಸಿಆರ್/74/15-16) ಮುಟ್ಟುಗೋಲು ಹೆಗ್ಗಡೆಯ ದೇವರು ಇಳಿದುಬಂದ... ರದ್ದಾಗುವುದು ಸಾಧ್ಯವೇ ಇಲ್ಲ! ಇಂಥ ಹಲವು ... ಖರೀದಿಯಿದ್ದು ಅದೆಲ್ಲ ನಿಷ್ಪೂರ ತನಿಖೆಯಾ... ದೇವಾತ್ಮಗಳ ಅಸಲೀ ಅವತಾರ ಅನಾವರಣವಾಗು...

ಶೋಷಿತ-ದುರ್ಬಲ ವರ್ಗಕ್ಕೆ ಮೀಸಲಿಡಲಾ... ಉಜಿರೆಯ 43.90 ಎಕರೆ ಪ್ರದೇಶವನ್ನು ಹೆಗ್ಗಡೆಯ ... ಎಸ್‌ಡಿಎಂ ಶಿಕ್ಷಣಾಲಂಗ್ಗಡಿಗೆ ಅನುದಾನವಾಗಿ ಸ... ನೀಡಿತ್ತು. ಇದಕ್ಕೆ ಬದಲಿಯಾಗಿ ಎಸ್‌ಡಿಎಂ ಎಜುಕೇಷ... ಸೊಸೈಟಿಯ ಅಧ್ಯಕ್ಷ ವೀರೇಂದ್ರ ಹೆಗ್ಗಡೆ ಬದಲಿ ಭೂ... ದುರ್ಬಲ ವರ್ಗಕ್ಕಾಗಿ ಮೀಸಲಿಡಬೇಕಿತ್ತು. ಆದರೆ ಬ... ಭೂಮಿ ಹೆಗ್ಗಡೆಜೀ ಕಡೆಯಿಂದ ಬಂದಿಲ್ಲ. 2012... ರಲ್ಲೇ ಬದಲಿ ಭೂಮಿ ಒದಗಿಸುವಂತೆ ಜಿಲ್ಲಾಧಿಕಾರಿ... ಆದೇಶ ನೀಡಿದ್ದರೂ ಪವರ್‌ಫುಲ್ ದೇವರ ಏಜೆಂ... ಆಳುವವರ ನಿಷ್ಕ್ರಿಯರಾಗಿಸಿದ್ದಾರೆ.

ಡಿ ನೋಟಿಫಿಕೇಶ್ ಕರಾಮತ್ತು

ಎಡವಟ್ಟು ಯಡ್ಡಿ ಮಹಾತ್ಮನ ಕಾಲದ ಲೋಕವಿ... ಡಿನೋಟಿಫಿಕೇಶ್ ಪರ್ವದಲ್ಲಿ ವೀರೇಂದ್ರ ಹೆಗ್ಗಡೆಗೂ ಕ... ತಟ್ಟಿದೆ! ಯಡ್ಡಿ ಬೆಂಗಳೂರಿನ ಯಲಹಂಕ ಹೋಬ... 36.10 ಎಕರೆ ಭೂಮಿಯನ್ನು 2010... ಡಿನೋಟಿಫಿಕೇಷನ್ ಮಾಡಿ ಹೆಗ್ಗಡೆಜೀಯ ಎಸ್‌ಡಿ... ಎಜುಕೇಷನ್ ಸೊಸೈಟಿಗೆ 'ಕಾಣಿಕೆ'ಯಾಗಿ ಹಾಕಿದ... ಬೆಂಗಳೂರಿನ ಯಲಹಂಕ ಹೋಬಳಿಯ ಅಳ್ಳಾಳ... ಗ್ರಾಮದಲ್ಲಿ ಗೃಹಮಂಡಳಿಗೆ ಸೇರಿದ 36.10 ... ಭೂಮಿಯನ್ನು ಡಿನೋಟಿಫಿಕೇಷನ್ ಹೆಗ್ಗಡೆಗಾಗಿ ... ಮಾಡಲಾಗಿದೆ. ಇದು ಕೇಂದ್ರದ ಸಿಎಜಿ ಕೆಂಗ... ಗುರಿಯಾಗಿದೆ. ಸಿಎಜಿ ವರದಿಯಲ್ಲಿ ಕಳ್ಳಾಟ... ಗಂಭೀರವಾಗಿ ಆಕ್ಷೇಪಿಸಲಾಗಿದೆ (ಪುಟ 34, 35 ... ವರದಿ 2014) ಈ ಡಿನೋಟಿಫಿಕೇಷನ್ ರದ್ದು ಮಾಡು... ಗೃಹಮಂಡಲಿ ಕಂದಾಯ ಇಲಾಖೆಯನ್ನು ಕೋರಿದೆ. ಆದ... ಹೆಗ್ಗಡೆ ಮತ್ತೇನೂ ಆಗಿಲ್ಲವೆಂಬಂತೆ ದೇವರ ... ಪ್ರದರ್ಶಿಸುತ್ತ ತಿರುಗಾಡುತ್ತಿದ್ದಾರೆ!

ದೇವರ ಸಂಸ್ಥಾನದಲ್ಲಿ ನಡೆದ ಲ್ಯಾಂಡ್ ಲಫಡಾ... ಒಂದೆಡೆಯಾದರೆ ಮತ್ತೊಂದೆಡೆ ಹೆಗ್ಗಡೆ ... ಕುಟುಂಬದವರೂ ಭೂಖ್ಯಾತನಾಮದಲ್ಲಿ ಭಾಗಿಯಾಗಿದ... ಸಾಕ್ಷಾತ್ ವೀರೇಂದ್ರ ಹೆಗ್ಗಡೆ, ಆತನ ಧರ್ಮಪತ್ನಿ ಹೇಮಾ... ಸುಪುತ್ರಿ ಶ್ರದ್ಧಾ, ಎಸ್‌ಡಿಎಂ ಕಾಲೇಜಿನ ಹಿಂದಿನ ... ಎಸ್. ಪ್ರಭಾಕರ್, ಆತನ ಮಡದಿ ಸರೋಜಿನಿ, ಈ... ಪ್ರಾಚಾರ್ಯ ಯಶೋವರ್ಮ ಮತ್ತಾತನ ಹೆಂ...



ಉಜಿರೆಯ ಸಿದ್ಧವನ


ಲೇವಾದೇವಿ ಲಫಡಾ!

ಧರ್ಮಸ್ಥಳದ ಧರ್ಮವ್ಯಾಪಾರಿಗಳು ನಡೆಸುವ ಎಸ್‌ಡಿಎಂ ಎಜುಕೇಷನ್ ಸೊಸೈಟಿ ಆದಾಯಕರ ಮತ್ತು ಮನಿಲ್ಯಾಂಡರಿಂಗ್ ಕಾಯ್ದೆಯನ್ನು ಪ್ರಜ್ಞಾಪೂರ್ವಕವಾಗೇ ಧಿಕ್ಕರಿಸಿದ ಹಲವು ನಿದರ್ಶನಗಳು ಬಹಿರಂಗವಾಗುತ್ತಿವೆ. ಬೇನಾಮಿ ಊಹಾತ್ಮಕ ಹಕ್ಕು ಸೃಷ್ಟಿ ಮಾಡಿ ಹೆಗ್ಗಡೆ ಒಡೆತನದ ಎಸ್‌ಡಿಎಂ ಶಿಕ್ಷಣ ಸೊಸೈಟಿ ಕೋಟ್ಯಂತರ ರೂ. ಜಾಗ ಕಬಳಿಸಿರುವ ಕತೆ ಕುತೂಹಲಕರವಾಗಿದೆ.

ಉಜಿರೆಯ ದಿವಂಗತ ಅಂತಾಜಿ ಹೆಗ್ಡೆಗೆ ಸೇರಿದ 9.78 ಎಕರೆ ಜಾಗಕ್ಕೆ ಆತ ಮಕ್ಕಳಿಗಷ್ಟೇ ಹಕ್ಕು ಬರುತ್ತದೆ. ಆದರೆ ಧರ್ಮಸ್ಥಳದ ಭರತ್‌ರಾಜ್ ಎಂಬಾತ ದೇವದೂತರ ಕುಮ್ಮಕ್ಕಿನಿಂದ ಸದ್ರಿ ಆಸ್ತಿಯಲ್ಲಿ ತನಗೂ ಹಕ್ಕಿದೆ ಎಂದು ಕ್ಯಾತೆ ತೆಗೆಯುತ್ತಾನೆ. ಊಹಾತ್ಮಕ-ಹಕ್ಕು ಸೃಷ್ಟಿಸಿ ಪಾಲಿಗೆ ಪಟ್ಟು ಹಿಡಿಯುತ್ತಾನೆ. 5/6 ಹಕ್ಕನ್ನು 23 ಲಕ್ಷಕ್ಕೆ ಖರೀದಿಸುತ್ತಾನೆ. ಆದರೆ ಇದರ ಮ್ಯೂಟೇಷನ್-ಹಕ್ಕು ಬದಲಾವಣೆಗೆ ಬೆಳ್ತಂಗಡಿ ತಹಸೀಲ್ದಾರ್ ಒಪ್ಪುವುದಿಲ್ಲ.

ದೇವರ ಪ್ರಭಾವ-ಲಾಬಿ ನಾಜೂಕಾಗಿ ರಹಸ್ಯವಾಗಿ ನಡೆಯುತ್ತದೆ! ರಾಜಿ ಪಂಚಾಯ್ತಿಕೆ ಆಗುತ್ತದೆ. 18 ಡಿಸೆಂಬರ್ 2013ರಂದು 1/3 ಹಕ್ಕನ್ನು ಭರತ್‌ರಾಜ್ ರೂ. 3.10 ಕೋಟಿಗೆ ಖರೀದಿಸುತ್ತಾನೆ. ಇಷ್ಟು ದೊಡ್ಡ ಮೊತ್ತದ ಹಣ ಜಾಗವನ್ನು ಭರತ್‌ರಾಜ್ ಖರೀದಿಸಿದ ಮರುಕ್ಷಣವೇ ಎಸ್‌ಡಿಎಂ ಸೊಸೈಟಿಗೆ ಕರಾರು ಹಾಕಿಕೊಡುತ್ತದೆ. ಕರಾರು ಏನೆಂದರೆ ಸದ್ರಿ, ಸದ್ರಿ ಜಾಗ ಮುಟ್ಟುಗೋಲು ಪುತ್ತೂರು ಎಸಿ ಆದೇಶವೂ ಮಾಡಿದ್ದಾರೆ. ಆದರೆ ಒತ್ತಡಕ್ಕೆ ಬಗ್ಗಿದ ಎಸಿ ಆನಂತರ ತನ್ನ ಆದೇಶಕ್ಕೆ ತಿದ್ದುಪಡಿ ಮಾಡಿದ್ದಾರೆ.

ಇಡೀ ಪ್ರಕರಣದಲ್ಲಿ ದೇವದೂತರು ಪಕ್ಕಾ 420 ಕರಾಮತ್ತು ನಡೆಸಿದ್ದಾರೆ. ಕ್ರಿಮಿನಲ್ ಲ್ಯಾಂಡ್ ಬ್ರೋಕರ್‌ಗಳಂತೆ ವರ್ತಿಸಿದ್ದಾರೆ. ಆದಾಯಕರ ಕಾಯ್ದೆ ಮನಿ ಲ್ಯಾಂಡರಿಂಗ್ ನಿಯಮ, ಕರಾರು ಕಾನೂನುಗಳೆಲ್ಲ ಬುದ್ಧಿಪೂರ್ವಕವಾಗೇ ಸಾಕು ಅಷ್ಟನ್ನ ಪರ್ಯಂತ ಕ್ಷಿಪ್ರವಾಗಿ ಸ್ವಾಧದಲ್ಲಿರಲು. ಈ ಪ್ರಕರಣ ತನಿಖೆಗೆ ಒಳಪಡಿಸೋ ತಾಕತ್ತು ಯಾರಿಗಿದೆ?




ಸಮಾಜ ಮಂದಿರ ಕಟ್ಟಡ ಸಮಿತಿ, ಬೆಳ್ತಂಗಡಿ ದ. ಕ.

ಪದ್ಮ ಪ್ರಶಸ್ತಿಗೆ ಪಂಗನಾಮ!!

ಧರ್ಮಸ್ಥಳದ ದೊರೆ ಯಾರೇ ಕೂಗಾಡಲಿ; ಯಾರೇ ಹೋರಾಡಲಿ. ನಸ್ಸ ಪದ್ಮಾಸನಕ್ಕೆ ಭಂಗವಿಲ್ಲದಂತೆ ಕುಳಿತುಬಿಟ್ಟಿದ್ದಾನೆ. ಧರ್ಮವ್ಯಾಪಾರಿಗೆ ಕೇಂದ್ರ ಸರ್ಕಾರದಿಂದ ಬಂದಿರುವ ಪದ್ಮಭೂಷಣಕ್ಕೂ ಈಗ ಸಂಚಕಾರ ಬರುವಂತಾಗಿದೆ. ನ್ಯಾಯಾಲಯದಲ್ಲಿ ನಡೆಯುತ್ತಿರುವ ದಾವೆಗಳಲ್ಲಿ ದೊರೆ ತನ್ನ ಹೆಸರಿನ ಹಿಂದೆ ಪದ್ಮಭೂಷಣ ಬಳಸಿದ್ದು ಪ್ರಶಸ್ತಿ ಷರತ್ತಿನ ಉಲ್ಲಂಘನೆ ಎಂಬ ಬೊಬ್ಬೆ ಎದ್ದಿದೆ. ರಾಷ್ಟ್ರಪತಿ, ಪ್ರಧಾನಿಗಳಿಗೂ ದೂರು ಹೋಗಿದೆ.

ತಗಾದೆ-ತಂಟೆಗಳಿರುವ ಪ್ರಶಸ್ತಿ ತೋರಿಸಿ ನ್ಯಾಯ ನೀಡುವವರ ಪ್ರಭಾವಿತಗೊಳಿಸಬಾರದೆಂಬ ಸ್ಪಷ್ಟ ನಿರ್ದೇಶನ ಸುಪ್ರೀಂಕೋರ್ಟ್ ನೀಡಿದೆ. ಹೀಗಿರುವಾಗ ಧರ್ಮ ಸಂಸ್ಥಾನ ದೊರೆ ಬೇಕೆಂದೇ ಪದ್ಮಭೂಷಣ ಬಳಸುತ್ತಿದ್ದಾನೆ. ಈ ಬಗ್ಗೆ ದೂರು ಇನ್ನೂ ಇತ್ಯರ್ಥವಾಗದಿರುವಾಗಲೇ ಚೆಡ್ಡಿ ಸರ್ಕಾರ ಮತ್ತೊಂದು ಪದ್ಮಪುರಸ್ಕಾರ (ಪದ್ಮವಿಭೂಷಣ) ನೀಡಿದೆ. ಧರ್ಮದಂಧೆದಾರನ ಪ್ರಶಸ್ತಿ ನಿಯಮ ಕಡೆಗಣನೆ ಕೇಂದ್ರ ಸರ್ಕಾರಕ್ಕೇಕೆ ಕಾಣಿಸುತ್ತಿಲ್ಲ.



ನಿಯಾ ವರ್ಮಾ ಹಾಗು ಹೆಗ್ಗಡೆಯ ಹೆಸರಾಂತ ೇದರ ಕಂ ಧರ್ಮ ಸಾಮ್ರಾಜ್ಯದ ಅನಭಿಷಕ್ತ ದೊರೆ ೇಂದ್ರ ಹೆಗ್ಗಡೆ ಭೂಸುಧಾರಣಾ ಕಾಯ್ದೆ ಕೇರ್ ಮಾಡದೆ ಬಿಟ್ಟಿಯಾಗಿ ಬೇಕಷ್ಟು ಭೂಮಿ ಕೊಂಡುಕೊಂಡಿದ್ದಾರೆ. ಬಗ್ಗೆ ಜಿಲ್ಲಾಧಿಕಾರಿಗಳಿಗೂ ದೂರು ಹೋಗಿದೆ. ತನಿಖೆ ವಾಗಿದೆ. ಹೆಗ್ಗಡೆ ಪರಿವಾರ ತಿಪ್ಪರಲಾಗ ಹಾಕುತ್ತಿದೆ, !

ಭೂದಾಹಿ ಹರ್ಷೇಂದ್ರ

ಧರ್ಮಸಂಸ್ಥಾನದ ಪ್ರಸ್ನಾತೀತ ಸುಲ್ತಾನ್ ಹರ್ಷೇಂದ್ರ ೆ ಧರ್ಮಾಧಿಕಾರಿಗಳ ಅಚ್ಚುಮೆಚ್ಚಿನ ತಮ್ಮ. ಈತ ದ ಗೆರೆ ಸಂಸ್ಥಾನದವರಷ್ಟೇ ಅಲ್ಲ ಅಣ್ಣಯ್ಯನೂ ಲಾರ. ಅಂಥ ಧಡತ್‌ಶಾಹಿ ಈ ಹರ್ಷಣ್ಣ. ಈ ನಿಗೆ ನಾನಾ ನಮೂನೆಯ ದಾಹ. ಕಂಡ-ಕಂಡ ು ನುಂಗುವ ಚಟ. ನಾಲ್ಕೂವರೆ ಸಾವಿರ ಎಕರೆಯ ಸಾಮ್ರಾಜ್ಯದ ಹೆಗ್ಗಡೆ ಕುಟುಂಬದ ಕುಡಿಯಾದರೂ ಬಡವನೆಂದು ಈತ ಸರ್ಕಾರಿ ಜಮೀನಿಗೆ ಗೆಯೊಡ್ಡಿರುವುದು ನಾಚಿಕೆಗೇಡು. ತಾನು ಭೂರಹಿತ ರ್ಜಿತ ಆಸ್ತಿ ಇಲ್ಲದವನೆಂದು ಹೇಳಿ ಸರ್ಕಾರಿ ದರ್ಖಾಸ್ತು ೀನಿಗೆ ಅರ್ಜಿ ಹಾಕಿದ್ದ ಹರ್ಷನಿಗೆ ಧರ್ಮಸ್ಥಳದ ಬ್ಯರಸ್ತೆ ಪಕ್ಕವೇ 7.59 ಎಕರೆ ಸರ್ಕಾರಿ ಸ್ಥಳ ಸ್ಯಾಂಕ್ಷನ್ ೆ.

ತಮ್ಮ ಬಡವ, ಆತನ ವಾರ್ಷಿಕ ಆದಾಯ 12,000 ಮೀರದೆಂದು ಅಣ್ಣ ವೀರೇಂದ್ರ ಹೆಗ್ಗಡೆಯೂ ಒಪ್ಪಿಗೆ ೆಸಿದ್ದಾರೆ. ಅಣ್ಣನ ಭೂರಹಿತ ಸರ್ಟಿಫಿಕೇಟಿನ ಆಧಾರ ತ್ತ ಪ್ರಭಾವದಿಂದ ತಮ್ಮನಿಗೆ ಕೋಟ್ಯಂತರ ರೂ. ು ಜಾಗ ಸಲೀಸಾಗಿ ಸಿಕ್ಕಿದೆ. ಈ ಅಕ್ರಮದಲ್ಲಿ ದ್ದಿರುವ ಹರ್ಷೇಂದ್ರ ಬಚಾವಾಗಲು ತಿಣುಕುತ್ತಿದ್ದಾನೆ. ನಿರ್ಗತಿಕನೆಂದು ದರ್ಖಾಸ್ತು ಭೂಮಿ ಮಂಜೂರಿ ೆಸಿಕೊಂಡಿರುವ ಹರ್ಷೇಂದ್ರ ಧರ್ಮಸ್ಥಳದ ಪೆಟ್ರೋಲ್ ಮಾಲೀಕನಾಗಿರುವುದು ಮೋಜಾಗಿದೆ. ಈ ಗೂ ಅಕ್ರಮವಾಗೇ ಸರ್ಕಾರಿ ಜಾಗ ಸ್ಯಾಂಕ್ಷನ್ ೆಸಿಕೊಂಡಿದ್ದಾರೆ. ಆಯಕಟ್ಟಿನ ಅಧಿಕಾರಿಗಳ ಸಖ್ಯದ ೇಂದ್ರನಿಗೆ 0.30 ಎಕರೆ ಸಿಕ್ಕರೂ ತೃಪ್ತಿಯಿಲ್ಲ. ಚಿಯ ರಸ್ತೆಯ ಜಾಗ, ಅರಣ್ಯ ಭೂಮಿಯನ್ನೆಲ್ಲ ಸಿರುವ ಈತ ವಿಶಾಲ ಬಂಕ್ ಮಾಡಿಕೊಂಡು ಲಕ್ಷ- ದೋಚುತ್ತಿದ್ದಾನೆ. ಯಾತ್ರಿಕರಿಂದ ಗಿಜಿಗುಡುವ ರ್ಮಸ್ಥಳದ ಪೆಟ್ರೋಲ್ ಬಂಕ್‌ಗೆ ಆಗುವ ವ್ಯಾಪಾರ- ಲೀಕನಿಗೆ ಸಿಗುವ ಲಾಭ ನೀವೇ ಯೋಚಿಸಿ!!

ಹರ್ಷೇಂದ್ರ ಗಣಿಧಣಿಯೂ ಹೌದು. ಧರ್ಮಸ್ಥಳದ ನಂಬರ್ 261ರಲ್ಲಿ ಒಂದು ಎಕರೆ ಜಾಗದಲ್ಲಿ ಗಣಿಗಾರಿಕೆ ನಡೆಸುತ್ತಿದ್ದಾನೆ. ಇದಕ್ಕಾತ ಪ್ರತಿ ವರ್ಷ ಬಾಡಿಗೆಯೆಂದು ಬರೀ 3500 ರೂ. ಸರ್ಕಾರಕ್ಕೆ ುತ್ತಿದ್ದಾನೆ. ಇದೊಂದು ಅಕ್ರಮ ಗಣಿ. ಪರಿಸರ ನಿಯಮ ರಿ ನಡೆಯುತ್ತಿರುವ ಈ ಗಣಿಯ ಸ್ಫೋಟಗಳು ಾತಕವಾಗಿದೆ. ವಿಪರ್ಯಾಸವೆಂದರೆ, ಅರಣ್ಯ ಇಲಾಖೆಯ ಜಾಗವನ್ನು ಕಂದಾಯ ಇಲಾಖೆ ಲೀಸ್‌ಗೆ ಹರ್ಷೇಂದ್ರನಿಗೆ ಲಾಗಿದೆ. ದೇವರನಾಡಿನ ಪಾರುಪತ್ಯಗಾರರ ಮೊಯಿದು!!

ಸಮಾಜ ಮಂದಿರ v/s ಕಲಾಭವನ

ಜನಸಾಮಾನ್ಯರ ಸುಲಿವ-ಶೋಷಿಸುವ ದಂಧೆಗಳಿಲ್ಲ ರ್ಮಸಂಸ್ಥಾನದ ಸರದಾರರಿಗೆ ಕರಗತವಾಗಿ ಹೋಗಿವೆ! ಗಡಿಯ ಬಡವರಿಗೆ ಕಡಿಮೆ ಬಾಡಿಗೆಗೆ ಸಿಗುತ್ತಿದ್ದ ಾಜ ಮಂದಿರದ ಕಟ್ಟಡ ಕೆಡವಿ ಮಂಜುನಾಥ ಸ್ವಾಮಿ ಭವನ ಕಟ್ಟಿ ಹೆಗ್ಗಡೆ ಪರಿವಾರ ದುಬಾರಿ ಬಾಡಿಗೆ ಸುತ್ತಿರುವುದೇ ಇದಕ್ಕೆ ಜೀವಂತ ಸಾಕ್ಷಿಯಂತಿದೆ. ಗಡಿ ಸಮಾಜಮಂದಿರ ಬಿಲ್ಡಿಂಗ್ ಸೊಸೈಟಿ (ರಿ)ಗೆ ೇಂದ್ರ ಹೆಗ್ಗಡೆ ಅಧ್ಯಕ್ಷರು. ಸದ್ರಿ ಕಟ್ಟಡ ಗಟ್ಟಿಮುಟ್ಟಾಗಿತ್ತು, ಟ್ಟಡಕ್ಕೆ 1968ರಲ್ಲಿ ಸರ್ಕಾರಿ ಜಾಗ ಮಂಜೂರಾಗಿತ್ತು, ಿಪರ ಈ ಸಭಾಭವನ ಕಂಡು ಹೆಗ್ಗಡೆಜೀಗೆ ಿತ್ತೋ?

ಇದ್ದಕ್ಕಿದ್ದಂತೆ ಅದನ್ನು ಕೆಡವಿ ತನ್ನ ಒಡೆತನದ ಶಾಂತಿವನ ಟ್ರಸ್ಟ್ ವತಿಯಿಂದ ಲಾಭದಾಯಕ ಬಿಲ್ಡಿಂಗ್ ಕಟ್ಟುವ ನಿರ್ಧಾರಕ್ಕಾತ ಏಕಪಕ್ಷೀಯವಾಗಿ ಬಂದು ಬಿಟ್ಟರೆಂದು ಬೆಳ್ತಂಗಡಿಯ ಹಿರಿಯರು ನೊಂದುಕೊಳ್ಳುತ್ತಾರೆ. ಹಿಂದಿನ ಬಿಲ್ಡಿಂಗ್ ಸೊಸೈಟಿ ಖರೀದಿ ಕರಾರು ಮಾಡಿಕೊಂಡ ಜಾಗದಲ್ಲಿನ 20 ಸೆಂಟ್ಸ್ ಪ್ರದೇಶವನ್ನು ಹೆಗ್ಗಡೆಯ ಶಾಂತಿವನ ಟ್ರಸ್ಟ್‌ಗೆ ಮತ್ತೆ ನೋಂದಾವಣೆ ಮಾಡಲಾಗಿದೆ. ಇದು ನಿಯಮಬಾಹಿರ. ಅಷ್ಟೇ ಅಲ್ಲ, ದೊಡ್ಡ ಅಪರಾಧ. ಮೂಲ ಷರತ್ತಿಗೆ ತದ್ವಿರುದ್ಧ. ಇದೆಲ್ಲಕ್ಕಿಂತಲೂ ದೊಡ್ಡ ದುರಂತವೆಂದರೆ, ಕಡಿಮೆ ಬಾಡಿಗೆಗೆ ಜನಸಾಮಾನ್ಯರಿಗೆ ಸಿಗುತ್ತಿದ್ದ ಸಮಾಜಮಂದಿರ ಇಲ್ಲವಾಗಿದೆ; ದುಬಾರಿ ಬಾಡಿಗೆಯ ಹೆಗ್ಗಡೇಜಿಯ ಕಲಾಭವನಕ್ಕೆ ಅನಿವಾರ್ಯವಾಗಿ ಜನ ಹೋಗಿ ಹಾನಿಮಾಡಿಕೊಳ್ಳಬೇಕಾಗಿದೆ. ಇದು ಧರ್ಮ ಸಂಸ್ಥಾನದ ದೇವಧೂತರ ಶೋಷಣೆಯ ಅಸಲಿ ಮುಖ!!

ದೋಖಾ ದೇವಸ್ಥಾನೋದ್ಯಮ!!

ಕೋಟಿ-ಕೋಟಿ ಮೊತ್ತದ ಸ್ಥಿರ-ಚರ ಆಸ್ತಿಗಳ ಧರ್ಮಸ್ಥಳ ದೇವಸ್ಥಾನ ಹೆಗ್ಗಡೆಯ ಖಾಸಗಿ ಆಡಳಿತದಲ್ಲಿದೆ! ಒಂದು ಸರಳ ಲೆಕ್ಕಾಚಾರ ಅಂದಾಜಿನಂತೆ ಮಂಜುನಾಥ ಸ್ವಾಮಿ ಮತ್ತವನ ಪರಿವಾರದ ದೇವ-ದೈವಗಳ ಒಟ್ಟು ಆದಾಯ ವರ್ಷಕ್ಕೆ 400 ರಿಂದ 500 ಕೋಟಿ ರೂಪಾಯಿಗಳು!! ಆದರೆ ಧರ್ಮಸ್ಥಳದ ಇತಿಹಾಸದಲ್ಲಿ ವೀರೇಂದ್ರ ಹೆಗ್ಗಡೆಯಾಗಲಿ ಆತನ ಪೂರ್ವಿಕರಾಗಲಿ ಉತ್ಪನ್ನ ಬಹಿರಂಗಪಡಿಸಿದ್ದೇ ಇಲ್ಲ.

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ-1997 ಪ್ರಕಾರ ಹಾಗು 2011ರಲ್ಲಿ ರಾಜ್ಯ ಸರ್ಕಾರದ ತಿದ್ದುಪಡಿ ಪ್ರಕಾರ ಧರ್ಮಸ್ಥಳ ದೇವಸ್ಥಾನ 'ಸಾರ್ವಜನಿಕ' ಆಗುತ್ತದೆ. ಸಾರ್ವಜನಿಕ ಕಾಣಿಕೆ-ದೇಣಿಗೆ ಪಡೆಯುವ ಈ ದೇಗುಲವನ್ನು ಕಾಯ್ದೆಯಂತೆ ಧಾರ್ಮಿಕ ಪರಿಷತ್ ಮೇಲ್ವಿಚಾರಣೆಗೆ ತರಬೇಕಾಗಿದೆ. ಕಾಯ್ದೆ ಸೆಕ್ಷನ್ 53ರ ಪ್ರಕಾರ ಖಾಸಗಿ ದೇವಸ್ಥಾನಗಳೂ ಆಸ್ತಿ-ಆದಾಯ-ವೆಚ್ಚವನ್ನು ಸರ್ಕಾರಕ್ಕೆ ಸಲ್ಲಿಸುವುದು,


ಧರ್ಮಸಂಸ್ಥಾನ ವಶದಲ್ಲಿರುವ ಅಕ್ರಮ ಭೂಮಿ

ಸಾರ್ವಜನಿಕವಾಗಿ ಘೋಷಿಸುವುದು ಕಡ್ಡಾಯ. ಹಾಗಾದರೆ ಇಷ್ಟು ವರ್ಷದ ದೇವರ ದುಡ್ಡು 'ಸದ್ವಿನಿಯೋಗ' ಆಗಿರುವುದು ಬಯಲಾಗಲಿದೆ.

ಮೀಟರ್ ಬಡ್ಡಿ ಬ್ಯಾಂಕ್

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಎಂಬ ಲೆಕ್ಕವಿಲ್ಲದಷ್ಟು ಕೋಟಿಗಳ ಮಾಪನದಲ್ಲಿ ಹಣ-ಅನುದಾನ ತರುವ 'ಯೋಜನೆ'ಯೊಂದನ್ನು ಹೆಗ್ಗಡೆ ಬಳಗ ತುಂಬ ವ್ಯವಸ್ಥಿತವಾಗಿ ನಡೆಸುತ್ತಿದೆ. ಈ ಯೋಜನೆಗೆ ಒಳಪಡುವ ಸ್ವಸಹಾಯ ಸಂಘಗಳು, ಇನ್ನಿತರ ಸಂಸ್ಥೆಗಳಲ್ಲಿ ಶೋಷಣೆ ತುಂಬ ನಾಜೂಕಾಗಿ ನಡೆಯುತ್ತಿದೆಯೆಂಬ ಪುಕಾರು ಲಾಗಾಯ್ತಿನಿಂದಲೂ ಇದೆ. ಧರ್ಮಾಧಿಕಾರಿಯ ಕಾಲಿಗೆರಗುವ ದಾಸ್ಯದ ಕಲೆಯಿಲ್ಲಿ ಹೇಳಿಕೊಡಲಾಗುತ್ತದೆ. ಹಾಗಾಗಿಯೇ ಇದೊಂದು 'ಗುಲಾಮಾಭಿವೃದ್ಧಿ' ಯೋಜನೆ ಎಂದು ತಮಾಷೆ ಮಾಡಲಾಗುತ್ತಿದೆ.

ಶೇಕಡಾ 80ರಷ್ಟು ಅನುದಾನದ ಕೃಷಿ ಉಪಕರಣಗಳನ್ನು ರೈತರಿಗೆ ಬಾಡಿಗೆಗೆ ಕೊಡಲಾಗುತ್ತಿದೆ. ಇದರಿಂದ ಸರ್ಕಾರಕ್ಕೆ ಹಾನಿಯೇ ಜಾಸ್ತಿ, ಆರ್ಥಿಕವಾಗಿ ಸೊರಗಿರುವ ಗ್ರಾಮ ಪಂಚಾಯ್ತಿ ಅಥವಾ ಕೃಷಿ ಇಲಾಖೆ ಮೂಲಕವೇ ಕೃಷಿ ಯಂತ್ರೋಪಕರಣ ಕೃಷಿಕರಿಗೆ ಕೊಡುವಂತಾದರೆ ಗುಲಾಮಾಭಿವೃದ್ಧಿಯವರ ಏಕಸ್ವಾಮ್ಯದ ಕಿರಿಕಿರಿ ತಪ್ಪುತ್ತದೆ. ಈ ಯೋಜನೆಯ ಅವಶ್ಯಕತೆ ತರಹೇವಾರಿ ಲಾಭದಾಯಕ ದಂಧೆ ನಡೆಸುತ್ತಿರುವ ಧರ್ಮದೇವತೆಗಳಿಗೂ ಇಲ್ಲ ಬಿಡಿ. ಗ್ರಾಮಾಭಿವೃದ್ಧಿ ಯೋಜನೆ ಹೆಸರಲ್ಲಿ ಮೀಟರ್ ಬಡ್ಡಿ ಮೈಕ್ರೋಫೈನಾನ್ಸ್ ನಡೆಸಲಾಗುತ್ತಿದೆ. ತಮಾಷೆಯೆಂದರೆ ಸ್ವಸಹಾಯ ಸಂಘಗಳು ಬಡವರಿಗೆ ಶೇಕಡಾ 18 ಬಡ್ಡಿ ದರದಲ್ಲಿ ಸಾಲ ನೀಡುವುದೇ ಗ್ರಾಮಾಭಿವೃದ್ಧಿ ಎಂದು ಪೂಜ್ಯ ಹೆಗ್ಗಡೆಜೀ ಪ್ರತಿಪಾದಿಸುತ್ತಿದ್ದಾರೆ. 5 ವಿದೇಶಿ ಅನುದಾನ ಸಂಸ್ಥೆಗಳು ಹಾಗು ನಬಾರ್ಡ್ ಮತ್ತಿತರ ದೇಶಿ ಹಣಕಾಸು ಸಂಸ್ಥೆಗಳಿಂದ ಅನುದಾನ ಪಡೆಯುವ ಗುಲಾಮಾಭಿವೃದ್ಧಿ ಸಂಸ್ಥೆ ಅತ್ತ ದುರ್ಬಲರನ್ನು ಸುಲಿಯುತ್ತಿದೆ. ಹಲವು ಜಿಲ್ಲೆಗಳಲ್ಲಿ ಬ್ಯಾಂಕುಗಳು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಸಂಘಗಳಿಗೆ ನೇರವಾಗಿ ಸಾಲ ಕೊಡುತ್ತಿವೆ. ಈ ಲೇವಾದೇವಿಗಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಗೆ ಶೇ.5 ಕಮಿಷನ್ ಕೊಡಲಾಗುತ್ತಿದೆ. ಶೇ. 14ಕ್ಕಿಂತ ಹೆಚ್ಚಿಗೆ ಬಡ್ಡಿ ಪಡೆಯುವುದು ಅಪರಾಧ!

ಈ ಅವ್ಯವಹಾರದ ಬಗ್ಗೆ ತುಂಬ ಹಿಂದಿನಿಂದಲೂ ಆಕ್ಷೇಪಗಳು ಕೇಳಿಬಂದರೂ ಕ್ರಮ ಕೈಗೊಳ್ಳುವವರು ಮಾತ್ರ ಯಾರೂ ಇರಲಿಲ್ಲ. ಈಗ ಸಿಎಂ ಸಾಹೇಬರೆ ಕ್ರಮಕ್ಕೆ ಆದೇಶಿಸಿದ್ದಾರೆ. **(CM/68095 REPGEN/2014 dt 22-11-14)** ಗ್ರಾಮಾಭಿವೃದ್ಧಿ ಸಂಸ್ಥೆಯ ಬ್ಯಾಲೆನ್ಸ್ ಶೀಟ್‌ನಲ್ಲೇ 89.80 ಕೋಟಿ ಲಾಭ ಕಾಣಿಸುತ್ತಿದೆ. ಸುಲಿಗೆ ಯಾವ ಪ್ರಮಾಣದಲ್ಲಿ ಇರಬಹುದೆಂದು ಅರ್ಥವಾಯ್ತಾ?

ವಿಶ್ವಬ್ಯಾಂಕ್ ಕಾಸಿಗೆ ಕಳ್ಳಾಟ!

ಧರ್ಮ ಸಂಸ್ಥಾನದ ಶಿಕ್ಷಣ ಸಂಸ್ಥೆಗಳಲ್ಲಿ ಕಾಣಿಕೆ-ದೇಣಿಗೆ ಪದ್ಧತಿಯನ್ನು ದೇವಸ್ಥಾನದೊಳಗಿನ ಮಾದರಿಯಲ್ಲೇ ಜಾರಿಗೆ ತರಲಾಗಿದೆ. ಶಿಕ್ಷಣ ಸಂಸ್ಥೆಯ ಕಟ್ಟಡಕ್ಕೂ ನಡೆದ ಭೂಭಾನ್ಗಡಿಗಳು, ಕಬಳಿಕೆಗಳು ಹೇಳತೀರದು. ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಅನುದಾನಕ್ಕಾಗಿ ಖೋಟಾ ದಾಖಲೆ ಸೃಷ್ಟಿಸಿ ಕಾಸು ಕೂಡಿಸಿದ ಕುತೂಹಲ ಕತೆಗಳು ಚಾಲ್ತಿಯಲ್ಲಿವೆ. ಅದಕ್ಕೊಂದು ಉದಾಹರಣೆ ಎಂದರೆ ಧಾರವಾಡದ ಎಸ್‌ಡಿಎಂ ಇಂಜಿನಿಯರಿಂಗ್ ಕಾಲೇಜಿನಲ್ಲಾದ ಗೋಲ್‌ಮಾಲ್.

ವಿಶ್ವಬ್ಯಾಂಕ್ ನೆರವಿನ ಬರೋಬ್ಬರಿ 1.60 ಕೋಟಿ ಅನುದಾನ ಹೊಡೆಯಲು ವಿದ್ಯಾರ್ಥಿಗಳ ಸುಳ್ಳು ಹಾಜರಾತಿ, ಮತ್ತಿತರ ಖೋಟಾ ದಾಖಲೆ ಧಾರವಾಡದ ಎಸ್‌ಡಿಎಂ ಇಂಜಿನಿಯರಿಂಗ್ ಕಾಲೇಜಿನ ಆಡಳಿತಗಾರರು ಸೃಷ್ಟಿಸಿದ್ದಾರೆ. ಇದಕ್ಕೆ ಧರ್ಮ ಸಂಸ್ಥಾನದಿಂದಲೇ ನಿರ್ದೇಶನ ಬಂದಿತ್ತು. ಸದ್ರಿ ಕಾಲೇಜಿನಲ್ಲಿ 30 ವರ್ಷ ಕಾಲ ಸೇವೆ ಸಲ್ಲಿಸಿರುವ ಪ್ರೊಫೆಸರ್ ಒಬ್ಬರು ದಾಖಲೆ ಸಮೇತ ದೂರು ಕೊಟ್ಟಿದ್ದಾರೆ. ಹುಬ್ಬಳ್ಳಿಯ ಪೀಪಲ್ಸ್ ಆಕ್ಷನ್ ಕಮಿಟಿ ಅಕ್ಟೋಬರ್ 2014ರಲ್ಲಿ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದೆ. ತನಿಖೆ ನಡೆಯುತ್ತಿದೆ. ವಿವರ ವೆಬ್‌ಸೈಟ್‌ನಲ್ಲಿದೆ. ಧರ್ಮ ವ್ಯಾಪಾರಿಗಳ ಶಿಕ್ಷಣ ದಂಧೆಯ ಧೋರಣೆ ಅರ್ಥವಾಯ್ತಾ?

ಇಂಥ ದೇವರ ಭಯದ ಬಿಸ್ನೆಸ್‌ಗಳು ಧರ್ಮಸ್ಥಳ ರಿಪಬ್ಲಿಕ್‌ನಲ್ಲಿ ಕಿದಕಿದಷ್ಟೂ ಉಕ್ಕುತ್ತವೆ! ಬೆಳ್ತಂಗಡಿ ತಾಲೂಕಿನ ಜನರೀಗ ಬಂಡೆದ್ದಿದ್ದಾರೆ. ಧರ್ಮಸಂಸ್ಥಾನ ಮತ್ತದರ ದೊರೆಗಳ ದೋಖಾ-ದೌರ್ಜನ್ಯ-ದಗಾ-ದಗಲಬಾಜಿತನದ ತನಿಖೆಯಾಗಲೆಂದು ಜನ ಹೇಳುತ್ತಿದ್ದಾರೆ. ಇದರಿಂದ ಕಂಗಾಲಾಗಿರುವ ದೇವರ ಧೂತರು ಕಾವಿಗಳನ್ನು ಮತ್ತು ಗುಲಾಮಾಭಿವೃದ್ಧಿ ಸಂಘದ ಅಮಾಯಕರನ್ನು ಬೀದಿಗೆ ಬಿಡುತ್ತಿದ್ದಾರೆ. ಅಪಪ್ರಚಾರ ಮಾಡಲಾಗುತ್ತಿದೆ ಎಂದು ಭೋಂಗು ಬಿಡುತ್ತಿದ್ದಾರೆ. ತಮ್ಮ ಕರ್ಮಕಾಂಡ ಮುಚ್ಚಿಕೊಳ್ಳಲು ಕೆಲವು ದಿನಗಳ ಹಿಂದೆ ಗುರುವಾಯನಕೆರೆಯಲ್ಲಿ ಧರ್ಮಾಧಾರಿತ ಪ್ರತಿಭಟನೆ ಹೆಗ್ಗಡೆ ಬಳಗದಿಂದ ನಡೆದಿತ್ತು. ಆದರೆ ಈ ಬಚಾವ್ ಸಭೆಗೆ ಬೆಳ್ತಂಗಡಿ ಜನರಷ್ಟೇ ಅಲ್ಲ ಯಾವ ಶಾಸಕ-ಸಂಸದ, ಮಂತ್ರಿಯೂ ಹೋಗಿರಲಿಲ್ಲ.

ಕಾಸು ಕೊಟ್ಟು ಜನರನ್ನು ಸೇರಿಸಿ ರೋಡ್‌ಶೋ ಮಾಡುವ ಮೂಲಕ ಅಪರಾಧಗಳನ್ನು ಮುಚ್ಚಿಕೊಳ್ಳಲು ಧರ್ಮಾತ್ಮರು ಪ್ರಯತ್ನಿಸುತ್ತಿದ್ದಾರೆ. ತನಿಖಾಧಿಕಾರಿಗಳ, ನ್ಯಾಯಾಲಯದ, ಸಾರ್ವಜನಿಕ ದಿಕ್ಕು ತಪ್ಪಿಸುವ ಕಿತಾಪತಿಯಿದು. ಪಾತಕದ ಸಾಕ್ಷಿ-ಪುರಾವೆ ಗೌಣವಾಗಿಸಲು ದೇವರು-ಧರ್ಮ-ಕಾವಿ-ಕರ್ಮ ಬಳಸಲಾಗುತ್ತಿದೆ. ಆದರೆ ಬೆಳ್ತಂಗಡಿಯ ಜನರಿಗೆ ಸೌಜನ್ಯ ರೇಪ್ ಅಂಡ್ ಮರ್ಡರ್ ನಂತರ ಧರ್ಮಸ್ಥಾನದ ಬಗ್ಗೆ ನಂಬಿಕೆಯೇ ಇಲ್ಲವಾಗಿದೆ. ಐದು ಹಕ್ಕೊತ್ತಾಯ ಇಟ್ಟುಕೊಂಡು ರ್‍ಯಾಲಿ ನಡೆಸಲು ಬೆಳ್ತಂಗಡಿ ಜನರು ರೆಡಿಯಾಗುತ್ತಿದ್ದಾರೆ.

ಕಾನೂನುಬಾಹಿರವಾಗಿ ಹೆಗ್ಗಡೆ ಪರಿವಾರ ವಶಪಡಿಸಿಕೊಂಡಿರುವ 1500-2000 ಎಕರೆ ಭೂಮಿ ಸರ್ಕಾರ ವಶಪಡಿಸಿಕೊಂಡು ಬಡವರಿಗೆ ಹಂಚಬೇಕು; ಗ್ರಾಮಾಭಿವೃದ್ಧಿ ಹೆಸರಲ್ಲಿ ನಡೆಯುವ ಮೈಕ್ರೋಫೈನಾನ್ಸ್ ನಿಲ್ಲಿಸಬೇಕು ಮತ್ತು ಸರ್ಕಾರಿ ಆದೇಶಕ್ಕೆ ವಿರುದ್ಧವಾಗಿ ಪಡೆದ ಹೆಚ್ಚುವರಿ 5% ಬಡ್ಡಿ ಹಿಂತಿರುಗಿಸಬೇಕು. ಸಿಬಿಐಗೆ ವಹಿಸಿದರೂ ನಿಧಾನವಾಗಿ ಸಾಗುತ್ತಿರುವ ತನಿಖೆ ಬಿರುಸಾಗಬೇಕು. ಮಂದಗತಿಯ ತನಿಖೆಗೆ 'ದೇವರ' ಪ್ರಭಾವವೇನಾದರೂ ಇದೆಯಾ? ಸಾರ್ವಜನಿಕ ದೇಣಿಗೆ-ಕಾಣಿಕೆ ಪಡೆವ ಧರ್ಮಸ್ಥಳ ದೇವಸ್ಥಾನ ಧಾರ್ಮಿಕ ಪರಿಷತ್ ಮೇಲ್ವಿಚಾರಣೆಗೆ ಒಳಪಡಿಸಬೇಕು. ಅದರ ಆದಾಯ-ಖರ್ಚು ಬಹಿರಂಗವಾಗಬೇಕು. ಹೆಗ್ಗಡೆ ಬಳಗದ ಭೂಸ್ವಾಹಾದ ತನಿಖೆ ನಿಷ್ಪಕ್ಷಪಾತವಾಗಿ ನಡೆಯಬೇಕು. ಹಕ್ಕೊತ್ತಾಯದ ಸಭೆ ಧರ್ಮಸ್ಥಳ ರಿಪಬ್ಲಿಕ್‌ನ ಅಸ್ತಿತ್ವ ಅಲ್ಲಾಡಿಸುವ ಸೂಚನೆ ಗೋಚರಿಸುತ್ತಿದೆ.

ಇನ್ನಾದರೂ ಧರ್ಮಾತ್ಮರು ತಪ್ಪು ಒಪ್ಪಿಕೊಂಡು ಅಸಹಾಯಕರ ಶೋಷಿಸುವುದು ನಿಲ್ಲಿಸುವರಾ? ದೌರ್ಜನ್ಯ ಬಿಟ್ಟು ನ್ಯಾಯವಾಗಿ ನಡೆಯುವರಾ? ಮನುಷ್ಯರಾಗುವರಾ? ಹಾಗಂತ ಬೆಳ್ತಂಗಡಿಯ ಜನರಷ್ಟೇ ಅಲ್ಲ; ಮಂಜುನಾಥ ಸ್ವಾಮಿಯ ಪ್ರಜ್ಞಾವಂತ ಭಕ್ತಾದಿಗಳೂ ಕೇಳುತ್ತಿದ್ದಾರೆ!! ಧರ್ಮ ಸಂಸ್ಥಾನದ ಪಾತಕಗಳ ನಿಷ್ಠೂರ ತನಿಖೆ ಮಾಡುವ ತಾಕತ್ತು ಆಳುವವರಿಗೆ ಇದೆಯಾ?

■ ವರದಿಗಾರ



ಸ್ಯಾಂಡಲ್ ಸೋಪ್ ಗಂಧದ ಗುಡಿಗೆ ಕಳ್ಳರ ಲಗ್ಗೆ!

ಸಾರ್ವಜನಿಕ ಉದ್ದಿಮೆಗಳನ್ನು ಆಧುನಿಕ ಭಾರತದ ದೇವಾಲಯಗಳೆಂದವರು ಪಂಡಿತ್ ಜವಾಹರ್‌ಲಾಲ್ ನೆಹರು. ಈಗ ರಾಜ್ಯದ ಚುಕ್ಕಾಣಿಯಿರುವುದು ಕೂಡ ಅವರದ್ದೇ ಪರಂಪರೆಯ ಕಾಂಗ್ರೆಸ್ ಸರ್ಕಾರದ ಕೈಯಲ್ಲಿ. ಇರಲಿ; ಕನಿಷ್ಠ ಆಳಿದುಳಿದ ಕೈಗಾರಿಕೆಗಳ ಅವಶೇಷಗಳನ್ನಾದರೂ ಕಾಪಾಡಬೇಕೆಂಬ ಕನಿಷ್ಠ ಪ್ರಜ್ಞೆಯಾದರೂ ಸರ್ಕಾರಕ್ಕಿದ್ದಿದ್ದರೆ ಕನ್ನಡಿಗರ ಹೆಮ್ಮೆಯ ಮೈಸೂರು ಸ್ಯಾಂಡಲ್ಲಿಗೆ ಈ ಗತಿ ಬರುತ್ತಿತ್ತೆ?

ಮೈಸೂರು ಸ್ಯಾಂಡಲ್ಲೆಂದರೆ ಅದು ಕನ್ನಡಿಗರ ಪಾಲಿಗೆ ಗಂಧದ ಗುಡಿಯಿದ್ದಂತೆ. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜಂಟ್ಸ್ ಲಿಮಿಟೆಡ್ ಅಂದರೆ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಎಂಬುದು ಮೈಸೂರು ಸೋಪಿಗೆ ಸರ್ಕಾರಿ ದೊರೆಗಳಿಟ್ಟ ಹೆಸರು. ಆದರೆ ಲೋಕವಿಖ್ಯಾತಿಯಿರುವುದು ಮೈಸೂರು ಸ್ಯಾಂಡಲ್ಲಿಗೇ!

ತಮಿಳುನಾಡಿನ ಹಳ್ಳಿಗಾಡುಗಳಲ್ಲಿ ಯಾರೇ ರೈತಾಪಿ ಹೆಣ್ಣುಮಗಳ ಮದುವೆಯೆಂದರೆ ಅಲ್ಲಿ ಮೈಸೂರು ಸ್ಯಾಂಡಲ್ ಸೋಪಿರಲೇಬೇಕು. ಮೊದಲ ರಾತ್ರಿಯ ಮೈ ಘಮಲಿಗೆ ಮೈಸೂರು ಶ್ರೀಗಂಧದ ಸೋಪೆಂಬುದು ಇವತ್ತಿಗೂ ತಮಿಳುನಾಡಿನಲ್ಲಿ ಚಾಲ್ತಿಯಲ್ಲಿರುವ ದಂತಕತೆ. ಏಕೆಂದರೆ ಮೈಸೂರು ಸ್ಯಾಂಡಲ್ಲೆಂದರೆ ಅದು ವಿಶ್ವದ ಏಕೈಕ ಅಪ್ಪಟ ಗಂಧದೆಣ್ಣೆಯಿಂದ ಮಾಡಲಾದ ಸೋಪು ಮತ್ತು ವಿಶ್ವದ ಬೇರೆಲ್ಲೂ ಅಂಥ ಸುವಾಸನೆಯಿಲ್ಲದ ಅಪ್ಪಟ ಕನ್ನಡ ಮಣ್ಣಿನ ಶ್ರೀಗಂಧದಿಂದ ಸೃಷ್ಟಿಸಲ್ಪಟ್ಟ ಈ ಭೂಮಂಡಲದ ಅಪ್ರತಿಮ ಸ್ನಾನದ ಸೋಪು.

ಗಂಧದ ಗುಡಿ

ವಿಕ್ಟೋರಿಯಾ ರಾಣಿ ಭಾರತಕ್ಕೆ ಬರುವ ಅಥವಾ ಭಾರತದಿಂದ ಬಂದ ಯಾರಿಗಾದರೂ ಮೈಸೂರು ಶ್ರೀಗಂಧ ಮತ್ತು ಮೈಸೂರು ಸ್ಯಾಂಡಲ್ ಸೋಪಿಗಾಗಿ ಗೋಗರೆಯುತ್ತಿದ್ದ ಕಾಲವೂ ಇತ್ತಂತೆ!

ಕನ್ನಡಿಗರು ಒಲಂಪಿಕ್ ಚಿನ್ನ ಗೆಲ್ಲದಿದ್ದರೇನಂತೆ ಯಾವ ಸಾಮ್ರಾಜ್ಯ ಕಟ್ಟದಿದ್ದರೇನಂತೆ. ಅದೆಲ್ಲವನ್ನೂ ಒಂದು ಮೈಸೂರು ಸ್ಯಾಂಡಲ್ ಸರಿಗಟ್ಟಬಹುದಾದರೆ ಮೈಸೂರು ಸೋಪಿನ ಕಾರ್ಖಾನೆಗಿಂತ ಕನ್ನಡಮ್ಮನ ಗುಡಿ ಬೇಕೆ? ಅಂದಹಾಗೆ ಕೆಎಸ್‌ಡಿಎಲ್‌ಗೆ ಈಗ ಎಂಡಿ ಅಂದರೆ ಮ್ಯಾನೇಜಿಂಗ್ ಡೈರೆಕ್ಟರ್ ಅರ್ಥಾತ್ ವ್ಯವಸ್ಥಾಪಕ ನಿರ್ದೇಶಕನ ಹುದ್ದೆಗೆ ಸರ್ಕಾರ ಪ್ರತಿಷ್ಠಾಪಿಸಿರುವ ಜಗದೇಕ ವೀರನ ಹೆಸರು ಕೆ. ಶವಮೂರ್ತಿ ಯಾನೇ ಕೇಶವಮೂರ್ತಿ.

ಕೇಶವಮೂರ್ತಿ ಎಂಬ ಐಎಫ್‌ಎಸ್ ಅಧಿಕಾರಿಯ ಬಗ್ಗೆ ಕೇವಲ ಔಪಚಾರಿಕ ಇಂಟ್ರೊಡಕ್ಷನ್ ಸಾಲುತ್ತಿಲ್ಲ. ಇದಕ್ಕೂ ಮುನ್ನ ತುಮಕೂರು ಜಿಲ್ಲಾ ಪಂಚಾಯ್ತಿಗೆ ಸಿಇಓ ಆಗಿದ್ದು ಪೂರ್ತಿ ಜಿ.ಪಂ. ಅನ್ನೇ ಮುಂಡಾಮೋಚಿದ ಬಗ್ಗೆ ಲೋಕಾಯುಕ್ತರು ಬೆನ್ನಟ್ಟಿ ಬಂದು ಸೋಪ್


ಖದೀಮ ಸುವರ್ಣಕುಮಾರ್ ಜೊತೆ ಎಂ.ಡಿ. ಕೇಶವಮೂರ್ತಿ

ಫ್ಯಾಕ್ಟರಿಯಲ್ಲಿದ್ದ ಕೇಶವಮೂರ್ತಿಯನ್ನು ರೇಡು ಮಾಡಬೇಕಾಯಿತು. ಲೋಕಾ ದಾಳಿಯ ವಾಸನೆ ಹತ್ತಿದ್ದೇ ಕೇಶವಮೂರ್ತಿ ಎಸ್ಕೇಪಾಗಲು ಯತ್ನಿಸಿ ಸಿಕ್ಕುಬಿದ್ದ. ಯಃಕಶ್ಚಿತ್ ಕಳ್ಳಕಾಕರು, ಡಕಾಯಿತರ ಮಾದರಿಯಲ್ಲೇ ಕೇಶವಮೂರ್ತಿಯನ್ನು ಎಳೆದೊಯ್ದು ಕೋರ್ಟ್ ಕಟಕಟೆಯಲ್ಲಿ ನಿಲ್ಲಿಸಿದ ಲೋಕಾ ಪೊಲೀಸರು ಜಾಮೀನು ಸಿಗದೇಹೋಗಿದ್ದರೆ ಜೈಲಿಗೂ ಬಿಟ್ಟು ಬರಬೇಕಾಗಿತ್ತು.

ಇಂಥಾ ಐನಾತಿ ಹಿನ್ನೆಲೆಯ ಕೇಶವಮೂರ್ತಿಯನ್ನು ಅದ್ಯಾವ ಐಸಿರಿಗೆಂದು ಮೈಸೂರು ಸ್ಯಾಂಡಲ್ಲಿನ ಮೇಜುವಾನಿಗೆ ಬಿಟ್ಟರೋ ಗೊತ್ತಿಲ್ಲ. ಇನ್ನು ಕೈಗಾರಿಕಾ ಮಂತ್ರಿ ದೇಶಪಾಂಡೆಯದ್ದು ಹೇಳಿಕೇಳಿ ಸತ್ಯ ಹರಿಶ್ಚಂದ್ರನ ಅಪರಾವತಾರ. ಜೊತೆಗೆ ವಾಣಿಜ್ಯ ಮತ್ತು ಬೃಹತ್ ಕೈಗಾರಿಕೆ ಸಚಿವಾಲಯಕ್ಕೆ ಪ್ರಿನ್ಸಿಪಾಲ್ ಸೆಕ್ರೆಟರಿಯಾಗಿರುವುದು ಆಂಧ್ರಾ ಮೂಲದ ಕರ್ನಾಟಕದ ಬಗ್ಗೆ ಯಾವುದೇ ಅಕ್ಕರೆಯಿಲ್ಲದ ದುಡ್ಡು ಎಂದರೆ ಯಾವ ನಾಚಿಕೆಯನ್ನೂ ಅರಿಯದ ರತ್ನಪ್ರಭಾ!

ಮೈಸೂರು ಸ್ಯಾಂಡಲ್

ಇನ್ನು ಮೈಸೂರು ಸ್ಯಾಂಡಲ್ಲಿನ ದುರ್ಗತಿಗೆ ಬೇರೆ ಕಾರಣಗಳು ಬೇಕೆ? ಕನ್ನಡಿಗರು ಜೀವತೇದು ಕಟ್ಟಿ ಬೆಳೆಸಿದ ಮೈಸೂರು ಸೋಪಿನ ಕಾರ್ಖಾನೆಯನ್ನು 1916ರಲ್ಲಿ ಸ್ಥಾಪಿಸಿದ್ದು ನಾಲ್ವಡಿ ಕೃಷ್ಣರಾಜ ಒಡೆಯರು. ಅದಕ್ಕೆ ಹಗಲಿರುಳೆನ್ನದೆ ದುಡಿದದ್ದು ಸರ್ ಎಂ. ವಿಶ್ವೇಶ್ವರಯ್ಯನವರು.

ಇಂಥ ಮಹನೀಯರು ಕಟ್ಟಿ ಬೆಳೆಸಿದ ಕೆಎಸ್‌ಡಿ... ಅಂದರೆ ಕರ್ನಾಟಕ ಸೋಪ್ಸ್ ಅಂಡ್ ಡಿಟರ್... ಲಿ.ಗೆ ಇನ್ನೊಂದು ತಿಂಗಳು ತುಂಬಿ 2016 ಬಂ... ನೂರು ವರ್ಷಗಳು ತುಂಬುತ್ತವೆ. ಸದ್ಯ ಮೈಸೂರು ಸ್ಯಾ... ಸೋಪಿಗೆ ನೂರು ತುಂಬಿದ ಬಗ್ಗೆ ಸರ್ಕಾರ ... ಪತ್ರಿಕೆಗಳಲ್ಲಿ ನೀಡುತ್ತಿರುವ ಜಾಹಿರಾತು ಕಣ್ಣು ಕುಕ್... ಇದೆ. ಈ ಬಗ್ಗೆ ಅದ್ದೂರಿಯ ಸಮಾರಂಭಕ್ಕೂ ಸ... ಕರೆಯಿತ್ತಿದೆ. ಮೈಸೂರು ಲ್ಯಾಂಪ್ಸ್, ಮೈಷುಗರ್ಸ್, ಮೈ... ಪೇಪರ್ಸ್, ಮೈಸೂರು ಪಾಕು, ಮೈಸೂರು ಮಸಾಲೆ ದ... ಮೈಸೂರು ದಸರಾ, ಮೈಸೂರು ಅರಮನೆ, ಮೈ... ಚಾಮುಂಡಿ ತಾಯಿ, ಮೈಸೂರು ರಾಜರು, ಮೈ... ಹುಲಿ ಟಿಪ್ಪು ಇತ್ಯಾದಿ ಕನ್ನಡಿಗರ ಪ್ರತಿಷ್ಠೆಯ ಸಂಕೇ... ಸಾಲಿಗೆ ಮತ್ತೊಂದು ಹೆಮ್ಮೆಯ ಸೇರ್ಪಡೆಯಂತಿರು... ಮೈಸೂರು ಸೋಪು.

ಅದು ಮೈಸೂರು ಸ್ಯಾಂಡಲ್ ಸೋ...

ಬಿಜೆಪಿ ಅಧಿಕಾರದಲ್ಲಿದ್ದಷ್ಟೂ ಕಾಲ ಒಂದು ರೀ... ಡಕಾಯಿತಿಯಾದರೆ ಈಗ ಸೋಪ್ ಫ್ಯಾಕ್ಟರಿ... ಶುರುವಾಗಿರುವುದು ಮರಣಮೃದಂಗ. ಅಂದರೆ ಆಳಿದ... ಮೂಳೆ ಚಕ್ಕಳವನ್ನೂ ಬಿಡದೆ ಗುಡಿಸಿ ಗುಂಡಾ... ಮಾಡುವ ಹೇಶಾರವ.

ಕನ್ನಡಿಗರ ಆಧಿಪತ್ಯದ ಎನ್‌ಜಿಇಎಫ್, ಕ... ಮೈಸೂರು ಲ್ಯಾಂಪ್ಸ್, ವಿಶ್ವೇಶ್ವರಯ್ಯ ಐರನ್ ... ಸ್ಟೀಲ್ (ವಿಎಸ್‌ಐಎಲ್), ಕುದ್ರೆಮುಖ ಐರನ್ ... ಇತ್ಯಾದಿ ಒಂದೊಂದೇ ಸಾರ್ವಜನಿಕ ಉದ್ದಿಮೆ... ಮುಚ್ಚುತ್ತಾ ಬಂದಾಗಲೂ ಎದೆಗುಂದದೆ, ಅಚ್ಚಳಿ... ನಿಂತದ್ದು ಮೈಸೂರು ಸೋಪ್ಸ್. 90ರ ದಶ... ನಷ್ಟಕ್ಕೀಡಾಗಿ ಇನ್ನೇನು ನೆಲಕಚ್ಚಿತೆಂದು ಸರ್ಕಾ... ಮುಚ್ಚಿಹಾಕಲು ಯತ್ನಿಸುತ್ತಿದ್ದಾಗ ಎಚ್ಚೆತ್ತುಕೊಂಡ ... ಸ್ವಾಭಿಮಾನಿ ಕಾರ್ಮಿಕರು ಮತ್ತು ಕೆಲ ಅಧಿಕಾ... ಛಲದಿಂದಾಗಿ ಕೇವಲ ಹತ್ತೇ ವರ್ಷದಲ್ಲಿ ತಲೆಎತ್ತಿ ನಿ... ಮೈಸೂರು ಸ್ಯಾಂಡಲ್.

ವಿಶ್ವದಾದ್ಯಂತ ಬ್ರಾಂಡ್ ಖ್ಯಾತಿಯಿದೆ. ಮೈಸ... ಸ್ಯಾಂಡಲ್ ಎಂದರೇನೇ ಜನ ಕಣ್ಣುಮುಚ್ಚಿಕೊ... ಖರೀದಿಸುವಂಥ ನಂಬಿಕೆಯಿದೆ. ನೂರಾರು ಕಾರ್ಮಿ... ಸಾವಿರಾರು ಕೋಟಿಯ ಸೊತ್ತು, ಮೈಸೂರು ಶ್ರೀಗ... ಕಾವೇರಿ ನೀರು, ಸರ್ಕಾರದ ಸವಲತ್ತು ಕನ್ನಡಿಗರ ... ಎಲ್ಲವೂ ಇದ್ದೂ ಮೈಸೂರು ಸ್ಯಾಂಡಲ್ ಯ... ಮಟ್ಟಕ್ಕಿರಬೇಕು?

5 ಕೋಟಿ ದೋಖಾ

ಅದು ಒಂದಲ್ಲ ಎರಡಲ್ಲ ಹತ್ತಾರು ಹಗರಣ... ನೂರಾರು ಕರ್ಮಕಾಂಡಗಳು ಹುತ್ತವನ್ನಾಗಿ ಕೆಎಸ್‌ಡಿ... ಅನ್ನು ಮಾರ್ಪಡಿಸಿದ ಕುಖ್ಯಾತಿ ಕೈಗಾರಿಕಾ ಮ... ದೇಶಪಾಂಡೆ ಮತ್ತು ಕೈಗಾರಿಕಾ ಸಚಿವಾಲಯದ ಪ್ರಿನ್ಸಿ... ಸೆಕ್ರೆಟರಿ ರತ್ನಪ್ರಭಾಗೇ ಸಲ್ಲಬೇಕು. ಕೇಶವಮೂರ್ತಿಯ... ಎಂ.ಡಿ ಹುದ್ದೆಯಿಂದ ಬದಲಿಸುವಂತೆ 'ಸೋಪ್ಸ್' ಕಾ... ವರ್ಗ ಪದೇಪದೇ ಸರ್ಕಾರಕ್ಕೆ ಮನವಿಯಿಡುತ್ತಲೇ ... ಕಾರ್ಮಿಕ ಮುಖಂಡರಾದ ಶಿವಶಂಕರ್ ಮತ್ತು ಮೈ... ಫರ್ನಾಂಡಿಸ್ ಬೀದಿಗಿಳಿದು ಹೋರಾಡುತ್ತಿದ... ಹೈಕೋರ್ಟ್ ಒಂದಲ್ಲ ಎರಡಲ್ಲ ಅನೇಕ ಪ್ರಕರಣಗ... ಸೋಪ್ಸ್ ಆಡಳಿತವರ್ಗವನ್ನು ದಂಡಿಸುತ್ತಿದ್ದರೂ ಡಕಾ... ಕೇಶವಮೂರ್ತಿಯನ್ನಾಗಲಿ, ರತ್ನಪ್ರಭಾಳನ್ನಾಗಲಿ, ಸೋ... ಫ್ಯಾಕ್ಟರಿಯನ್ನೇ ನುಂಗಿ ನೀರು ಕುಡಿಯಲು ಹೊ... ಮಾರ್ಕೆಟಿಂಗ್ ವಿಭಾಗದ ಡಿಜಿಎಂ ಸುವರ್ಣ ಕುಮ... ನನ್ನಾಗಲಿ ಮತ್ತೊಬ್ಬ ಡಿಜಿಎಂ ಮೆಟಿರಿಯಲ್ಸ್‌ನ ಮಹಾ... ಬಿ.ಎನ್. ಲೋಕೇಶಯ್ಯನನ್ನಾಗಲಿ ಯಾರಿಂದಲೂ ಜೈ... ಹಾಕಲಾಗುತ್ತಿಲ್ಲ ಎಂಬುದೇ ಕನ್ನಡಿಗರ ಪಾಲಿನ ದ... ದುರಂತ.

ಸಂತೆಗೆ ಮುನ್ನ ಗಂಟುಕಳ್ಳರು ಸೇರಿದ ಹಾಗೆ ... ಖದೀಮರೆಲ್ಲರೂ ಸೇರಿಕೊಂಡೇ ಮೈಸೂರು ಸೋ... ಮುಚ್ಚಲು ಕನ್ನವಿಟ್ಟಂತಿದೆ. ಇವರೆಲ್ಲರ ಕೈಚಳಕಕ್ಕೊ... ಸ್ಯಾಂಪಲ್ ಬೇಕೆಂದರೆ ಆದಕ್ಕೆ ತೀರ ಇತ್ತೀಚಿಗೆ ನ... ಫಾಮ್ ಫ್ಯಾಟಿ ಆಸಿಡ್ ಖರೀದಿ ಕರ್ಮಕಾಂಡವೊಂ... ಸಾಕು. ಸೋಪಿನ ತಯಾರಿಕೆಗೆ ಅದೇ ಮುಖ್ಯ ಕ... ಉತ್ಪನ್ನವೆಂದರೆ ಅದು ಫಾಮ್ ಕೆರ್ನಲ್ ಫ್ಯಾಟೀ ಆಸಿ...

ಇದನ್ನು ಪ್ರತಿವರ್ಷ ಕೆಎಸ್‌ಡಿಎಲ್‌ಗೆ ಸರಬರಾ... ಮಾಡುವವನು ಪ್ರಳಯಾಂತಕ ಪ್ರಕಾಶ್ ಗೌಡ. ... ಮೆ. ಬಾಲಾಜಿ ಫುಡ್ ಪ್ರೊಸೆಸಿಂಗ್ ಕಂಪೆನಿಯ ಧ... ಬಾಲಾಜಿ ಫುಡ್ ಪ್ರೊಸೆಸಿಂಗ್ ಕಂಪೆನಿ ವತಿಯಿಂದ... ಫಾಮ್ ಫ್ಯಾಟಿ ಆಸಿಡ್ ಸೋಪ್ಸ್‌ಗೆ ಸರಬರಾಜಾಗುತ್ತಿ... ಆದರೆ ಪ್ರಪಂಚದಲ್ಲೆಲ್ಲೂ ಕಂಡುಕೇಳರಿಯದ ಪವಾಡವೊಂ... ಈ ಫಾಮ್ ಪ್ಯಾಟಿ ಆಸಿಡ್ ಖರೀದಿ ಮತ್ತು ಪ್ರಕಾಶ್‌ಗೌ... ವಿಷಯದಲ್ಲಿ ನಡೆದಿದೆ.

ಬೇರೆಲ್ಲ ವ್ಯವಹಾರಗಳಲ್ಲೂ ವಸ್ತು ಸರಬರಾಜ... ನಂತರ ತಾನೇ ಅದರ ಬೆಲೆ ಪಾವತಿಸುವುದು?

ಆದರೆ ಪ್ರಕಾಶ್ ಗೌಡ ಮತ್ತು ಎಂ... ಕೇಶವಮೂರ್ತಿಯ ಕೈಚಳಕದ ಲೀಲೆಯೇ ಬೇರೆ. ಅಗು...


ಐಎಎಸ್ ದೊರೆಸಾನಿ ರತ್ನಪ್ರಭಾ ಮತ್ತು ಲೋಕಾ ಭಾಸ್ಕರ್‌ರಾವ್ ಆಂಧ್ರಾ ನಂಟಿನ ದುರಂತ

ದೇಶಪಾಂಡೆ ಕೈಗಾರಿಕಾ ಮಂತ್ರಿಯಾಗಿ, ಕೇಶವಮೂರ್ತಿ ಕೆಎಸ್‌ಡಿಎಲ್‌ನ ಎಂಡಿಯಾಗಿ ವಕ್ಕರಿಸಿದ ನಂತರ ನಡೆದ ಎಲ್ಲಾ ಕರ್ಮಕಾಂಡಗಳನ್ನು ಲೆಕ್ಕ ಹಾಕಿದರೆ ಅದು ಹೆಚ್ಚೂಕಮ್ಮಿ ನೂರು ಕೋಟಿಯನ್ನು ಸಮೀಪಿಸುತ್ತದೆ. ಕಾರ್ಖಾನೆಯ ಆಯಕಟ್ಟಿನ ಹುದ್ದೆಗೆಲ್ಲ ಖದೀಮರು ಕಳ್ಳಕಾಕರನ್ನೇ ಪ್ರತಿಷ್ಠಾಪಿಸಿ ಕೇಶವಮೂರ್ತಿ ಮಾಡಿದ ಲೂಟಿ ವಿರುದ್ಧ ಲೋಕಾಯುಕ್ತರ ಬಾಗಿಲು ತಟ್ಟಿದ್ದು ಕಾರ್ಮಿಕ ನಾಯಕ ಜಿ.ಆರ್. ಶಿವಶಂಕರ್.


ದುರಂತವೆಂದರೆ 4.6 ಕೋಟಿ ಹಗಲುದರೋಡೆಗೆ ಕಾರಣವಾದ ಪಾಮ್ ಫ್ಯಾಟಿ ಆಸಿಡ್ ಖರೀದಿ ಹಗರಣವನ್ನು ಸಾಕ್ಷ್ಯಾಧಾರ ಸಮೇತವೇ ಪತ್ತೆ ಹಚ್ಚಿ ಲೋಕಾಯುಕ್ತಕ್ಕೆ ದೂರು ಕೊಟ್ಟರೆ ನ್ಯಾಯ ಕೋರಿ ಬಂದವರಿಗೇ ಆಘಾತ ಕಾದಿತ್ತು. ತೀರ ಇತ್ತೀಚಿಗೆ ಅಂದರೆ 2015ರ ಜುಲೈ ತಿಂಗಳಲ್ಲಿ ಇದ್ದಕ್ಕಿದ್ದಂತೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಪ್ರಿನ್ಸಿಪಲ್ ಸೆಕ್ರೆಟರಿ ರತ್ನಪ್ರಭಾ ಸೇರಿದಂತೆ ಕೆಎಸ್‌ಡಿಎಲ್ ಎಂಡಿ ಕೇಶವಮೂರ್ತಿಗೆ ಲೋಕಾಯುಕ್ತರು ಕ್ಲೀನ್ ಚಿಟ್ ಕೊಟ್ಟುಬಿಟ್ಟರು!

ವಿಪರ್ಯಾಸವೆಂದರೆ ದೋಚಿದ ದುಡ್ಡು ವಸೂಲಿಯಾಗದೆ ಐದು ಕೋಟಿ ಮೊತ್ತದ ಕಚ್ಚಾ ವಸ್ತುವೂ ಬಾರದೆ ತೀರ ವಿಚಿತ್ರವೆಂಬಂತೆ ಹಿರಿಯ ಐಎಎಸ್ ರತ್ನಪ್ರಭಾ ಮತ್ತು ಕೇಶವಮೂರ್ತಿಗೆ ಲೋಕಾಯುಕ್ತ ಕ್ಲೀನ್ ಚಿಟ್ ಕೊಟ್ಟಿದ್ದೇ ನಿಗೂಢವಾಗಿತ್ತು. ಇದಾದನಂತರ ಇದ್ದಕ್ಕಿದ್ದಂತೆ ಕೇಶವಮೂರ್ತಿ ಹೈದ್ರಾಬಾದಿಗೆ ಹೋಗಲಾರಂಭಿಸಿದರು. ಕಾರಣವಿಲ್ಲದೆ ಮಾರ್ಕೆಟಿಂಗ್ ಡಿಜಿಎಂ ಸುವರ್ಣಕುಮಾರನ್ನು ಹೈದ್ರಾಬಾದಿಗೆ ಹೋಗಿಬರುತ್ತಿದ್ದ. ಕೈಯಲ್ಲಿ







ಬ್ರೀಫ್‌ಕೇಸು. ಕಾರುಗಳ ತುಂಬಾ ಪೆಟ್ಟಿಗೆಗಳು. ಅದು ಲೋಕಾಯುಕ್ತ ಭಾಸ್ಕರ್‌ರಾವ್ ಸಂಬಂಧಿಕರಿಗೆ ಮೈಸೂರು ಸ್ಯಾಂಡಲ್‌ವತಿಯಿಂದ ಸಂದಾಯವಾದ ಕಪ್ಪ ಕಾಣಿಕೆಯಾ? ಹಿರಿಯ ಐಎಎಸ್ ದೊರೆಸಾನಿ ರತ್ನಪ್ರಭಾ ಮೇಡಂರ ಪತಿಯ ನೆಂಟರೊಬ್ಬರು ಹೈದರಾಬಾದಿನಲ್ಲಿ ನಡೆಸುವ ರಿಯಲ್ ಎಸ್ಟೇಟ್ ಕಂಪೆನಿಯೊಂದಕ್ಕೆ ಸಲ್ಲಿಸಿ ಬಂದ ಉಂಬಳಿಯಾ? ರತ್ನಪ್ರಭಾ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಮುಖ್ಯಸ್ಥೆಯಾದ ಮೇಲೆ ಕೆಐಎಡಿಬಿಯಲ್ಲಿ ನಡೆದ ಕರ್ಮಕಾಂಡಗಳ ಬಗ್ಗೆ ಲೋಕಾಯುಕ್ತರು ನಿಷ್ಕ್ರಿಯರಾಗಿದ್ದೇಕೆ? ಲೋಕಾ ಭಾಸ್ಕರ್‌ರಾವ್ ಮತ್ತು ರತ್ನಪ್ರಭಾರ ಆಂಧ್ರಾ ಮೂಲದ ನೆಂಟಸ್ತಿಕೆಯೂ ಮೈಸೂರು ಸೋಪಿನ ದುರಂತಕ್ಕೂ ಯಾವುದೋ ಬಾದರಾಯಣ ಸಂಬಂಧವಿದೆಯಾ?




...ತು ಮತ್ತು ಫಾಮ್ ಫ್ಯಾಟಿ ಆಸಿಡ್ ಸರಬರಾಜಿಗೆಂದು ...ಕೆ 3.4 ಕೋಟಿ ರೂಪಾಯಿಗಳನ್ನು ಎಂ.ಡಿ. ...ವಮೂರ್ತಿ ಪ್ರಕಾಶ್ ಗೌಡನ ಕಂಪೆನಿಗೆ ಮುಂಗಡವಾಗಿ ಬಿಡುಗಡೆ ಮಾಡುತ್ತಾರೆ. ದುಡ್ಡೇನೋ ಗೌಡನ ...ರುತ್ತದೆ. ಆದರೆ ಮಾಲು ಮಾತ್ರ ಬರುವುದೇ ಇಲ್ಲ. ...ಇಲ್ಲ ವರ್ಷ ಕಳೆದರೂ ಕೊಟ್ಟ ದುಡ್ಡಿಗೆ ಬರಬೇಕಿದ್ದ ...ರ್ಥಗಳು ಬರಲಿಲ್ಲವೆಂದು ಕಾರ್ಮಿಕರು ಮತ್ತು ...ರ್ಮಿಕ ಮುಖಂಡರೆಲ್ಲ ನ್ಯಾಯಾಲಯದ ಮೊರೆ ...ಗುತ್ತಾರೆ. ಕೋರ್ಟ್ ಕಣ್ಣಿಗೆ ಮಣ್ಣೆರಚಲೆಂದು



ಲೋಕೇಶಯ್ಯ



ಎಸ್.ಕೆ. ಅರಸ್



ಕೆಎಸ್‌ಡಿಎಲ್ ಛೇರ್ಮನ್ ವೆರೋನಿಕಾ

...ಪುಡಿ ಐಟಂಗಳು ಫ್ಯಾಕ್ಟರಿಗೆ ಬಂದಂತೆ ನಾಟಕವಾಡಿ ...ಪದಲ್ಲಿ ಮತ್ತೆ 1.16 ಕೋಟಿ ರೂಪಾಯಿಯನ್ನೇ ...ಶ್ ಗೌಡನಿಗೆ ಬಡವಾಡೆ ಮಾಡುತ್ತಾರೆ.

...ಮೊದಲು 3.4 ಕೋಟಿ ತದನಂತರ ಮತ್ತೆ 1.6 ...ಟಿಗೆ ಬಂದದ್ದು ಮಾತ್ರ ಕಸಕಡ್ಡಿ!

ದುಷ್ಟಕೂಟ

...ದೊಂದೇ ಕಳ್ಳಾಟದಿಂದ ಎಂ.ಡಿ. ಕೇಶವಮೂರ್ತಿ, ...ರ್ಕೆಟಿಂಗ್ ಡಿಜಿಎಂ ಸುವರ್ಣ ಕುಮಾರ್ ಮತ್ತು ...ಟೀರಿಯಲ್ಸ್ ಡಿಜಿಎಂ ಲೋಕೇಶಯ್ಯ ಸೇರಿಕೊಂಡು ...ಚಿದ್ದು ಬರೋಬ್ಬರಿ 5 ಕೋಟಿ. ಮಂಗಳೂರಿನ ...ಗ್ರೆಸ್ ಕಾರ್ಯಕರ್ತೆ ವೆರೋನಿಕಾ ಕರ್ನೆಲಿಯೋ ಎಂಬ

ಮಹಾಸಾಧ್ವಿಯನ್ನು ಸರ್ಕಾರ ಕರ್ನಾಟಕ ಸೋಪ್ಸ್‌ನ ಅಧ್ಯಕ್ಷೆಯನ್ನಾಗಿ ನೇಮಿಸಿದೆ. ಹಾಪ ಸೋಪು, ಫ್ಯಾಕ್ಟರಿ, ಸೇಲ್ಸ್, ಸ್ಯಾಂಡಲ್ಲು, ರಾಬರಿ, ಡಕಾಯಿತಿ ಎಲ್ಲವೂ ಹಾಯಿ ವೆರೋನಿಕಾಗೆ ಹೊಸದು. ಕಳ್ಳರು ಕೊಟ್ಟ ಲೆಕ್ಕದ ತಲೆಬುಡ ಅರ್ಥವಾಗದಷ್ಟು ಮುಗ್ಧೆಯಾದ ವೆರೋನಿಕಾ ಮಾತೆಗೆ ಖದೀಮರ ಪಾತಾಳ ಗರಡಿಯೆಲ್ಲಿ ಅರ್ಥವಾಗಲು ಸಾಧ್ಯ?


- ಹೀಗಾಗಿ ಎಂ.ಡಿ. ಕೇಶವಮೂರ್ತಿ, ಡಿಜಿಎಂಗಳಾದ ಸುವರ್ಣ ಕುಮಾರ್, ಲೋಕೇಶಯ್ಯ, ಎಸ್.ಕೆ. ಅರಸ್ ಮತ್ತು ಇಂಥಾ ದುಷ್ಟಕೂಟದ ಆಸ್ಥಾನ ನರ್ತಕಿಯಂತಿರುವ ಖತರ್‌ನಾಕ್ ಎಜಿಎಂ ಮುತ್ತುಲಕ್ಷ್ಮಿಯಂಥ ನಾಟ್ಯರಾಣಿಯ ಆಟ ಊಟ ಭಂಡಾಟಗಳ ವಿರುದ್ಧದ ಕಾರ್ಮಿಕರ ಆಕ್ರೋಶವೇ ಅರಣ್ಯರೋದನವಾಗಿಬಿಟ್ಟಿದೆ.

ಸದ್ಯ ಕೆಎಸ್‌ಡಿಎಲ್ ವ್ಯಾಪ್ತಿಗೆ ಮೈಸೂರಿನ ಶ್ರೀಗಂಧದ ಎಣ್ಣೆಯ ಕಾರ್ಖಾನೆ ಮತ್ತು ಬೆಂಗಳೂರಿನ ಇಸ್ಕಾನ್ ಎದುರಿನ ಸೋಪ್ ಫ್ಯಾಕ್ಟರಿ ಮಾತ್ರವಲ್ಲದೆ ಶಿವಮೊಗ್ಗದ ಫ್ಯಾಕ್ಟರಿಯೂ ಸೇರಿಕೊಂಡಿದೆ. ಇಷ್ಟೇ ಅಲ್ಲದೆ ಕಾರ್ಖಾನೆ ಮತ್ತು ಉತ್ಪಾದನೆಯನ್ನು ವಿಸ್ತರಿಸುವ ಉದ್ದೇಶದಿಂದ ಬೆಂಗಳೂರು-ತುಮಕೂರು ನಡುವೆ ಕೆಐಎಡಿಬಿಯಿಂದ 20 ಎಕರೆಯನ್ನು ಸರ್ಕಾರ 2011ರ ಸೆಪ್ಟೆಂಬರ್ ತಿಂಗಳಲ್ಲಿ ಮಂಜೂರು ಮಾಡಿದೆ. ಸದರಿ ಜಮೀನಿನ-ಮಾರುಕಟ್ಟೆ ಮೌಲ್ಯವೆಂದು ಕಂಪೆನಿಯೇ 11.42 ಕೋಟಿ ರೂಪಾಯಿಗಳನ್ನು ಕೆಐಎಡಿಬಿಗೆ ಪಾವತಿ ಮಾಡಿದೆ. 20 ಲಕ್ಷ ಖರ್ಚು ಮಾಡಿ ನೀರಿಗೆಂದು ಬೋರ್‌ವೆಲ್ ಕೊರೆಸಿದ್ದು ಆಗಿದೆ. ಇಪ್ಪತ್ತು ಎಕರೆಯೆಂದರೆ ಅದು ಸಣ್ಣ ಭೂಮಿಯೇನಲ್ಲ. ಸದ್ಯ ಫ್ಯಾಕ್ಟರಿ ನಿರ್ಮಿಸಲಾಗದೇ ಹೋದರೂ ಅಲ್ಲಿ ಗಂಧದ ಮರಗಳನ್ನು ನೆಡಬಹುದಿತ್ತು, ಕನಿಷ್ಠ ಗಂಧದೆಣ್ಣೆ, ಅದರ ಪರಿಮಳ, ಗಂಧದ ಸೋಪಿನ ಸೃಷ್ಟಿ ಕೌಶಲ್ಯದ ಸಂಶೋಧನಾ ಕೇಂದ್ರವನ್ನಾದರೂ ನಿರ್ಮಿಸಬಹುದಿತ್ತು.

ಕಳ್ಳ ಸುವರ್ಣಕುಮಾರ್!

ದುರಂತವೆಂದರೆ ಕೆಎಸ್‌ಡಿಎಲ್‌ಗೆ ವಕ್ಕರಿಸಿದ ಸದರಿ ದುಷ್ಟಕೂಟವೇ ಇಡೀ 20 ಎಕರೆಯನ್ನು ರಿಯಲ್ ಎಸ್ಟೇಟ್ ಖದೀಮರ ಬಾಯಿಗಿಟ್ಟು ಕಾಸು ಗುಂಜಿಕೊಂಡ ವದಂತಿ ಹಬ್ಬಿದೆ. ಈ ಬಗ್ಗೆ ಕಾರ್ಮಿಕ ನಾಯಕರೇ ಪದೇಪದೇ ಸರ್ಕಾರಕ್ಕೆ ಮನವಿಯಿತ್ತಾಗಲೂ, ಅದಕ್ಕೆ ಕವಡೆಕಾಸಿನ ಕಿಮ್ಮತ್ತಿಲ್ಲ. ಏಕೆಂದರೆ ಕೈಗಾರಿಕೆ ಮತ್ತು ವಾಣಿಜ್ಯ ಸಚಿವಾಲಯವನ್ನಾಳುತ್ತಿರುವವಳು ದೊಡ್ಡ ಬಾಯಿಯ ರತ್ನಪ್ರಭಾ ಮತ್ತು ಆಕೆಗೆ ಬಾಸ್ ಆಗಿರುವವನು ನೆಲಕಂಟಕ ದೇಶಪಾಂಡೆ!

ಈ ಹಿಂದೆ ಹಣಕಾಸು ಜನರಲ್ ಮ್ಯಾನೇಜರ್ ಆಗಿದ್ದ ಕೆ. ಆಂಜನಪ್ಪ ಫ್ಯಾಕ್ಟರಿಗೆ ಕಲ್ಲಿದ್ದಲು ಖರೀದಿಸುತ್ತೇನೆಂದು 48 ಲಕ್ಷದ ಉಂಡೆನಾಮ ತಿಕ್ಕಿದ್ದ. ಸಾಲದ್ದಕ್ಕೆ ಫೇರ್‌ನೆಸ್ ಕ್ರೀಂ ಖರೀದಿಯಲ್ಲೂ 1.81 ಕೋಟಿ ನುಂಗಿಬಿಟ್ಟ. ಇದು ಹೇಗೋ ಆಡಿಟ್‌ನಲ್ಲಿ ಪತ್ತೆಯಾಗಿ ಕಂಪೆನಿ ವತಿಯಿಂದಲೇ ಆಂಜನಪ್ಪನ ವಿರುದ್ಧ ಕೇಸು ಹಾಕಲಾಯಿತು. ಆದರೆ ಎಂ.ಡಿಯಾಗಿ ಪೀಠಕ್ಕೇರಿದ ಕೇಶವಮೂರ್ತಿ ಆಂಜನಪ್ಪನ ತಟ್ಟೆಗೇ ಬಾಯಿಟ್ಟು ದೋಚಿದ ದುಡ್ಡಿನಲ್ಲಿ ಪಾಲುದಾರಿಕೆ ಮಾಡಿಕೊಂಡ. ಕದ್ದ ಮೊತ್ತದ ವಸೂಲಾತಿಯನ್ನೇ ಕೈಬಿಟ್ಟ.



ಸಾಲದ್ದಕ್ಕೆ ಕಂಪೆನಿಯನ್ನೇ ವಂಚಿಸಿದ್ದ ಜೆ.ಎಸ್.ಭಟ್ ಎಂಬ ಮತ್ತೊಬ್ಬ ಖದೀಮನಿಗೂ ಹಣ ಬಿಡುಗಡೆ ಮಾಡಿ ಅದರಲ್ಲೂ ಪಾಲು ಪಡೆದ.

ಮಾರ್ಕೆಟಿಂಗ್ ಡಿಜಿಎಂ ಸುವರ್ಣಕುಮಾರ್ ಎಂಥಾ ಪಾಖಂಡಿಯೆಂದರೆ ಆಂಧ್ರದ ಹಿಂದೂಪುರದ ಬಾಲಾಜಿ ಏಜೆನ್ಸಿಯಿಂದ ಕೆಎಸ್‌ಡಿಎಲ್‌ಗೆ ಬರಬೇಕಿದ್ದ 16 ಲಕ್ಷವನ್ನೇ ವಂಚಿಸಿ ತನ್ನ ಜೇಬಿಗಿಳಿಸಿಬಿಟ್ಟ. ಇದು ಹೇಗೋ ಗೊತ್ತಾಗಿ ಸುವರ್ಣಕುಮಾರ್ ರೆಡ್‌ಹ್ಯಾಂಡ್ ಸಿಕ್ಕಿಬಿದ್ದಿದ್ದೂ ಆಗಿತ್ತು. ಆದರೆ ಎಂ.ಡಿ. ಕೇಶವಮೂರ್ತಿ ಮಾತ್ರ ನ್ಯಾಯದ ಪಾಲಿಗೆ ಶವದಂತೆ ನಿಷ್ಕ್ರಿಯನಾಗಿದ್ದ. ಕದ್ದ ಮೊತ್ತದ ವಸೂಲಿಗೂ ಕೈಹಾಕಲಿಲ್ಲ, ಖದೀಮ ಸುವರ್ಣಕುಮಾರ್ ವಿರುದ್ಧ ಯಾವ ಕ್ರಮವನ್ನೂ ಜರುಗಿಸಲಿಲ್ಲ, ಮೊದಲೇ ಕಳ್ಳ. ಅಂಥಾದ್ದರಲ್ಲಿ ಖಜಾನೆ ಕಾಯಲು ಬಿಡುತ್ತಾನಾ? ಎಂ.ಡಿ. ಕೇಶವಮೂರ್ತಿ ಸಾಹೇಬರು 2014ರ ಆಗಸ್ಟ್ 18ರಂದು ವಿಶೇಷ ಆದೇಶವೊಂದನ್ನು ಹೊರಡಿಸಿ ಡಿಜಿಎಂ ಸುವರ್ಣಕುಮಾರ್ ಕೇವಲ ಮಾರ್ಕೆಟಿಂಗ್ ಮಾತ್ರವಲ್ಲದೆ ಆಸ್ತಿಪಾಸ್ತಿ, ಕಟ್ಟಡಗಳ ನಿರ್ವಹಣೆ, ಉದ್ಯಾನವನಗಳ ಮೇಂಟೇನೆನ್ಸ್, ಸಿವಿಲ್ ವರ್ಕ್ಸ್, ಆಸ್ತಿಪಾಸ್ತಿಗಳನ್ನು ಬಾಡಿಗೆಗೆ ಮತ್ತು ಗುತ್ತಿಗೆ ನೀಡುವುದು, ಮೊಬೈಲ್ ಟೆಲಿಫೋನ್ ಟವರ್‌ಗಳ ನಿಭಾವಣೆ, ಕಂಪೆನಿ ಸೊತ್ತುಗಳ ಬಾಡಿಗೆ ವಸೂಲಿ, ಗುತ್ತಿಗೆ ನೀಡುವ ಅಧಿಕಾರ, ತೆರಿಗೆಗಳ ವಸೂಲಿ ಇತ್ಯಾದಿಗಳೆಲ್ಲವನ್ನೂ ವಹಿಸಿಕೊಡುತ್ತಾರೆ.

ಕಂಪೆನಿಯಲ್ಲಿ 165 ಮಂದಿ ಅಧಿಕಾರಿಗಳಿದ್ದಾರೆ. ನಾನೂರಕ್ಕೂ ಅಧಿಕ ಕಾಯಂ ನೌಕರರಿದ್ದಾರೆ. ಅಧಿಕಾರಿಗಳ ರೂಪದ ಇಷ್ಟೊಂದು ಮಂದಿ ದಂಡಪಿಂಡಗಳಿಗೆ ಮಾಡಲು ಕೆಲಸವಿಲ್ಲ, ಇಷ್ಟಲ್ಲದೆ ಉತ್ಪಾದನೆಗೆಂದು ಬೇಕಾಬಿಟ್ಟಿ ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳಲಾಗಿದೆ. ಸಾಲದ್ದಕ್ಕೆ ಮಾರ್ಕೆಟಿಂಗ್ ಮತ್ತು ಕೇಂದ್ರ ಕಚೇರಿಯಲ್ಲಿ ನಾನೂರಕ್ಕೂ ಅಧಿಕ ಔಟ್‌ಸೋರ್ಸ್ ಕಾರ್ಮಿಕರನ್ನು ನೇಮಿಸಿಕೊಂಡು ಅವರಿಗೂ ಬಿಟ್ಟಿ ಸಂಬಳ ಅದಕ್ಕೆ ಕಮಿಷನ್ ಹೊಡೆಯುವುದೇ ಇಲ್ಲಿನ ದುಷ್ಟಕೂಟದ ಕಸುಬಾಗಿಹೋಗಿದೆ. ಅಂಥಾದ್ದರಲ್ಲಿ ಮಾರ್ಕೆಟಿಂಗ್ ಮಾಡಿ ಸೋಪು ಮಾರಿ ಕಂಪೆನಿ ಸಾಕಬೇಕಾದ ಮಹತ್ವದ ಜವಾಬ್ದಾರಿಯುಳ್ಳ ಸುವರ್ಣಕುಮಾರ್‌ಗೆ ಹೆಚ್ಚುವರಿಯಾಗಿ ಈ ಪಾಟ ಹೊಣೆ, ಕೆಲಸ ವಹಿಸಿಕೊಟ್ಟ ಎಂ.ಡಿ. ಕೇಶವಮೂರ್ತಿ ಸಾಹೇಬರ ಮರ್ಮ ತಾನೇ ಯಾರಿಗೆ ಅರ್ಥವಾಗುವುದಿಲ್ಲ?

ಸಿವಿಲ್ ಕಾಮಗಾರಿಗಳ ಹೆಸರಲ್ಲಿ, ಆಸ್ತಿಪಾಸ್ತಿಗಳ ನಿರ್ವಹಣೆಗೆಂದು ಈಗಾಗಲೇ ಸುವರ್ಣಕುಮಾರ್ ಹಾಕಿದ ಬಿಲ್ಲುಗಳ ಮೊತ್ತವೇ ಐದು ಕೋಟಿ ದಾಟಿದೆ. ಹಳೇಕಲ್ಲು ಹೊಸ ಬಿಲ್ಲು, ಕಚ್ಚಾ ಸಾಮಗ್ರಿಗಳ ಖರೀದಿಯಲ್ಲಿ ಮೋಸ. ಕೆಲಸವಿಲ್ಲದ ಅಧಿಕಾರಿಗಳಿಗೆ ಬಿಟ್ಟಿ ಓಡಾಡಲು ಕಾರು ಬಾಡಿಗೆ ಬಿಲ್ಲುಗಳ ದೋಖಾ. ಖದೀಮರನ್ನು ನೇಮಿಸಿಕೊಂಡು ಅವರ ಪ್ರತಿನಿತ್ಯದ ಬಾಟಾ ಹೆಸರಲ್ಲಿ ಲೂಟಿ. ತಮಗೆ ಬೇಕಾದವರನ್ನು ನೇಮಿಸಿಕೊಂಡು ಅವರಿಗೆ ಬಿಟ್ಟಿ ಸಂಬಳದ ಮೋಸ. ಹಾಗೇ ನೇಮಿಸಿಕೊಂಡವರ ಮೇಲೆ ನಡೆದ ಲೈಂಗಿಕ ದೌರ್ಜನ್ಯಗಳ ಕುರಿತ ಆರೋಪ ಬೇರೆ. ಜಾಹಿರಾತು ಹೆಸರಲ್ಲಿ ನಡೆದ 20 ಕೋಟಿಗೂ ಅಧಿಕ ಮೊತ್ತದ ದೋಖಾ. ಪ್ರಾಮಾಣಿಕರೂ ಕಷ್ಟಪಟ್ಟು ಸಂಸ್ಥೆಗೆ ದುಡಿದವರನ್ನೂ ಗುರಿಯಾಗಿಸಿ ನೀಡುತ್ತಿರುವ ಕಿರುಕುಳ....

ಸದ್ಯ ಕೆಎಸ್‌ಡಿಎಲ್‌ನಲ್ಲಿ ನಡೆಯುತ್ತಿರುವ ಅನ್ಯಾಯ ಮತ್ತು ಅನಾಚಾರಗಳ ಬಗ್ಗೆಯೇನಾದರೂ ಲೋಕಾಯುಕ್ತ ತನಿಖೆಯಾಯಿತೆಂದರೆ ಮಂತ್ರಿ ದೇಶಪಾಂಡೆ ಸಮೇತ ಈ ದುಷ್ಟಕೂಟ ಜೈಲು ಪಾಲಾಗಲಿದೆ. ನೂರು ವರ್ಷದ ಇತಿಹಾಸದ ಮೈಸೂರು ಸ್ಯಾಂಡಲ್ ಸೋಪಿನ ಸಮೇತ ಅದರ ಮೂಳೆಚಕ್ಕಳವನ್ನೂ ಬಿಡದೆ ನೆಕ್ಕಿ ಹಾಕಲು ಹೊರಟ ದುಷ್ಟಕೂಟವನ್ನು ಸದೆಬಡಿಯದೇ ಯಾವ ಶತಮಾನೋತ್ಸವ ಮಾಡಿದರೇನು ಯಾವ ಮಾನ- ಸಮ್ಮಾನಗೈದರೇನು?

ಅದು ಗಂಧದ ಗುಡಿಗಿಟ್ಟ ಕೊಳ್ಳಿಯೂ ಹೌದು, ಕನ್ನಡಿಗರ ಹೆಮ್ಮೆಯೊಂದರ ಸಮಾಧಿಯೂ ಹೌದು.

■ ರಾ. ಸೋಮನಾಥ್

ಸೋಬಕ್ಕನಿಗೊಂದು ಪತ್ರ



...ನ್ಯಾಗೆ ಗಟ್ಟಿಯೆನ್ನುವ ನಾಯಕರುಗಳಿಲ್ಲದ ರಾಜ್ಯ ...ಯಲ್ಲಿ ಕಂಗೊಳಿಸಲು ತಪ್ಪದೇ ಧಾಟಿಯಲ್ಲಿ ...ಯುತ್ತಾ ಕೂಗಾಡುತಾ) ತರಹೇವಾರಿ ರೀತಿಯಲ್ಲಿ ...ತ್ತಿರುವ ಸೋಬಕ್ಕನವರಿಗೆ ನಮಸ್ಕಾರಗಳು.

...ಕರುನಾಡಿನ ದಕ್ಷಿಣ ಭಾಗದಲ್ಲಿ ವಿಚಿತ್ರವಿಚಿತ್ರ ಊರಿನ ...ಗಳಿವೆ. ಎಂಡೋಸಲ್ಫಾನ್ ಕುಖ್ಯಾತಿಯ ಪಡ್ರೆ ಬಳಿಯ ... ಅಮೇಲೆ ದೇವಲೋಕ (ಕೊಲೆ ಪ್ರಕರಣವೊಂದರಲ್ಲಿ ...ಪಡೆದದ್ದು), ಪಾತಾಳ (ಯಕ್ಷಗಾನ ಕಲಾವಿದರೊಬ್ಬರ ...), ರಾವಣಾಸುರ ... ಎಂತೆಂಥದ್ದೋ ಎಲ್ಲಾ ...ಕರ ಹೆಸರುಗಳು ಇಲ್ಲಿವೆ. ಆದರೆ ಅವೆಲ್ಲ ಬಿಟ್ಟು, ... ಊರಿನ ಹೆಸರನ್ನು ಕೇಳಿದಾಕ್ಷಣ ನಮ್ಮಂತವರ ಮೈ ಪುಳಕಗೊಳ್ಳುತ್ತದೆ. ಅದೇ ಪುತ್ತೂರು ಬಳಿಯ 'ಚಾರ್ವಾಕ' ಹೆಸರಿನ ಊರು.

ಮೊನ್ನೆ ಕೊಲೆಗೀಡಾದ ಕಲ್ಬುರ್ಗಿಯವರಂತೆ ಭಾರತದಂತಹ ದೇಶದಲ್ಲಿ ಎಷ್ಟೋ ಚಾರ್ವಾಕರು ಕೊಲೆಗೀಡಾಗಿದ್ದರು ಅಥವಾ ಹಿಂಸೆಗೆ ಗುರಿಯಾಗಿದ್ದರು. ಏಸು ಕ್ರಿಸ್ತ ಉಳಿದವರ ಪಾಪಗಳನ್ನು ತನ್ನ ಮೈಮೇಲೆ ಹೊತ್ತುಕೊಂಡು ತಾನು ಶಿಲುಬೆಗೇರಿದಂತೆ ತಾವು ಹಿಂಸೆಗೊಳಪಟ್ಟು ಈ ಚಾರ್ವಾಕರು ಉದ್ಧರಿಸಿದ್ದು ಯಾರನ್ನು ಗೊತ್ತೇ? ಆ ಕಾಲದಲ್ಲಿ (ಈಗಲೂ ಕೂಡ) ಧರ್ಮ-ಶಾಸ್ತ್ರ ಕರ್ಮ-ಫಲ ಇತ್ಯಾದಿಗಳ ಭ್ರಮೆ ಬಿತ್ತಿ ಗುಲಾಮರಂತೆ ನಡೆಸಿಕೊಳ್ಳಲಾಗುತ್ತಿದ್ದ ಶೂದ್ರ ಹಾಗು ಮಹಿಳೆಯರನ್ನು (ರಾಜಾರಾಮ್ ಮೋಹನ್ ರಾಯ್, ವಿವೇಕಾನಂದರೂ ಮಾಡಿದ್ದು ಇದನ್ನೇ). ಇವರೆಲ್ಲ ಸಮಾಜದಲ್ಲಿ ಅಸಮಾನತೆ ದೌರ್ಜನ್ಯಗಳಿಗೆಲ್ಲ ಮೂಲವಾಗಿರುವ ಮೌಢ್ಯಗಳ ವಿರುದ್ಧ ಧ್ವನಿಯೆತ್ತಿದಂತವರು. ಅಂತವರ ಹೆಸರಿನ ಊರಿನಲ್ಲಿ ಹುಟ್ಟಿದ ನಿಮ್ಮಂಥವರ ನಡವಳಿಕೆ ಹಾಗು ಮಾತುಗಳನ್ನು (ಅಷ್ಟಕ್ಕೂ ಚಾರ್ವಾಕ ಅಂದರೇನು ಗೊತ್ತೆ? ಚಾರು ವಾಕ್ ಅಂದರೆ ಸಿಹಿಮಾತು ಎಂದರ್ಥ) ಕೇಳಿದರೆ ಅಸಹ್ಯವೆನಿಸಿ ವಾಕರಿಕೆ ಬರುತ್ತದೆ.

ಸಿಖ್ ಜನಾಂಗದ ಮೇನಕಾ ಗಾಂಧಿ ಕರಡಿ, ಕೋಳಿ, ನಾಯಿ, ಬೆಕ್ಕಿಗೆ ಹಿಂಸಿಸುವವರ ವಿರುದ್ಧ ಮಾತಾಡಿ ಪ್ರಾಣಿದಯೆಗೆ ಹೆಸರುವಾದ ವ್ಯಕ್ತಿ. ಅದೇ ಹಿನ್ನೆಲೆಯಲ್ಲಿ ಆಕೆಗೆ ಸಿಕ್ಕ ಖಾತೆಯೂ ಅಂತದ್ದೇ ಆಗಿತ್ತು. ಆದರೆ ಹಿಂದೂ ಅಲ್ಲದ ಆಕೆಯ ಮಗ ಹಿಂದೂಗಳ ಕಣ್ಮಣಿಯಾದದ್ದು ಕಡಿ ಕೊಚ್ಚು ಎಂಬ ಹಿಂಸಾತ್ಮಕ ಭಾಷಣಗಳ ಮೂಲಕ. ಇದನ್ನು ಯಾಕೆ ಹೇಳುತ್ತಿದ್ದೇನೆಂದರೆ, ನಿಮ್ಮ ಕಷ್ಟ ನಮಗೆ ಖಂಡಿತಾ ಅರ್ಥವಾಗುತ್ತದೆ. ಚೆಡ್ಡಿಪಾಳಯದಲ್ಲಿ ಕಂಗೊಳಿಸ ಬೇಕಾದರೆ ಈ ಹೊಡಿ ಬಡಿ ಕಡಿಯಂತಹ ಉದ್ರೇಕಕಾರಿ ಮಾತಾಡುವ ಅನಿವಾರ್ಯತೆ ನಿಮಗಿದೆಯೆಂಬುದು ನಮಗೂ ಗೊತ್ತು. "ಸೀಯೆಂ ಅವರನ್ನು ಈ ದಾರಿಯಲ್ಲಿ ಬರಲು ಬಿಡಬೇಡಿ! ಸಿದ್ದರಾಮಯ್ಯ ಮೋದಿಯ ಬಳಿ ಕೂದಲಿಗೂ ಕಡೆ! ರಾಹುಲ್ ಗಾಂಧಿ ಒಬ್ಬ ಬಚ್ಚಾ! ಸೊರಕೆ ಅತ್ಯಾಚಾರಿ! ಕಾರ್ನಾಡ್ ಅಜ್ಞಾನಿ!" ಇಂತಹ ನಿಮ್ಮಯ ತರಹೇವಾರಿ "ಚಾರು ವಾಕ್ಕು" ಗಳು ನಿಮಗೆಲ್ಲ ಒಂದು ರೀತಿಯ 'ಟಾನಿಕ್' ಇದ್ದಂತೆ ತಾನೇ? ಅದೂ ಅಲ್ಲದೇ ಈಗ ಮೂಸುವವರಿಲ್ಲದ ನಿಮ್ಮ ಗಾಡ್‌ಫಾದರ್ ಕಮ್ ಇನ್ನೇನೋ ಆದ ಯಡ್ಡಿಯನ್ನೇ ಕೇವಲ ನೆಚ್ಚಿ ಕೂತರೆ ಪಕ್ಷದಲ್ಲಿ ನಿಮಗೆ ಮೇಲೇರುವುದು ಕನಸಿನ ಮಾತು ಬಿಡಿ.

ಒಂದು ಪತ್ರ

ಕನ್ನಡಕ್ಕಷ್ಟೇ ಸೀಮಿತವಾಗಿರದೇ, ಕನ್ನಡವನ್ನೂ ಮರೆಯದೇ, ಅದೇರೀತಿ ಕೇವಲ ಸಾಹಿತ್ಯದಲ್ಲಷ್ಟೇ ತೊಡಗಿಸಿಕೊಳ್ಳದೇ ಎಲ್ಲದರಲ್ಲೂ ಇದ್ದು ಎಲ್ಲದಕ್ಕೂ ಸ್ಪಂದಿಸುತ್ತಿರುವ ಕಾರ್ನಾಡರ ಬಗ್ಗೆ ಆತ ಒಬ್ಬ ಅಜ್ಞಾನಿ ಎಂದು ನೀವು ಕರೆದದ್ದು ಅದು ನಿಮ್ಮ ಮಟ್ಟಿಗೆ ಸರಿಯೇ ಹೌದು ಸೋಬಕ್ಕ, ಅಲ್ಪ ಜನರಿಗೆ ಎಲ್ಲರೂ ಅಲ್ಪರಾಗೇ ತೋರುತ್ತಾರೆ ಬಿಡಿ ಅದರಲ್ಲಿ ತಪ್ಪೇನಿಲ್ಲ, ಆದರೆ, ಆತ ಕಾಂಗ್ರೆಸ್ ಚಮಚಾ ಆ ಕಾರಣಕ್ಕೆ ಆತನಿಗೆ ಜ್ಞಾನಪೀಠ ಸಿಕ್ಕಿದ್ದು ಎಂದು ಅವರನ್ನು ಹೀಯಾಳಿಸಿದ್ದರ ಸತ್ಯಾಸತ್ಯತೆ ಹಾಗು ಅವರ ನಿಜ ಅರ್ಹತೆ ಬಲ್ಲವರಿಗೆ ಗೊತ್ತು ಬಿಡಿ. ಏನೇ ಇರಲಿ ಆವತ್ತು ಬಿಜೆಪಿಯ ಚೊಚ್ಚಲ (ಹಾಗು ಕೊನೆಯ) ಸರಕಾರದ ಏಕೈಕ ಮಂತ್ರಿಣಿಯಾಗಿ ಎಲ್ಲಾ ಸೀನಿಯರ್‌ಗಳನ್ನು ತಾವು ಹಿಂದಿಕ್ಕಿ ಅಧಿಕಾರಕ್ಕೇರಿದ್ದು ಯಡ್ಡಿಯೆಂಬ ಸಹಚರನ ವಶೀಲಿಯಿಂದೆಂಬ ಸತ್ಯ ನಿಮಗೆ ನೆನಪಿಲ್ಲವೇ? ಇನ್ನು ಕಾರ್ನಾಡರ ವಶೀಲಿಯ ತಲೆಬಿಸಿ ನಿಮಗೆ ಬೇಡ.

ಮೊನ್ನೆ ಬ್ರಾಹ್ಮಣ ಮಹಿಳಾ ಸಮಾರಂಭವೊಂದರಲ್ಲಿ "ಭಾರತೀಯ ಸಂಸ್ಕೃತಿ ಉಳಿದದ್ದೇ ಮಹಿಳೆಯರಿಂದ, ವಿಚಾರವಾದಿಗಳಿಂದಲ್ಲ" ಎಂದಿದ್ದೀರಿ. ನಿಮ್ಮಂತಹ ಲಿವಿಂಗ್ ಟುಗೆದರ್ ಖ್ಯಾತಿಯ ಹರಕು ಬಾಯಿಯ ಮಹಿಳೆಯರು ಯಾವ ಸಂಸ್ಕೃತಿಯನ್ನು ಉಳಿಸಿದರೋ ದೇವರಿಗೇ ಗೊತ್ತು.

ಇನ್ನು ನಿಮ್ಮ ದೊಡ್ಡಣ್ಣನಂತಿರುವ, ನಿಮ್ಮಂತೆಯೇ ಇನ್ನೊಬ್ಬ ಸಂಸ್ಕೃತಿ ರಕ್ಷಕ ಎದುರಿದ್ದ ಹೆಣ್ಣಿನ ಕುರಿತು ಎಲ್ಲರೆದುರೇ "ನಿನ್ನ ಎಳೆದೊಯ್ದು ರೇಪ್ ಮಾಡಿದರೆ.." ಎಂದು ಕೇಳುವಂತಹ ಅಪ್ಪಟ ಸಂಸ್ಕೃತಿವಂತ ಈಶ್ವರಪ್ಪ "ಸಿದ್ದರಾಮಯ್ಯನವರ ಹೆಸರು ಸಿದ್ದಿಕ್ ರಹೀಮ್ ಆಗಲಿ ನೋಡುವಾ" ಎಂದು ಸವಾಲೆಸೆದಿದ್ದಾರೆ. ಖಂಡಿತಾ ಒಂದುವೇಳೆ ಹಾಗೆ ಬದಲಾದರೂ ತುಳಿತಕ್ಕೊಳಗಾದ ವರ್ಗದಿಂದ ಬಂದರೂ ಈಶ್ವರಪ್ಪನಂತೆ ವೈದಿಕರ ಕಾಲು ನೆಕ್ಕುವ ಗುಲಾಮನಂತೆ ವರ್ತಿಸುವುದಕ್ಕಿಂತ ಇದೇ ಎಷ್ಟೋ ವಾಸಿ ಬಿಡಿ. ಇಲ್ಲಿ ವೈದಿಕರನ್ನು ಹಳಿದು ಪ್ರಯೋಜನವಿಲ್ಲ ಈಶ್ವರಪ್ಪ ಹಾಗು ನಿಮ್ಮಂತಹವರೇ ವೈದಿಕರ ದಾಳಗಳು. ಅದನ್ನು ಮೊದಲು ಅರ್ಥಮಾಡಿಕೊಳ್ಳಿ.. ಬಯಿಬಿಟ್ಟು ತುಳಿತಕ್ಕೊಳಗಾದವರ ಸ್ವಾಭಿಮಾನಕ್ಕೆ ಧಕ್ಕೆ ತರಬೇಡಿ.

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಕರ್ನಾಟಕಕ್ಕೆ ಟಿಪ್ಪು ಸುಲ್ತಾನ್ ಕೊಡುಗೆ ಏನ್ರಿ?

ಟಿಪ್ಪು ಜಯಂತಿ ಆಚರಣೆ ಬಗ್ಗೆ ಚಡ್ಡಿಗಳು ಚಡ್ಡಿ ಹರಿದುಕೊಂಡು, ಭಜರಂಗಿಗಳು ಬನೀನನ್ನು ಚಿಂದಿ ಮಾಡಿಕೊಂಡು, ಬಿಜೆಪಿಗಳು ಬಂಬಡ ಬಜಾಯಿಸುತ್ತಿರುವ ಹೊತ್ತಿನಲ್ಲಿ ಟಿಪ್ಪುವಿನಂತೆಯೇ ರಾಜ್ಯ ವಿಸ್ತರಣೆಗಾಗಿ ಕರ್ನಾಟಕ ಸುತ್ತುತ್ತಿರುವ ಕುಮಾರಣ್ಣನವರನ್ನು ಮಾತನಾಡಿಸಬೇಕಾಗಿ ಬಂತಲ್ಲಾ, ಕಾರಣ "ಟಿಪ್ಪು ಕರ್ನಾಟಕಕ್ಕೆ ಏನು ಮಾಡಿದ್ದಾನೆ" ಎಂಬ ಕುಮ್ಮಿ ಪ್ರತಿಕ್ರಿಯೆ ನಮ್ಮನ್ನು ದಂಗುಬಡಿಸಿದೆ. ಫೋನ್ ಮಾಡಿದರೆ ರಿಂಗಾಯ್ತು,

ರಿಂಗ್‌ಟೋನ್: "ರಾಧಿಕೆ ನಿನ್ನ ಸರಸವಿದೇನೆ, ಮುರುಳಿಯ ಮರೆಸಿ, ನಗುತಿಹೆ ಸರಸೀ ನಿನ್ನ ವಿನೋದವಿದೇನೆ ಕಡು ಜಾಣೆ.... ರಾ"

"ಹಲೋ ಯಾರು?"

"ನಮಸ್ಕಾರ ಕುಮಾರಣ್ಣಾರೆ, ನಾನು ಯಾಹು."

"ಏನೇಳಿ ಯಾಹು ಅವರೆ."

"ಮುಗೀತಾ ಸಾರ್ ದಂಡಯಾತ್ರೆ?"

"ದಂಡಯಾತ್ರೆ ಚನ್ನಾಗಿತ್ತು, ಆದ್ರೆ ನಾನೊಬ್ಬನೆ ತಿರುಗಾಡಿ ದುಡುದು ಪಾರ್ಟಿ ಕಟ್ಬತಕ್ಕಂತದನ್ನ ನೆನೆಸಿಕೊಂಡ್ರೆ ಬೇಜಾರಾಗತಕ್ಕಂತ ಒಂದು ಸನ್ನಿವೇಶ ಸೃಷ್ಟಿಯಾಗಿದೆ."

"ಜೆಡಿಎಸ್ ಖಾಸಗಿ ಪಾರ್ಟಿಯಾದ್ದರಿಂದ ನೀವು ಕಷ್ಟ ಪಡಲೇಬೇಕಲ್ಲವ ಸಾರ್?"

"ಯಾರ್ರಿ ಖಾಸಗಿ ಪಾರ್ಟಿ ಅಂತ ಹೇಳಿದ್ದು?"

"ನಿಮ್ಮ ಪಾರ್ಟಿಯವರೆ ಅಂಗಂದ್ರು ಸಾರ್. ಗೌಡ್ರು ರಾಷ್ಟ್ರೀಯ ಅಧ್ಯಕ್ಷ. ನೀವು ರಾಜ್ಯಾಧ್ಯಕ್ಷರು. ರೇವಣ್ಣ ಸದನದ ಅಘೋಷಿತ ಲೀಡ್ರು. ಅನಿತಕ್ಕ ಮಹಿಳಾ ಲೀಡ್ರು. ಹೊಸ ತರುಣ ಜನಾಂಗಕ್ಕೆ ಪ್ರಜ್ವಲ್ ಪ್ರತಿನಿಧಿ. ಅಂದಮೇಲೆ ಅದು ಖಾಸಗಿ ಪಾರ್ಟಿಯಾಗಲ್ಲವ ಅಂತ ಬಾಲಣ್ಣ, ಚಲುವಣ್ಣ, ಜಮೀರಣ್ಣ ಗುಟ್ಟಾಗಿ ಮಾತಾಡಿಕತ್ತರಂತೆ."

"ಅದ್ಕೆ ಅವ್ರುರನ್ನ ಎಲ್ಲಿಡಬೇಕೊ ಅಲ್ಲಿ ಇರಿಸಿದ್ದೀವಿ."

"ಇನ್ನೊಂದು ವಿಷಯ ಸಾರ್. ಗೌಡ್ರು ಟಿವಿಲಿ ನಮ್ಮದು ಅಪ್ಪಮಕ್ಕಳ ಪಾರ್ಟಿ ಅಂದುಬುಟ್ಟವರೆ."


"ಅದು ಸರಿಯಲವೇನ್ರಿ. ನಮ್ಮದಿನ್ನೇನು ಮಾವ ಬಾ ಮಕ್ಕಳ ಪಾರ್ಟಿನೆ? ನಮ್ಮ ತರ ಹಗಲುರಾತ್ರಿ ದುಡುದು ಪಾರ್ಟಿ ಕಟ್ಟೊ ಶಕ್ತಿಯಿಲ್ಲದೋರು ಏನಾದ್ರು ಅಂದುಕೊಳ್ಳಿ. ನಾವು ಪಾರ್ಟಿ ಕಟ್ಟಿ ಜೆಡಿಎಸ್‌ನ ಅಧಿಕಾರಕ್ಕೆ ತಂದೇ ತರ್ತಿವಿ."

"ಒಂದಿಷ್ಟು ಯಡವಟ್ಟಾಯ್ತಾ ಅದಲ್ಲ ಸಾರ್. ಅದೂ ನಿಮ್ಮ ನಡವಳಿಕೆಯಿಂದ."

"ನನ್ನ ನಡವಳಿಕೆ ಏನಾಗಿದೇರಿ?"

"ಸಾರ್ ಒಂದು ಅಂದಾಜಿನ ಪ್ರಕಾರ ಮುಸ್ಲಿಮರ ನಲವತ್ತು ಪರಸೆಂಟ್ ಓಟು ಜೆಡಿಎಸ್ ತಗೊಳ್ತಿತ್ತಂತೆ. ಅದ್ಕೆ ನಿಮಗೆ ನಲವತ್ತು ಸೀಟು ಬಂದಿದ್ದು. ಆದ್ರೀಗ ಆ ಪರಸೆಂಟು ಜರ್ರಂತ ಕ್ಯಳಿಕೆ ಇಳದವಂತೆ."

"ಯಾಕ್ರಿ ಇಳದದೆ? ಅಂತದ್ದೇನೂ ಆಗಿಲ್ಲ."



"ಸಾರ್, ಟಿಪ್ಪು ಜಯಂತಿ ಸಂದರ್ಭದಲ್ಲಿ ಬಿಜೆಪಿಗಳು ಪ್ರತಿಭಟಿಸಿದಾಗ ನೀವು ಸುಮ್ಮನಿದ್ರಿ. ಆನಂತರ ಟಿಪ್ಪು ಕೊಡುಗೆ ಏನು ಕರ್ನಾಟಕಕ್ಕೆ ಅಂದ್ರಿ. ಆದ್ರಿಂದ ಜೆಡಿಎಸ್ ಸಾಬ್ರು ಶ್ಯಾಕಾಗ್ಯವ್ರುರೆ ಸಾರ್."

"ಶಾಕಾದ್ರೆ ನಮ್ಮ ಜಮೀರ್ ಸರಿಮಾಡ್ತನೆ ಕಂಡ್ರಿ."

"ಸುಳ್ಳು ಸಾರ್. ಜಮೀರು ಮದ್ಲಿನಂಗಿಲ್ಲ. ನಿಮ್ಮತ್ರ ಒಂದು ಕಾಲಿದ್ರೆ ಇನ್ನೊಂದು ಸಿದ್ದರಾಮಯ್ಯನತ್ರ ಅದೆ."

"ಆದ್ರೂ ನಾವೇಳಿದಂಗೆ ಕೇಳ್ತನೆ."

"ಕೇಳ್ತನೆ ಸರಿ, ಆದ್ರು ನೀವೇಳಿದಂಗೆ ನಡಕೊಳಲ್ಲ. ಟಿಪ್ಪು ಬಗ್ಗೆ ಅಜ್ಞಾನದಿಂದ ಮಾತಾಡಿದ್ದಿರಿ."

"ಅಂಗಿದ್ರೆ ಟಿಪ್ಪು ಏನು ಮಾಡಿದಾನೆ ಅಂತ ತೋರುಸ್ರಿ."

"ನಿಮ್ಮ ದತ್ತನ್ನ ಕೇಳಿದ್ರೆ ಹೇಳತಿದ್ನಲ್ಲ ಸಾರ್. ಮುಂದೆ ಕರ್ನಾಟಕ ಆಳೊ ನೀವು ಇತಿಹಾಸನಾದ್ರು ಸರಿಯಾಗಿ ತಿಳಕೊಬೇಕು."

"ಮೊದ್ಲು ಎಂಪಿ ಆಗಿ, ನಂತರ ಎಮ್ಮೆಲ್ಲೆ ಆಗಿ, ಮುಖ್ಯಮಂತ್ರಿ ಆಗಿದ್ದ ನನಗೆ ಕರ್ನಾಟಕದ ಇತಿಹಾಸ ಗೊತ್ತಿದೆ ಕಂಡ್ರಿ. ಅದ್ಕೆ ಟಿಪ್ಪು ಏನು ಮಾಡಿದ್ದ ಅಂತ ಕೇಳಿದ್ದು."

"ನೋಡಿ ಸಾರ್, ಟಿಪ್ಪು ಯುದ್ಧ ಮಾಡಿದಾನೆ. ಆಡಳಿತ ಮಾಡಿದಾನೆ. ಯುದ್ಧದ ವಿಷಯನ ಚಡ್ಡಿಗಳು ಹಿಡಿಕಂಡವೆ. ಆಡಳಿತದ ವಿಷಯನ ಕಾಂಗ್ರೆಸ್‌ನವರು ಹಿಡಕಂಡವೆ. ಮಧ್ಯದಲ್ಲಿರೊ ನೀವು ಸರಿಯಾಗಿ ಗ್ರಹಿಸಿ ಮಾತಾಡಬೇಕು. ಇನ್ನು ಮುಂದಾರ ಅಂಗೆ ಮಾತಾಡಿ. ಆಗ ಕರ್ನಾಟಕ ಇರಲಿಲ್ಲ, ಮೈಸೂರು ದೇಸ ಇತ್ತು. ಈ ಮೈಸೂರು ದೇಶದಲ್ಲಿ ಶಕ್ತಿದೇವತೆಗಳಿಗೆ ನರಬಲಿ ಕೊಡತಾಯಿದ್ರು. ನಿಮ್ಮ ತಮ್ಮನಂಗಿರೊ ಶಿವರಾಮೇಗೌಡನ ಊರಲ್ಲೂ ನರಬಲಿಯಿತ್ತು. ಆ ವಾಸನೆ ಇನ್ನೂ ಶಿವರಾಮೇಗೌಡನಲ್ಲಿ ಇರೋದ್ರಿಂದ ಸಿದ್ದರಾಮಯ್ಯನ ರುಂಡ ಹಾರುಸ್ತಿನಿ ಅಂದ ಚಿನ್ನಬಸಪ್ಪನ ತಲೆ ನಾನು ತಗೀತಿನಿ ಅಂದಿರದು. ಅದಿರ್ಲಿ ಟಿಪ್ಪು ನರಬಲಿ ತಪ್ಪಿಸಿದ್ದ ಸಾರ್."

"ಇದ್ಯಂಗೆ ಕರ್ನಾಟಕಕ್ಕೆ ಮಾಡಿದ ಉಪಕಾರ ಆಗುತ್ತೆ?"

"ನಿಮ್ಮ ಪ್ರಶ್ನೆ ಸರಿ. ಯುದ್ಧ ಮಾಡ್ತಾ ನೂರಾರು ಜನಗಳ ತಲೆ ಚೆಂಡಾಡಿದ ಟಿಪ್ಪು ನರಬಲಿ ತಪ್ಪಿಸಿದ್ದು ಯಾವ ಲೆಕ್ಕ ಅನ್ನಕಬವುದು. ಆದ್ರು ಯುದ್ಧವೇ ಬೇರೆ, ಅಮಾಯಕರ ಬಲೀನೆ ಬೇರೆ ಸಾರ್. ಇದೂ ಕೂಡ ಈ ನೆಲದ ಜನರಿಗೆ ಮಾಡಿದ ಉಪಕಾರಲ್ಲವೆ."

"ರಿ, ನಾನೇಳೊ ಉಪಕಾರನೆ ನಿಮಗೆ ಅರ್ಥವಾಗ್ತಯಿಲ್ಲ ಅನತಕ್ಕಂತದ್ದು ನನ್ನ ಗಮನಕ್ಕೆ ಬರ್ತಾಯಿದೆ. ಆತ ರೈತರಿಗೇನು ಮಾಡಿದ? ಅವ್ರುರು ಬದುಕನ್ನ ಮಾಡ್ತಕ್ಕಂತದಕ್ಕೆ ಏನು ಮಾಡಿದ ಅಂತ?"

"ನೀವು ಮಣ್ಣಿನ ಮಗನ ಮಗನಾಗಿ ಟಿಪ್ಪು ರೈತರಿಗೇನು ಮಾಡಿದ ಅನ್ನದಾದ್ರು ತಿಳಕಬೇಕು ಸಾರ್. ಟಿಪ್ಪು ಕಾಲದಲ್ಲಿ ರೈತರು ಚೆನ್ನಾಗಿದ್ರು ಸಾರ್. ಆದ್ರೆ ದೊಡ್ಡ ಜಮೀನ್ದಾರು ಅವನ ವಿರೋಧಿಗಳಾಗಿದ್ರು. ಅರಸು ಕಾಲದಲ್ಲೂ ಅಂಗೆ ಅಲವ. ಅದಿರ್ಲಿ, ಟಿಪ್ಪು ಒಳ್ಳೆ ರೇಷ್ಮೆ ತಳಿ ತಂದು ರೈತರಿಗಂಚಿದ್ದ. ಆ ತಳಿಯಿಂದ ರೈತರು ಇಂದೂ ಕೂಡ ಚೆನ್ನಾಗಿದಾರೆ. ಅವರಿಗೆ ಅನುಕೂಲವಾಗ್ಲಿ ಅಂತ ಗಂಜಾಂನಲ್ಲಿ ಗಾಡಿ ತಯಾರಿಸಿ ಸುಲಭದ ಬೆಲೆಗೆ ವಿತರಣೆಯಾಗಂಗೆ ಮಾಡಿದ್ದ. ಮೊನ್ನೆಮೊನ್ನೆವರಿಗೂ ಶ್ರೀರಂಗಪಟ್ಟಣದ ಗಂಜಾಂಗಾಡಿ ಫೇಮಸ್ ಆಗಿದ್ವೊ."

"ಹೌದೇನ್ರಿ?"

"ಹೌದು ಸಾರ್. ಅವನ ಕಾಲದಲ್ಲಿ ಬಹುತೇಕ ರೈತರೆಲ್ಲಾ ಒಕ್ಕಲಿಗರೇ ಆಗಿದ್ರು. ಅವ್ರುರನ್ನೆಲ್ಲಾ ಚೆನ್ನಾಗಿ ನೋಡಿಕೊಂಡ. ರೈತರ ದಂಗೆಯಾಗ್ಲಿ, ಇವತ್ತಿನಂಗೆ ಆತ್ಮಹತ್ಯೆಯಾಗ್ಲಿ ನಡೀಲೇ ಇಲ್ಲ. ಬಾಲಕಾರ್ಮಿಕರು ಇಲ್ಲದಂಗೆ ಮಾಡಿದ್ದ. ಸೂಳೆಗಾರಿಕೆ ನಿಷೇಧ ಮಾಡಿದ್ದ. ಮಾರ್ಕೆಟಿನ ಅಗತ್ಯಕ್ಕೆ ತಕ್ಕಂಗೆ ದಿನಸಿ ವಿತರಣೆ ಮಾಡಿ ಯಾವ್ರುದೇ ಅಕ್ರಮ ನಡಿದಂಗೆ ವರ್ತಕರಿಗೆ ಎಚ್ಚರಿಕೆ ಹೇಳಿ ರೈತರಿಗೆ ಸಹಾಯ ಮಾಡಿದ್ದ."

"ಇವ್ರುನ್ನೆಲ್ಲ ಯಾರ್ರಿ ನಿಮಿಗೇಳಿದ್ದು?"

"ಆ ಕಾಲದ ದಾಖಲೇನೆ ಹೇಳ್ತವೆ ಸಾರ್. ಅವ ನೋಡಿಕಂಡ್ರು ಸಾಕು. ಆವನು ಮತಾಂಧ ಅಂತರಲ್ಲ, ಅಂಗನ್ನೋರ. ಪೂರ್ವಿಕರು ಟಿಪ್ಪು ಆಸ್ಥಾನದಲ್ಲಿ

ಥೂತ್ತೇರಿ

ಯಾಹೂ

ಮಂತ್ರಿಗಳಾಗಿದ್ರು ಸಾರ್. ಅವರ್ಯಾರು ಇತಿಹಾಸ ಬ... ತಿಂದು, ಉಂಡು, ತೇಗಿ ಸತ್ತವರೆ. ಪಾಪ ನವ... ಲಾವಣಿ ಕಲ್ತು ಹಾಡಿದ್ರು, ನಾಟಕ ಆಡಿದ್ರು. ಗೊತ್ತ ಸಾರ್, ಬೆಂಗಳೂರು ಕೆಎಸ್‌ಆರ್‌ಟಿ... ನಿಲ್ದಾಣ ಅದಲ್ಲಾ, ಅದರ ಪಕ್ಕ ಇರೋ ಮೈ... ಸಾರಿಗೆ ನೌಕರರು ಟಿಪ್ಪು ನಾಟಕ ಆಡತಿದ್ರು. ಅದ... ಫೇಮಸ್ಸಾಗಿತ್ತು ಗೊತ್ತ. ವೀರಪ್ಪ ಅನ್ನೋನು ಬಿಳಿ... ಮೇಲೆ ಸ್ಟೇಜಿಗೆ ಬತ್ತಿದ್ದ. ಟಿಪ್ಪು ಮಕ್ಕಳ ಒತ್ತೆ ಇ... ಅಳದೇಯಿರೊ ಜನಗಳೇಯಿಲ್ಲ. ಚೆಂದೋಡಿ ಫೇಮಸ್ ಆದದ್ದೆ ಟಿಪ್ಪು ರೋಲ್‌ನಿಂದ. ಮೊನ್ನೆಮೊನ್ನೆಯವರಿಗೂ ದೇಶಭಕ್ತ ಆಗಿದ್ದ ಟಿಪ್ಪು ದೇಶದ್ರೋಹಿ ಮತಾಂಧ ಆದದ್ಯಂಗೆ ಅಂತ ಯೋ... ಮಾಡಿ ಸಾರ್."

"ಯೋಚನೆ ಮಾಡ್ತಿನಿ ಯಾಹು ಅವ್ರುರೆ."

"ಯೋಚನೆ ಮಾಡಕ್ಯಾಗದೆಯಿದ್ರೆ ಫೋನ್... ಕೇಳಿ ಸಾರ್ ಹೇಳ್ತಿನಿ. ಅವ್ರುನು ಮೇಲುಕೋಟೆ ದೇ... ಒಸಿ ಒಡವೆ ವಸ್ತ್ರ ಕೊಟ್ಟಿದ್ದನಾ ಸಾರ್? ... ನಂಜನಗೂಡು, ಶ್ರೀರಂಗಪಟ್ಟಣ ಹಿಂಗೆ ಎಲ್ಲಾ ಹಿಂ... ದೇವಸ್ಥಾನಕ್ಕೆ ಹಿಡಿದಿದ್ದ ಹಿಡದಂಗೆ ಕೊಟ್ಟವ್ರುನೆ... ಸಾಬರ ಮಸೀದಿಗೆ ಕೊಡಕ್ಯಾಗಿಲ್ಲ."

"ಕೊಟ್ಟಿರಬಹುದು ಕಂಡ್ರಿ."

"ಕೊಟ್ಟಿರಬಹುದು. ಆದ್ರೆ ಮುಸ್ಲಿಮರಲ್ಲಿ... ಕತ್ತಿ, ಗುರಾಣಿ, ನೆಕ್ಲೇಸ್, ಉಂಗುರ ಹಾಕೊ... ಇಲವಲ್ಲ ಸಾರ್. ಆದ್ರೆ ಟಿಪ್ಪುವಿಂದ ಒಡ... ತಗಂಡೋರು ಬಾಯಿನೆ ಬುಡ್ತಾಯಿಲ್ಲವಲ್ಲ ಹೇಳಿ. ... ಆತ ಕನ್ನಡದಲ್ಲಿ ಬರೆದ ಪತ್ರ ಶೃಂಗೇರಿ ಮಠದ... ಚಿ.ಮೂ, ಶಂಕರಮೂರ್ತಿ ಟಿಪ್ಪು ಕನ್ನಡದ್ರೋಹಿ ಅ... ಮಾತಾಡದಂಗೆ ಸುಮ್ಮನವ್ರುರಲ್ಲ ಸಾರ್. ಇ... ದ್ರೋಹಿಗಳು ಇನ್ಯಾರವ್ರುರೆ ಸಾರ್?"

"ಟಿಪ್ಪು ಕಾಲ್ದೋರು ಇಲ್ದೆಯಿರದ್ರಿಂದ ಆ ... ನಡೆದ ಪ್ರಕರಣಗಳ ಬಗ್ಗೆ ಮಾಹಿತಿ ಕೊಡ್ತಾಯಿ... ಕಾಣಸ್ತದೆ."

"ದಾಖಲೆ ಇದ್ದಾಗ ಹೇಳಬಹುದಲ್ಲ ಸಾರ್... ಮೇಲೆ ನೀವು ಟಿಪ್ಪು ಬಗ್ಗೆ ವಿಶ್ವನಾಥ್ ತರ ಮಾತಾ..."

"ವಿಶ್ವನಾಥ್ ಏನು ಮಾತಾಡಿದ?"

"ಕರ್ನಾಟಕಕ್ಕೆ ದೇವೇಗೌಡ್ರ ಕೊಡುಗೆ ಏನು... ಕೇಳಿದ್ರು."

"ನಮ್ಮ ತಂದೆ ಕೊಡುಗೆ ಏನು ಅನ್ನದು ಆ... ಗೊತ್ತು, ಅದ್ಕೆ ಉಷಾರಿಲ್ದೆ ಅದೇನೊ ಆಪ... ಮಾಡಿಸಿಕೊಂಡು ಆಸ್ಪತ್ರೆಯಲ್ಲಿ ಮಲಗಿರೋದು..."

"ಥೂತ್ತೇರಿ!!!"

ಮುಖ್ಯಮಂತ್ರಿಗೆ ಬಹಿರಂಗ ಪತ್ರ...

ಗೆ

ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನ ಸೌಧ, ಬೆಂಗಳೂರು.

ವಿಷಯ: ಡಾ. ಎಂ.ಎಂ.ಕಲಬುರ್ಗಿ ಅವರ ಹತ್ಯೆ ಮಾಡಿದ ದುಷ್ಕರ್ಮಿಗಳನ್ನು ಬಂಧಿಸುವಲ್ಲಿ ವಿಳಂಬವಾಗಿರುವ ಕುರಿತು

ಮಾನ್ಯರೇ,

ಪ್ರಖರ ಚಿಂತನೆಗೆ ಹೆಸರಾದ ಡಾ. ಎಂ.ಎಂ. ಕಲಬುರ್ಗಿ ಅವರು ಸಾಂಸ್ಕೃತಿಕ ರಂಗದಲ್ಲಿ ಎಷ್ಟೇ ಪ್ರತಿರೋಧ ಹುಟ್ಟಿಕೊಂಡರೂ ಅವರು ನಂಬಿಕೊಂಡ ಸತ್ಯವನ್ನು ಪ್ರತಿಪಾದಿಸುತ್ತ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬದ್ಧರಾದವರು. ಆರೋಗ್ಯವಂತ ಸಮಾಜಕ್ಕೆ ಮಾರಕವಾದ ಗೊಡ್ಡು ಸಂಪ್ರದಾಯ, ಮೂಢನಂಬಿಕೆ, ಧರ್ಮಾಂಧತೆ, ಕೋಮುವಾದ, ಮನುವಾದ ಮುಂತಾದವು ಅವರು ವಿರೋಧಿಸುವ ವಿಚಾರಗಳಾಗಿದ್ದವು. ಅಂಥ ಪ್ರಖರ ಚಿಂತನೆಯ ನಾಡು ಹೆಮ್ಮೆ ಪಡುವ ಸಂಶೋಧಕರು ಅಪ್ಪಟ ಬಸವ ಅನುಯಾಯಿಗಳೂ ಆಗಿದ್ದ ಕಲಬುರ್ಗಿಯವರನ್ನು ಕೊಲ್ಲುವ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕಾರ್ಯಕ್ಕೆ ದುಷ್ಟಶಕ್ತಿಗಳು ಕೈಹಾಕಿವೆ. ಇದು ಕಲಬುರ್ಗಿಯವರ ಕೊಲೆ ಮಾತ್ರವಾಗಿರದೆ ಅದು ಮಾನವೀಯತೆ, ಪ್ರಜಾಪ್ರಭುತ್ವ, ಬಸವವಾದ, ನಾಗರಿಕತೆ, ವೈಚಾರಿಕತೆಯ ಕೊಲೆಯೂ ಆಗಿದೆ. ಅವರನ್ನು ಕೊಂದ ಕ್ರಿಯೆ ಸ್ಪಷ್ಟವಾಗಿ ಕರ್ನಾಟಕದಲ್ಲಿ ಮತೀಯ ಭಯೋತ್ಪಾದನೆ ಹುಟ್ಟಿಕೊಂಡಿರುವದಕ್ಕೆ ಪುರಾವೆಯಾಗಿದೆ. ಇದು ಸಾಂಸ್ಕೃತಿಕ ಭಯೋತ್ಪಾದನೆಯೂ ಆಗಿದೆ. ಅದು ವೈಚಾರಿಕ ಭಿನ್ನಾಭಿಪ್ರಾಯವನ್ನು ಸಹಿಸದ ಮನಸ್ಥಿತಿಗಳು ಅದನ್ನು ಹಿಂಸೆಯಿಂದ ಎದುರಿಸಲು ಮುಂದಾಗಿರುವದರ ನಿಖರ ಸೂಚನೆಯಾಗಿದೆ. ಇದು ಕನ್ನಡ ಸಾಂಸ್ಕೃತಿಕ ಲೋಕದ ಆತಂಕಕಾರಿ ಬೆಳವಣಿಗೆಗೆ. ಕಲಬುರ್ಗಿಯವರ ಹತ್ಯೆ ನಡೆದು ಎರಡೂವರೆ ತಿಂಗಳು ಗತಿಸಿದರೂ ಹತ್ಯಾಕೋರರನ್ನು ಬಂಧಿಸಲು ಸಾಧ್ಯವಾಗಿಲ್ಲ, ಆಗಾಗ ತಾವು ಮತ್ತು ಪೊಲೀಸ ವರಿಷ್ಟರು ಹತ್ಯಕೋರರನ್ನು ಬಂಧಿಸುವ ಆಶ್ವಾಸನೆಯನ್ನು ನೀಡುತ್ತಿರುವಿರಿ. ಇಲ್ಲಿಯವರೆಗೆ ತನಿಖೆಯಲ್ಲಿ ಯಾವುದೇ ಬೆಳವಣಿಗೆ ಆದಂತೆ ಕಾಣಿಸುತ್ತಿಲ್ಲ, ಸರಕಾರ ಹಾಗೂ ಪೊಲೀಸ್ ಇಲಾಖೆಗಳ ಮೇಲಿನ ನಂಬಿಕೆ ಕುಸಿಯುತ್ತಿದೆ. ಡಾ. ಎಂ. ಎಂ. ಕಲಬುರ್ಗಿ ಹತ್ಯಾವಿರೋಧಿ ಹೋರಾಟ ಸಮಿತಿ, ಈ ಹಿಂದೆಯೇ ವಿಶೇಷ ತನಿಖಾ ತಂಡವನ್ನು ರಚಿಸಲು ಒತ್ತಾಯಿಸಿತ್ತು, ಇಲ್ಲಿಯವರೆಗೆ ಅಂಥ ಕ್ರಮವನ್ನು ಕೈಗೊಂಡಿಲ್ಲ, ತಕ್ಷಣ ಸರಕಾರ ವಿಶೇಷ ತನಿಖಾ ತಂಡವನ್ನು ರಚಿಸಿ ಹತ್ಯೆಯ ತನಿಖೆಯನ್ನು ತೀವ್ರಗೊಳಿಸಿ ಒಂದು ಕಾಲಮಿತಿ ಹಾಕಿಕೊಂಡು ಹತ್ಯಾಕೋರರನ್ನು ಬಂಧಿಸಲು ಒತ್ತಾಯಿಸುತ್ತೇವೆ. ಕಲಬುರ್ಗಿಯವರ ಹತ್ಯೆಯನ್ನು ಖಂಡಿಸಿ ಮತ್ತು ದೇಶದಲ್ಲಿ ಹೆಚ್ಚುತ್ತಿರುವ ಅಸಹಿಷ್ಣುತೆಯನ್ನು ಪ್ರತಿರೋಧಿಸಿ ಕರ್ನಾಟಕದ ಲೇಖಕರಲ್ಲದೆ ದೇಶದ ಎಲ್ಲ ಭಾಗಗಳಿಂದ ಲೇಖಕರು ಪ್ರಶಸ್ತಿ ವಾಪಸಾತಿ ಮಾಡುತ್ತಿದ್ದಾರೆ. ಈ ಪ್ರತಿರೋಧವು ಚಳವಳಿಯೋಪಾದಿಯಲ್ಲಿ ನಡೆಯುತ್ತಿರುವದನ್ನು ನೋಡಿಯೂ ಎಚ್ಚರಗೊಳ್ಳದ ಸರಕಾರದ ನಡೆ ನಮ್ಮನ್ನು ಹತಾಶರನ್ನಾಗಿ ಮಾಡಿದೆ. ಈ ವಾಸ್ತವವನ್ನು ಸರಿಯಾಗಿ ಗ್ರಹಿಸಿಕೊಂಡು ಸರಕಾರ ಮೈಕೊಡವಿಕೊಂಡು ತನಿಖೆಯನ್ನು ತೀವ್ರಗೊಳಿಸಬೇಕೆಂದು ಕರ್ನಾಟಕದ ಲೇಖಕ ಚಿಂತಕ ಸಮುದಾಯ ಒತ್ತಾಯಿಸುತ್ತದೆ. ಹತ್ಯಾಕೋರರನ್ನು ಬಂಧಿಸುವುದು ಕೊಲೆಯ ಹಿಂದಿನ ಕಾರಣಗಳನ್ನು ಬಯಲಿಗೆಳೆಯುವುದು ಸರಕಾರದ ಕರ್ತವ್ಯವಾಗಿದೆ.

ಹಕ್ಕೊತ್ತಾಯಗಳು

1) ಡಾ. ಎಂ. ಎಂ. ಕಲಬುರ್ಗಿಯವರನ್ನು ಹತ್ಯೆ ಮಾಡಿದ ಹತ್ಯಾಕೋ... ಬಂಧಿಸಲು ವಿಫಲವಾದ ಸರಕಾರದ ಆಡಳಿತದ ನೀತಿಯನ್ನು ತೀ... ಖಂಡಿಸುತ್ತೇವೆ. ತಕ್ಷಣವೇ ವಿಶೇಷ ತನಿಖಾ ತಂಡವನ್ನು ರಚಿಸಿ... ಕಾರ್ಯವನ್ನು ಚುರುಕುಗೊಳಿಸಿ ಹಂತಕರನ್ನು ಬಂಧಿಸಲು ಮುಂದಾ...

2) ರಾಜ್ಯದಲ್ಲಿ ಹೆಚ್ಚುತ್ತಿರುವ ಕೋಮು ಚಟುವಟಿಕೆಗಳನ್ನು ರಾಜ್ಯ ಸ... ಹಿಮ್ಮೆಟ್ಟಿಸಬೇಕು. ಕರಾವಳಿ ಜಿಲ್ಲೆಗಳಲ್ಲಿಯಂತೂ ಕೋ... ಹರಡಲಾಗಿದೆ. ಇದಕ್ಕೆ ಅಲ್ಲಿಯ ಭಾವೈಕ್ಯ ಪರಂಪರೆಯೇ ಬ... ಜನತೆಯ ಬದುಕು ವಿಘಟಿತವಾಗುತ್ತಿದೆ. ಇದಕ್ಕೆ ಎರಡೂ ಕ... ಮತಾಂಧರು ಎಷ್ಟು ಕಾರಣವೋ ಇದನ್ನು ನಿಗ್ರಹಿಸಲಿಕ್ಕಾಗದ ಸ... ಅಷ್ಟೇ ಕಾರಣವಾಗಿದೆ. ಮತೀಯ ಶಕ್ತಿಗಳನ್ನು ಹತ್ತಿಕ್ಕಲು ... ತೆಗೆದುಕೊಳ್ಳಬೇಕು. ರಾಜ್ಯದಲ್ಲಿ ಮತೀಯ ಸಂಘಟನೆಗಳನ್ನು ನಿಷೇ...

3) ಡಾ. ಎಂ ಎಂ ಕಲಬುರ್ಗಿಯವರ ಹೆಸರಿನ ರಾಷ್ಟ್ರೀಯ ಸಂ... ಕೇಂದ್ರವನ್ನು ಧಾರವಾಡದಲ್ಲಿ ಆರಂಭಿಸಲು ಮುಂದಾಗಬೇಕು. ... ಕಲಬುರ್ಗಿಯವರ ಅಧ್ಯಯನ ಪೀಠವನ್ನು ಆರಂಭಿಸಬೇಕು. ಧಾರ... ಹುತಾತ್ಮ ಡಾ. ಕಲಬುರ್ಗಿಯವರ ಸ್ಮಾರಕ ಭವನ ನಿರ್ಮಾಣ ಮಾ... ಕಲಬುರ್ಗಿಯವರ ಹೆಸರಿನಲ್ಲಿ ಸಂಶೋಧನಾ ಕ್ಷೇತ್ರದಲ್ಲಿ ಕೆಲಸ ... ಒಬ್ಬರಿಗೆ ಪ್ರತಿ ವರ್ಷ 10 ಲಕ್ಷ ರೂ. ಸಂಶೋಧನಾ ಪ್ರಶಸ್ತಿ ನೀ... ಆರಂಭಿಸಬೇಕು.

4) ಮೌಢ್ಯ ವಿರೋಧಿ ವಿಧೇಯಕವನ್ನು ಜಾರಿಗೊಳಿಸಬೇಕು... ಕಲಬುರ್ಗಿಯವರಿಗೆ ಕೊಡುವ ನಿಜವಾದ ಗೌರವವಾಗುತ್ತದೆ.

ಮೇಲ್ಕಂಡ ಹಕ್ಕೊತ್ತಾಯಗಳನ್ನು ಈಡೇರಿಸಬೇಕೆಂದು ಆಗ್ರಹಿ...

16.11.2015

ಬೆ...

ಡಾ. ಎಂ. ಎಂ. ಕಲಬುರ್ಗಿ ಹತ್ಯಾ ವಿರೋ...

ಹೋರಾಟ ಸಮಿತಿ, ಧಾರವಾಡ ಮತ್ತು ಇ...

ಕೊಡಗು ಗಲಭೆ: ಜಿಲ್ಲಾಡಳಿತದಿಂದ ಎಡವಟ್ಟು

ಟಿಪ್ಪು ಸುಲ್ತಾನನ ಜನ್ಮ ದಿನಾಚರಣೆಯನ್ನು ...ರ್ಣವಾಗಿ ಬುಡಮೇಲು ಮಾಡುವುದರಲ್ಲಿ ಕೊಡಗು ...ಯಲ್ಲಿ ಸಂಘ ಪರಿವಾರ ಯಶಸ್ಸನ್ನು ಕಂಡಿದೆ. ತಾವು ...ಬೇಕು ಎಂದು ಅನಿಸಿದ್ದನ್ನು ಸಂಘ ಪರಿವಾರ ಅತ್ಯಂತ ...ಸ್ವಿಯಾಗಿ ಮಾಡಿ ಮುಗಿಸುತ್ತದೆ. ಇದಕ್ಕಾಗಿ ಸಂಘ ...ವಾರವನ್ನು ಅತ್ಯಂತ ವ್ಯಂಗ್ಯವಾಗಿಯಾದರೂ ಅಭಿನಂದಿಸ ...ಕು. ಇದರ ಜೊತೆಯಲ್ಲಿ ಸಂಘ ಪರಿವಾರದ ಯಶಸ್ಸಿಗೆ ... ರೀತಿಯ ಸಹಕಾರವನ್ನು ನೀಡಿದ ಕೊಡಗು ಜಿಲ್ಲಾ ...ಗ್ರೆಸ್ ಸಮಿತಿ ಹಾಗು ಕೊಡಗು ಜಿಲ್ಲಾ ಆಡಳಿತವನ್ನೂ ...ನಂದಿಸಬೇಕಾಗಿದೆ.

ಟಿಪ್ಪು ಸುಲ್ತಾನನ ಜನ್ಮದಿನಾಚರಣೆ ಕರ್ನಾಟಕ ರಾಜ್ಯ ...ರದ ಒಂದು ಮಹತ್ತರವಾದ ಕಾರ್ಯಕ್ರಮವಾಗಿತ್ತು. ... ನಿಜವಾದ ದೇಶಪ್ರೇಮಿಗಳಿಗೆ ಸಂತೋಷವನ್ನು ...ಮಾಡಿದ ಕಾರ್ಯಕ್ರಮವಾಗಿತ್ತು. ಇತಿಹಾಸವನ್ನು ...ಯಾಗಿ ಓದಿಕೊಂಡವರಿಗೆ ಟಿಪ್ಪುವಿನ ಮಹತ್ವದ ಅರಿವು ... ತಡವಾಗಿಯಾದರೂ ಕರ್ನಾಟಕ ರಾಜ್ಯ ಸರ್ಕಾರ ...ಕೊಂಡು ಟಿಪ್ಪುವಿಗೆ ಗೌರವ ನೀಡಲು ತೀರ್ಮಾನಿಸಿ ... ಮುಕ್ತ ಕಂಠದಿಂದ ಸ್ವಾಗತಿಸಿದ್ದರು. ಕೋಮು ...ನೆಯಿಂದ ನೋಡುವವರಿಗೆ ಮಾತ್ರ ಟಿಪ್ಪು ದಿನಾಚರಣೆ ...ದ್ರೋಹದ ಕೆಲಸವಾಗಿತ್ತು. ಹಾಗಾಗಿ ಸಂಘ ...ವಾರದವರು ಈ ಕಾರ್ಯಕ್ರಮವನ್ನು ನಡೆಸಲು ಬಿಡುವು... ಎಂಬ ಹೇಳಿಕೆಯನ್ನು ನೀಡಿದ್ದೇ ಅಲ್ಲದೇ ಸ್ವಯಂ ...ತರಾಗಿ ಬಂದ್ ಮಾಡಬೇಕೆಂದು ಕರೆ ನೀಡಿದ್ದರು. ... ಸುಲ್ತಾನನ ಜನ್ಮ ದಿನಾಚರಣೆಯನ್ನು ಆಚರಿಸಿದರೆ ...ದಿನವನ್ನಾಗಿ ಆಚರಿಸುವುದಾಗಿ ಜವಾಬ್ದಾರಿಯುತವಾದ ...ದಲ್ಲಿ ಇರುವಂತಹ ಸಂಸದ ಪ್ರತಾಪ ಸಿಂಹ ಹಾಗು ...ಸಕರುಗಳಾದ ಕೆ.ಜೆ. ಬೋಪಯ್ಯ ಮತ್ತು ಅಪ್ಪಚ್ಚು ...ನ್ ಘೋಷಿಸಿದ್ದರು.

...ಯಾ ಕಾಲಕ್ಕೆ ಸರಕಾರಗಳು ತಮ್ಮ ಧೋರಣೆಗಳಿಗೆ ...ಗುಣವಾಗಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತದೆ. ... ಜಯಂತಿ ಮತ್ತು ವಾಲ್ಮೀಕಿ ಜಯಂತಿ ಹಿಂದಿನ ... ಸರಕಾರದ ಕಾರ್ಯಕ್ರಮವಾಗಿತ್ತು, ಇದನ್ನು ಯಾರೂ ...ರೋಧಿಸಲೂ ಇಲ್ಲ, ಪ್ರಶ್ನಿಸಲೂ ಇಲ್ಲ. ಅದೇರೀತಿ ... ಸುಲ್ತಾನನ ಜನ್ಮ ದಿನಾಚರಣೆಯೂ ಮುಗಿದು ...ಗುತ್ತಿತ್ತು. ಯಾವಾಗ ಸಂಘ ಪರಿವಾರದವರು ಕಾರ್ಯ... ನಡೆಸಲು ಬಿಡುವುದಿಲ್ಲ ಎಂದು ಹೇಳಿದರೋ ...ಲೇ ಕಾಂಗ್ರೆಸಿಗರು ಇದನ್ನು ಒಂದು ಸವಾಲಾಗಿ ಸ್ವೀಕರಿಸ ...ತ್ತು. ಸಂಘ ಪರಿವಾರ ಮತ್ತು ಕಾಂಗ್ರೆಸ್ ಪಕ್ಷದ ...ವಿನ ಸಂಘರ್ಷವಾಗಿ ಇದು ರೂಪುಗೊಳ್ಳಬೇಕಿತ್ತು. ...ಶಾಸಕ ಅಪ್ಪಚ್ಚು ರಂಜನ್ ಕೊಡಗು ಜಿಲ್ಲಾ ಕಾಂಗ್ರೆಸ್ ...ಟಿಯ ಅಧ್ಯಕ್ಷರಾಗಿದ್ದ ಬಿ.ಟಿ ಪ್ರದೀಪ್ ಅವರಿಗೆ ಒಂದು ...ಲಿನ ಪ್ರಶ್ನೆಯನ್ನು ಹಾಕಿದ್ದರು. "ನಿಮ್ಮ ಬಿದ್ದಾಟಂಡ ...ಬಸ್ಥರನ್ನು ಟಿಪ್ಪು ಸುಲ್ತಾನ್ ಕೊಂದಿದ್ದಾನೆ ಹಾಗು ...ಂತರ ಮಾಡಿದ್ದಾನೆ. ಹಾಗಿದ್ದೂ ನೀವು ಕಾರ್ಯ...ದಲ್ಲಿ ಭಾಗವಹಿಸುತ್ತೀರೋ" ಎಂದು ಪ್ರಶ್ನಿಸಿದ್ದರು. ... ಕೊಡವತನದ ಪ್ರೇಮಿಯಾಗಿರುವ ಬಿ.ಟಿ ಪ್ರದೀಪ್ ...ನ್ನು ಬಾಧಿಸಿತ್ತು. ಹಾಗಾಗಿ ಟಿಪ್ಪು ಸುಲ್ತಾನನ್ ...ಚರಣೆಗೆ ಸಂಬಂಧಪಟ್ಟಂತೆ ಮೌನಕ್ಕೆ ಶರಣಾಗಿದ್ದರು.

...ಇದು ಕೊಡಗು ಜಿಲ್ಲೆಯ ಅಲ್ಪಸಂಖ್ಯಾತರ ಸಿಟ್ಟಿಗೆ ...ಣವಾಗಿತ್ತು, ಯಾವಾಗಲೂ ಇಂತಹ ಅವಕಾಶಕ್ಕಾಗಿ ...ಕುಳಿತಿರುವ ಎಸ್.ಡಿ.ಪಿ.ಐ. ಪಕ್ಷ ಕೂಡಲೆ ರಂಗಕ್ಕೆ ...ಮುಕ ತಾವೇ ಮುಸ್ಲಿಮರ ಪ್ರತಿನಿಧಿಗಳು ಎನ್ನುವಂತೆ ...ರ್ಭದ ಲಾಭವನ್ನು ಪಡೆದು ಸಂಪೂರ್ಣ ಕಾರ್ಯ...ವನ್ನೇ ಹೈಜಾಕ್ ಮಾಡಿದರು. ಟಿಪ್ಪು ಸುಲ್ತಾನನ ...ದಿನಾಚರಣೆಯು ಕೊಡಗಿನಲ್ಲಿ ಇತಿಹಾಸವನ್ನು ನಿರ್ಮಾಣ ...ಬೇಕಾಗಿತ್ತು, ಆದರೆ ಅದು ಸಂಘ ಪರಿವಾರದವರ ...ಬಯಂತೆ ಗಲಭೆಗೆ ಕಾರಣವಾಯಿತು. ಬಿಹಾರ ...ಚುನಾವಣೆಯ ಫಲಿತಾಂಶ ಅವರಿಗೆ ಪಾಠ ಕಲಿಸಲಿಲ್ಲ. ...ಗಿನ ಇಬ್ಬರೂ ಶಾಸಕರುಗಳು ಇಂತಹ ಗಲಭೆಯ ...ನುಭವಿಗಳಾಗಿ ಶಾಸಕರಾದವರು. ಸೋಮವಾರಪೇಟೆಯ ...ಷ್ಟ್ರ ಧ್ವಜ ಪ್ರಕರಣದ ಫಲಾನುಭವಿ ಅಪ್ಪಚ್ಚು ರಂಜನ್ ...ಕೆ, ವಾಲೂರು ದೇವಾಲಯದ ಧ್ವಂಸ ಪ್ರಕರಣದ ...ನುಭವಿಗಳಾಗಿ ಶಾಸಕರಾದವರು ಕೆ. ಜೆ. ಬೋಪಯ್ಯ. ...ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ಚುನಾವಣೆ ...ಯುತ್ತಿದ್ದು, ಶಾಸಕ ಅಪ್ಪಚ್ಚು ರಂಜನ್ ಅವರ ಸಹೋದರ ... ಕುಶಾಲಪ್ಪ ಅಧಿಕೃತ ಅಭ್ಯರ್ಥಿಯಾಗಿದ್ದಾರೆ. ಹಾಗಾಗಿ ...ಗೆ ಚುನಾವಣಾ ಸಿದ್ಧತೆಗೆ ಇಂತಹ ಒಂದು ಘಟನೆಯ ...ಶ್ಯಕತೆ ಇತ್ತು.

...ಇಷ್ಟು ಮಾತ್ರವಲ್ಲದೆ ಕೆಲವೇ ಸಮಯದೊಳಗೆ ಜಿಲ್ಲಾ ...ಚಾಯತಿ ಹಾಗೂ ತಾಲೂಕು ಪಂಚಾಯತಿಯ ...ವಣೆಗಳು ನಡೆಯಲಿದೆ. ಕಾಂಗ್ರೆಸ್ ಪಕ್ಷ ಕೊಡಗಿನಲ್ಲಿ ...ಶಿ ಮಲಗಿದ್ದರೂ ಅದರ ಲಾಭವನ್ನು ಗ್ರಾಮ ...ಚಾಯತಿ ಚುನಾವಣೆಯಲ್ಲಿ ತೆಗೆದುಕೊಳ್ಳಲು ಬಿಜೆಪಿಗೆ ...ಗಿಲ್ಲ, ಹಾಗಾಗಿ ಇದಕ್ಕೂ ಪೂರ್ವಭಾವಿ ಸಿದ್ಧತೆಗೆ ...ಸ ಪ್ರಕರಣಗಳ ಅಗತ್ಯತೆ ಬಿಜೆಪಿಗೆ ಇತ್ತು.

...ರ ಜೊತೆಯಲ್ಲಿ ಕೊಡಗು ಜಿಲ್ಲೆಯ ಕೊಡವರನ್ನು ಕೆರಳಿಸುವ ಅಗತ್ಯತೆ ಸಂಘ ಪರಿವಾರಕ್ಕೆ ಇತ್ತು, ಇದಕ್ಕಾಗಿ ಇತಿಹಾಸವನ್ನು ತಿರುಚುವುದರಲ್ಲಿ ಮತ್ತು ತಾನೊಬ್ಬ ಖ್ಯಾತ ಅಂಕಣಕಾರ ಎಂದು ಬಿಂಬಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುವ ಸಂಸದ ಪ್ರತಾಪ ಸಿಂಹ, ಸುಳ್ಳುಗಳನ್ನು ಹೇಳುವುದು, ಸುಳ್ಳಿನ ಲೇಖನಗಳನ್ನು ಬರೆಯುವುದು ಮಾಡಿದರೆ, ಜಗದೀಶ್ ಕಾರಂತ ಎಂಬ ಹೊಣೆಗೇಡಿ ಸಂಘ ಪರಿವಾರದ ವ್ಯಕ್ತಿ ತನ್ನ ಎಂದಿನ ಬೆಂಕಿ ಹಚ್ಚುವ ಕಾರ್ಯಕ್ಕಾಗಿ ಕೊಡಗು ಜಿಲ್ಲೆಯಲ್ಲಿ ಮೊಕ್ಕಾಂ ಹೂಡಿ ಜನರನ್ನು ಪ್ರಚೋದಿಸುವಲ್ಲಿ ಯಶಸ್ವಿಯಾಗಿದ್ದರು. ಕೊಡವರ ಚರಿತ್ರೆ ಏನು ಎಂಬುದು ಕೊಡವರಲ್ಲದ ಮತ್ತು ಅವರೊಂದಿಗೆ ಸಂಬಂಧವನ್ನು ಹೊಂದಿರದ ವ್ಯಕ್ತಿಗಳಾದ ಪ್ರತಾಪ ಸಿಂಹ ಮತ್ತು ಜಗದೀಶ್ ಕಾರಂತರಿಂದ ತಿಳಿದುಕೊಳ್ಳುವಂತಹ ದುಃಸ್ಥಿತಿಗೆ ಅವರು ಬಂದಿದ್ದರು. ಅವರ ನೆರವಿಗೆ ಕೆಲವು ಕೊಡವ ಮೂಲಭೂತವಾದಿಗಳು ಸೇರಿಕೊಂಡಿದ್ದರು. ಇದು ಸಂಘಪರಿವಾರದ ಕಾರ್ಯಾಚರಣೆ ಭಾಗಶಃ ಯಶಸ್ವಿಯಾಗಲು ಕಾರಣವಾಯಿತು.

ಆದ್ದರಿಂದಲೇ ಅವರು ಟಿಪ್ಪು ಸುಲ್ತಾನ್ ದಿನಾಚರಣೆ ಆಚರಿಸಲು ಬಿಡುವುದಿಲ್ಲ ಎಂದು ಹೇಳಿ, ಉದ್ವಿಗ್ನ ವಾತಾವರಣವನ್ನು ಸೃಷ್ಟಿಸಿದ್ದರು. ಕೊಡಗಿನಲ್ಲಿ ಜಿಲ್ಲಾಡಳಿತ, ಪೊಲೀಸ್ ವ್ಯವಸ್ಥೆ ಹಾಗೂ ಬಿಜೆಪಿ ಒಳಒಪ್ಪಂದ ಮಾಡಿಕೊಂಡ ಸ್ಥಿತಿ ಇತ್ತು. ಮಡಿಕೇರಿಯಲ್ಲಿ ಕಾರ್ಯಕ್ರಮಕ್ಕೆ ಸುಮಾರು 4ರಿಂದ 5 ಸಾವಿರ ಜನ ಸೇರಿದ್ದರು. ಆದರೆ ಕಾರ್ಯಕ್ರಮ ನಡೆದದ್ದು ಕೇವಲ 400 ಜನ ಕೂರಬಲ್ಲ ಸಭಾಂಗಣದಲ್ಲಿ. ಜಿಲ್ಲಾಡಳಿತದ ಉದ್ದೇಶವು ಕಾರ್ಯಕ್ರಮ ಯಶಸ್ವಿಯಾಗಬೇಕು ಎಂಬುದಾಗಿರಲಿಲ್ಲ, ಕಾಟಾಚಾರಕ್ಕಾಗಿ ಕಾರ್ಯಕ್ರಮವನ್ನು ಆಯೋಜಿಸಿದಂತೆ ಇತ್ತು. ಜಿಲ್ಲಾಧಿಕಾರಿಗಳು ಸ್ವಂತ ಕಾರ್ಯದ ಮೇಲೆ ಕಾರ್ಯಕ್ರಮಕ್ಕೆ ಎರಡು ದಿನಕ್ಕೆ ಮೊದಲು ವಿದೇಶಕ್ಕೆ ತೆರಳಿದ್ದರೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮೂರು ದಿನಗಳ ಹಿಂದೆ ಪೊಲೀಸ್ ಬ್ಯಾಟ್‌ಮಿಂಟನ್ ಪಂದ್ಯಾಟಕ್ಕೆ ದೆಹಲಿಗೆ ತೆರಳಿದ್ದರು. ಹೀಗೆ ಕೊಡಗು ಜಿಲ್ಲೆ ವರಿಷ್ಠ ಅಧಿಕಾರಿಗಳ ಗೈರುಹಾಜರಿಯಲ್ಲಿ ಅನಾಥವಾಗಿತ್ತು.

ಪ್ರಭಾರ ಜಿಲ್ಲಾಧಿಕಾರಿಗಳಾದ ಕೂರ್ಮಾರಾವ್ ಅನನುಭವಿ ಆಗಿದ್ದರು. ಅವರಿಗೆ ಜಿಲ್ಲೆಯ ಯಾವುದೇ ವಿಚಾರ ತಿಳಿದಿಲ್ಲ, ಪೊಲೀಸ್ ವರಿಷ್ಠಾಧಿಕಾರಿ ಯಾರ ಮಾತೂ ಕೇಳುವ ಸ್ಥಿತಿಯಲ್ಲಿ ಇಲ್ಲ. ಕಾರ್ಯಕ್ರಮಕ್ಕೆ ಬಿಜೆಪಿಯವರು ಅಡ್ಡಿಪಡಿಸುತ್ತೇವೆ ಎಂದು ಹೇಳಿದಾಗಲೇ ಅವರ ಇತಿಹಾಸಗಳನ್ನು ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ತಿಳಿದುಕೊಂಡು ಕಾರ್ಯಕ್ರಮದ ಯಶಸ್ಸಿಗೆ ಬೇಕಾದಂತಹ ಸಿದ್ಧತೆಯನ್ನು ಮಾಡಬೇಕಿತ್ತು. ಜಿಲ್ಲೆಯಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಬುಡಮೇಲು ಮಾಡಿದ ಇತಿಹಾಸ ಇವರುಗಳಿಗೆ ಇದೆ. ಅದನ್ನು ಅಂದಾಜಿಸಲು ಸಾಧ್ಯವಿಲ್ಲ ಎನ್ನುವುದು ಸರಿಯಲ್ಲ. ಇದು ಒಂದು ರೀತಿಯ ಒಳಒಪ್ಪಂದ ಎಂದೇ ಹೇಳಬಹುದು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಜಿಲ್ಲೆಯ ಮೂರೂ ತಾಲೂಕುಗಳಲ್ಲಿ ಸಭೆಯನ್ನು ನಡೆಸಿದರು. ಅವರ ಅನುಭವದ ಕೊರತೆ ಇಲ್ಲಿ ಎದ್ದು ಕಾಣುತ್ತಿತ್ತು. ವಿರೋಧಿಸುವವರನ್ನು ಪ್ರತ್ಯೇಕ ಸಭೆ ನಡೆಸಿ, ನೀವು ವಿರೋಧಿಸುವುದು ನಿಮ್ಮ ಹಕ್ಕು ಎಂದು ಹೇಳಿ ಮೆರವಣಿಗೆ ಮಾತ್ರ ತೆಗೆಯಬೇಡಿ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸುವವರನ್ನು ಪ್ರತ್ಯೇಕವಾಗಿ ಕರೆಸಿ, ನಿಮ್ಮ ಶಕ್ತಿ ಪ್ರದರ್ಶನ ಮಾಡಿ ಎಂದು ಹೇಳಿದರು. ಇದು ಒಂದು ರೀತಿಯ ಗೊಂದಲದ ವಾತಾವರಣವನ್ನು ಸೃಷ್ಟಿಸಲು ಕಾರಣವಾಯಿತು. ಕಾರ್ಯಕ್ರಮ ನಡೆಯುವ ಕಣ್ಣಳತೆ ದೂರದಲ್ಲಿಯೇ ವಿರೋಧಿಗಳು ಪ್ರತಿಭಟನೆ ನಡೆಸಲು ಪೊಲೀಸ್ ಇಲಾಖೆ ಅವಕಾಶವನ್ನು ಮಾಡಿಕೊಟ್ಟಿತ್ತು. ಕಾರ್ಯಕ್ರಮದಲ್ಲಿ ಭಾಗವಹಿಸುವವರು ಅವರನ್ನು ಹಾದು ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಬರಬೇಕಾಗಿತ್ತು. ಅಲ್ಲಿ ಪ್ರತಿಭಟನಾಕಾರರು ಹೀಯಾಳಿಸುವ, ಬೆದರಿಸುವ ಮತ್ತು ಕೆಣಕುವ ಕಾರ್ಯವನ್ನು ಮಾಡುತ್ತಿದ್ದರು. ಇದು ಸಂಘರ್ಷಕ್ಕೆ ಮೂಲ ಕಾರಣವಾಯಿತು.

ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಹೇಳಿಕೊಂಡು ಜಿಲ್ಲಾಡಳಿತದ ವತಿಯಿಂದ ಎಲ್ಲಾ ಮಸೀದಿಗಳಿಗೆ ಪತ್ರಗಳನ್ನು ಬರೆಯಲಾಗಿತ್ತು, ಎಲ್ಲರೂ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಕೋರಿಕೊಂಡಿದ್ದರು. ಆದರೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಬೇಕಾದಂತಹ ಬಸ್ ಸೌಲಭ್ಯಗಳು ಸ್ಥಗಿತಗೊಂಡಿದ್ದವು. ಸಂಘ ಪರಿವಾರದವರು ಕಾರ್ಯಕ್ರಮ ನಡೆಸಲು ಬಿಡುವುದಿಲ್ಲ ಎಂದು ಹೇಳಿದ್ದನ್ನು ಸವಾಲಾಗಿ ಸ್ವೀಕರಿಸಿದ ಟಿಪ್ಪು ಅಭಿಮಾನಿಗಳು ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ತೀರ್ಮಾನಿಸಿದ್ದರು. ಲಾರಿಗಳಲ್ಲಿ ಮಡಿಕೇರಿಗೆ ಆಗಮಿಸಿದಾಗ ಕೆಲವು ಸಂಘ ಪರಿವಾರದ ಕಾರ್ಯಕರ್ತರು ಅವರುಗಳನ್ನು ತಡೆದು ಹಲ್ಲೆ ಮಾಡಲು ಮುಂದಾದರು. ಇದು ಘರ್ಷಣೆಗೆ ನಾಂದಿ ಹಾಡಿತ್ತು.

ಈ ಪ್ರದೇಶದಲ್ಲಿ ಇದ್ದಂತಹ ಪೊಲೀಸರಲ್ಲಿ ಬಹುತೇಕರು ಸ್ಥಳೀಯರೇ ಆಗಿದ್ದು, ಅವರು ಕಾರ್ಯಕ್ರಮವನ್ನು ತಡೆಯಲು ಬೇಕಾದಂತಹ ಎಲ್ಲಾ ಯತ್ನಗಳನ್ನು ಮಾಡುತ್ತಿದ್ದರು. ಕಾರ್ಯಕ್ರಮಕ್ಕೆ ಆಗಮಿಸುತ್ತಿದ್ದವರ ಮೇಲೆ ಲಾಠಿ ಪ್ರಹಾರವನ್ನು ಮಾಡಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದರು. ಸಿವಿಲ್ ಡ್ರೆಸ್‌ನಲ್ಲಿ ಇದ್ದಂತಹವರು ಕೂಡ ಲಾಠಿ ಹಿಡಿದು ಮುಸ್ಲಿಂ ಯುವಕರ ಮೇಲೆ ಹಲ್ಲೆ ಮಾಡಿದ್ದು ಕಂಡು ಬಂತು. ಒಂದು ರೀತಿಯ ಅಶಾಂತಿಯ ವಾತಾವರಣ ಸೃಷ್ಟಿಯಾಯಿತು. ಕಲ್ಲು ತೂರಾಟ ಆರಂಭವಾಯಿತು. ರಸ್ತೆ ತಡೆಯುತ್ತಿದ್ದವರನ್ನು ಅಲ್ಲಿಂದ ತೆರವುಗೊಳಿಸಬೇಕಾಗಿದ್ದ ಪೊಲೀಸರು ಅದರ ಗೋಜಿಗೇ ಹೋಗದೆ ಕಾರ್ಯಕ್ರಮಕ್ಕೆ ಆಗಮಿಸುವವರ ಮೇಲೆ ಹಲ್ಲೆ ಮಾಡಿದ್ದು ಭಯಾನಕ ಸ್ಥಿತಿಯನ್ನು ಹುಟ್ಟು ಹಾಕಿತ್ತು. ಕೇವಲ ಒಂದೇ ವಿಭಾಗದವರತ್ತ ಪೊಲೀಸರ ಲಾಠಿ ಚಾರ್ಜು ಸಹಜವಾಗಿ ಕೆರಳಿಸಿತ್ತು. ಇಷ್ಟೆಲ್ಲ ಆಗುವ ವೇಳೆಯಲ್ಲಿ ಕಾಂಗ್ರೆಸಿಗರು ಎಲ್ಲಿಯೂ ಕಾಣಲೇ ಇಲ್ಲ. ಹಾಗಾಗಿ ಇಂತಹ ಅವಕಾಶಕ್ಕಾಗಿ ಕಾಯುವ ಎಸ್.ಡಿ.ಪಿ.ಐ. ಸಕ್ರಿಯವಾಗಿ ಚಟುವಟಿಕೆಯನ್ನು ಮಾಡಿತ್ತು. ಕಲ್ಲು ತೂರಾಟ ಹೆಚ್ಚಾದಾಗ ಓಡಲು ತೊಡಗಿದರು. ಹೀಗೆ ಓಡುವ ವೇಳೆಯಲ್ಲಿ ಕುಟ್ಟಪ್ಪ ಎಂಬ ವ್ಯಕ್ತಿ ಕಾಲು ಜಾರಿ ಬಿದ್ದರು. ಆರಂಭದಲ್ಲಿಯೇ ಇದನ್ನು ಕಾಲು ಜಾರಿ ಬಿದ್ದು ಸತ್ತದ್ದು ಎಂದು ಹೇಳುವ ಬದಲು, ಕಲ್ಲೆಸೆದು ಕೊಲ್ಲಲಾಯಿತು ಎಂದು ಬಿಜೆಪಿಯವರು ಹೇಳಿದರು.



ಜವಾಬ್ದಾರಿಯುತ ಸ್ಥಾನದಲ್ಲಿರುವಂತಹ ಶಾಸಕ ಕೆ.ಜೆ. ಬೋಪಯ್ಯ ಈ ಘಟನೆಗೆ ತಾವು ತಕ್ಕ ಉತ್ತರವನ್ನು ನೀಡುತ್ತೇವೆ ಎಂಬ ಪ್ರಚೋದನೆಯನ್ನು ನೀಡಿದರು. ಕುಟ್ಟಪ್ಪ ಸತ್ತ ಸುದ್ದಿ ಕಾಡ್ಗಿಚ್ಚಿನಂತೆ ಎಲ್ಲಾ ಕಡೆ ಹಬ್ಬಿತು.

ಅಮಾಯಕನಿಗೆ ಗುಂಡೇಟು

ಕುಟ್ಟಪ್ಪ ಸತ್ತ ಕೂಡಲೇ ಕೆ.ಜೆ. ಬೋಪಯ್ಯನವರ ಹೇಳಿಕೆಗೆ ಸರಿಯಾಗಿ ಮಡಿಕೇರಿಯ ಹೊರಭಾಗದಲ್ಲಿ ಲಾರಿಯಲ್ಲಿ ತೆರಳುತ್ತಿದ್ದ ಶಾಹುಲ್ ಹಮೀದ್ ಎಂಬ ಯುವಕ ಗುಂಡೇಟಿಗೆ ಬಲಿಯಾದ. ಶಾಹುಲ್ ಹಮೀದ್ ಮಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ತನ್ನ ತಾಯಿಯನ್ನು ನೋಡಿಕೊಂಡು ಹಿಂತಿರುಗುತ್ತಿದ್ದ ವ್ಯಕ್ತಿ. ಬಸ್ ಇಲ್ಲದ ಕಾರಣ ಆತ ಹಿಂದಕ್ಕೆ ಹೋಗುವ ಲಾರಿಯಲ್ಲಿ ಹತ್ತಿಕೊಂಡಿದ್ದ. ಈ ಲಾರಿಯನ್ನು ಸಂಪೂರ್ಣವಾಗಿ ಪ್ರಪಾತಕ್ಕೆ ಬೀಳಿಸುವ ಯತ್ನ ಇದಾಗಿತ್ತು. ಚಾಲಕನಿಗೆ ಗುರಿ ಇಟ್ಟು ಹೊಡೆದ ಗುಂಡು ಶಾಹುಲ್ ಹಮೀದ್‌ಗೆ ತಾಗಿ ಆತ ಆಸ್ಪತ್ರೆಗೆ ದಾಖಲಾಗುವ ಪರಿಸ್ಥಿತಿ ಉಂಟಾಯಿತು. ಇದು ಸಹಜವಾಗಿ ಬೋಪಯ್ಯನವರ ಹೇಳಿಕೆಗೆ ಪ್ರತಿಕ್ರಿಯೆ ಎಂಬುದು ಸಾರ್ವಜನಿಕ ಅಭಿಪ್ರಾಯವಾಗಿದೆ. ಶಾಹುಲ್ ಹಮೀದ್ ಆನಂತರ ಆಸ್ಪತ್ರೆಯಲ್ಲಿ ಅಸುನೀಗಿದ.

ಕೊಡಗು ಜಿಲ್ಲೆಯಲ್ಲಿ ಈ ಘಟನೆಯಿಂದ ಮುಸ್ಲಿಂ ಜನಾಂಗಕ್ಕೆ ರಕ್ಷಣೆಯೇ ಇಲ್ಲ ಎನ್ನುವಂತಹ ಪರಿಸ್ಥಿತಿ ಉಂಟಾಯಿತು. ಅವರು ಆತಂಕದ ಸ್ಥಿತಿಯನ್ನು ಎದುರಿಸಲಾರಂಭಿಸಿದರು. ಅವರ ರಕ್ಷಣೆಗೆ ಬರಬೇಕಾಗಿದ್ದ ಕಾಂಗ್ರೆಸ್ ಪಕ್ಷ ಸ್ಪಂದಿಸಲೇ ಇಲ್ಲ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಬಿ.ಟಿ.ಪ್ರದೀಪ್ ತನ್ನ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಕುಳಿತಿದ್ದರು. ಉಸ್ತುವಾರಿ ಸಚಿವರು ಯಾರು ಎಂಬುದು ಯಾರಿಗೂ ತಿಳಿದಿರಲಿಲ್ಲ, ಬದಲಾವಣೆಯಾಗಿದೆ ಎಂದು ಹೇಳಲಾಗಿತ್ತಾದರೂ ಅಧಿಕೃತ ಪ್ರಕಟಣೆ ಬಂದಿರಲಿಲ್ಲ, ಹಾಗಾಗಿ ಒಂದು ರೀತಿಯ ಅನಾಥ ಸ್ಥಿತಿ ಇತ್ತು.

ಮುಸ್ಲಿಂ ಜನಾಂಗಕ್ಕೆ ಸೇರಿದ ಕೆಲವರು ರಾಜ್ಯ ಕಾಂಗ್ರೆಸ್ ನಾಯಕರ ಕದ ತಟ್ಟಲು ಆರಂಭಿಸಿದರು. ಮುಸ್ಲಿಂ ನಾಯಕ ಎಂದು ಪೋಸ್ ಕೊಡುವ ಸಿ.ಎಂ. ಇಬ್ರಾಹಿಂ ಬಳಿ ಕೆಲವರು ತೆರಳಿದಾಗ ನೀವೇಕೆ ಕಾರ್ಯಕ್ರಮಕ್ಕೆ ಹೋದಿರಿ ಎಂದು ಕಾರ್ಯಕ್ರಮಕ್ಕೆ ಮುಸ್ಲಿಮರು ಹೋಗಿದ್ದೇ ತಪ್ಪು ಎನ್ನುವಂತೆ ಇಬ್ರಾಹಿಂ ಅವರನ್ನು ತರಾಟೆಗೆ ತೆಗೆದುಕೊಂಡರೆಂದು ಕೆಲವು ಮುಸ್ಲಿಂ ಮುಖಂಡರು ಹೇಳಿದ್ದಾರೆ. ಮುಸ್ಲಿಮರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ತಪ್ಪು ಎಂದಾದರೆ, ರಾಜ್ಯ ಸರಕಾರ ಈ ಕಾರ್ಯಕ್ರಮವನ್ನು ಏತಕ್ಕಾಗಿ ಆಯೋಜಿಸಬೇಕಾಗಿತ್ತು ಎನ್ನುವುದರ ಜೊತೆಯಲ್ಲಿ ಕೊಡಗು ಜಿಲ್ಲಾಡಳಿತವು ಮಸೀದಿಗಳ ಮೂಲಕ ತಾವು ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಕೋರಿಕೊಂಡದ್ದಾದರೂ ಏಕೆ ಎಂದು ಮುಸ್ಲಿಮರು ಪ್ರಶ್ನಿಸುತ್ತಿದ್ದಾರೆ. ತಮ್ಮದಲ್ಲದ ತಪ್ಪಿಗೆ ತಮಗೆ ಶಿಕ್ಷೆಯನ್ನು ನೀಡಲಾಗುತ್ತಿದೆ; ಅನವಶ್ಯಕವಾಗಿ ತಮ್ಮ ಮೇಲೆ ಪೊಲೀಸ್ ಲಾಠಿ ಪ್ರಹಾರ, ಕಲ್ಲೇಟು ಹಾಗೂ ಈಗ ಪೊಲೀಸರ ಕೇಸುಗಳು ಆಗಿದೆ ಎಂದು ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದಾರೆ.

ಅವರುಗಳು ಕೆ.ಪಿ.ಸಿ.ಸಿ. ಅಧ್ಯಕ್ಷರೂ, ಗೃಹಸಚಿವರೂ ಆದ ಪರಮೇಶ್ವರ್‌ರವರನ್ನು ಭೇಟಿಯಾಗಿ ಘಟನೆಯ ವಿವರಗಳನ್ನು ನೀಡಿ ಅವರಿಗೆ ಕೊಡಗಿಗೆ ಆಗಮಿಸುವಂತೆ ಕೋರಿಕೊಂಡ ಹಿನ್ನೆಲೆಯಲ್ಲಿ ಅವರು ಹಾಗೂ ಈಗ ಉಸ್ತುವಾರಿ ಸಚಿವರಾಗಿರುವ ದಿನೇಶ್ ಗುಂಡೂರಾವ್ ಕೊಡಗಿಗೆ ಆಗಮಿಸಿ ಒಂದು ರೀತಿಯ ಸಾಂತ್ವನವನ್ನು ಹೇಳುವ ಕೆಲಸಕ್ಕೆ ಮುಂದಾದರು.

ಬಿಜೆಪಿಯ ಮುಖವಾಡ ಕಳಚಿತು

ದಿನೇಶ್ ಗುಂಡೂರಾವ್ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾಗಿ ಅಧಿಕಾರ ವಹಿಸಿಕೊಂಡ ಕೂಡಲೇ ಮಡಿಕೇರಿಗೆ ಆಗಮಿಸುವಾಗ, ಮೈಸೂರು ಆಸ್ಪತ್ರೆಯಲ್ಲಿ ನಿಧನ ಹೊಂದಿದ ಶಾಹುಲ್ ಹಮೀದ್ ಕುಟುಂಬಸ್ಥರಿಗೆ ಸಾಂತ್ವನ ಹೇಳಿ, ಕೊಡಗಿಗೆ ಶವವನ್ನು ತರುವ ಕಾರ್ಯಕ್ಕೆ ಸಹಕಾರವನ್ನು ನೀಡಿದ್ದಲ್ಲದೆ, ಕೊಡಗಿಗೆ ಆಗಮಿಸಿ, ಅಧಿಕಾರಗಳ ಜೊತೆಯಲ್ಲಿ ಚರ್ಚಿಸಿದರು. ಹಾಗೆಯೇ ಕುಟ್ಟಪ್ಪನವರ ನಿವಾಸಕ್ಕೂ ತೆರಳಿ ಸಾಂತ್ವನವನ್ನು ಹೇಳಿ ಬಂದರು. ಆನಂತರ ಜಿಲ್ಲೆಯ ಸ್ಥಿತಿಯ ಅವಲೋಕನವನ್ನು ಮಾಡಿಕೊಂಡು ಕಾಂಗ್ರೆಸ್ ಪಕ್ಷ ನಿಷ್ಕ್ರಿಯವಾಗಿರುವುದರಿಂದ ಸಂಪೂರ್ಣ ಮಾಹಿತಿಯನ್ನು ಗೃಹ ಸಚಿವರಿಗೆ ನೀಡಿ ಅವರನ್ನೂ ಜಿಲ್ಲೆಗೆ ಕರೆದುಕೊಂಡು ಬಂದು, ಕೊಡಗಿನಲ್ಲಿ ಸಹಜ ಸ್ಥಿತಿ ಮರಳಲು ಬೇಕಾದಂತಹ ಕಾರ್ಯಕ್ರಮಗಳನ್ನು ಮಾಡಿದ್ದೇ ಅಲ್ಲದೆ, ಅಲ್ಪಸಂಖ್ಯಾತ ವರ್ಗದವರಲ್ಲಿ ಭರವಸೆಯನ್ನು ಮೂಡಿಸುವ ಪ್ರಯತ್ನವನ್ನು ಮಾಡಿದರು.

ಅದೇ ದಿನದಂದು ಜಿಲ್ಲೆಗೆ ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್ ಆಗಮಿಸಿದ್ದರು. ಅವರು ಹಾಗೂ ಬಿಜೆಪಿ ಶಾಸಕರುಗಳು ಕೇವಲ ಕುಟ್ಟಪ್ಪನವರ ಮನೆಗೆ ಮಾತ್ರ ತೆರಳಿ ಸಾಂತ್ವನ ಹೇಳಿದರು. ಜಿಲ್ಲೆಗೆ ಬಿಜೆಪಿಯ ಮುಖಂಡರುಗಳಾದ ಸದಾನಂದಗೌಡ, ಶೋಭಾ ಕರಂದ್ಲಾಜೆ, ಸಿ.ಟಿ. ರವಿ ಮುಂತಾದವರು ಆಗಮಿಸಿದ್ದರೂ, ಅವರು ಭೇಟಿ ನೀಡಿದ್ದು ಕೇವಲ ಕುಟ್ಟಪ್ಪನವರ ಮನೆಗೆ.

ತಾವು ಮುಸ್ಲಿಂ ವಿರೋಧಿಯಲ್ಲ, ಕೇವಲ ಟಿಪ್ಪು ಸುಲ್ತಾನ್ ದಿನಾಚರಣೆಗೆ ವಿರೋಧಿಸುತ್ತಿದ್ದೇವೆ ಎಂಬ ಹೇಳಿಕೆಯನ್ನು ನೀಡಿದ ಬಿಜೆಪಿ ಮುಖಂಡರು, ಒಬ್ಬ ಅಮಾಯಕ ಮುಸ್ಲಿಂ ಯುವಕ ಈ ಘರ್ಷಣೆಯಲ್ಲಿ ಗುಂಡೇಟಿಗೆ ಬಲಿಯಾದಾಗ ಆತನ ಮನೆಗೆ ತೆರಳಲೇ ಇಲ್ಲ ಎಂದರೆ ತಾವು ಮುಸ್ಲಿಂ ದ್ವೇಷಿಗಳು ಅಲ್ಲ ಎನ್ನುವುದು ಸುಳ್ಳು ಎಂಬುದು ಇದರಿಂದ ಸಾಬೀತಾಗಿದೆ.

ತಲೆದಂಡ

ಪರಮೇಶ್ವರ್ ಅವರು ಜಿಲ್ಲೆಗೆ ಆಗಮಿಸಿ ಮಾಹಿತಿಯನ್ನು ಸಾರ್ವಜನಿಕರಿಂದ ಸಂಗ್ರಹಿಸಿದ ಮೇಲೆ ಕಾಂಗ್ರೆಸ್ ಪಕ್ಷದ ಸಂಪೂರ್ಣ ಬೇಜವಾಬ್ದಾರಿತನ ಅವರ ಗಮನಕ್ಕೆ ಬಂದಿತ್ತು. ಹಾಗಾಗಿ ಅವರು ಬಿ.ಟಿ. ಪ್ರದೀಪ್‌ರವರನ್ನು ಬೆಂಗಳೂರಿಗೆ ಆಹ್ವಾನಿಸಿ, ಗೌರವಪೂರ್ವಕವಾಗಿ ರಾಜೀನಾಮೆ ನೀಡುವಂತೆ ಆದೇಶಿಸಿದರು. ಅದರಂತೆ ಬಿ.ಟಿ ಪ್ರದೀಪ್ ಈಗ ರಾಜೀನಾಮೆ ನೀಡಿದ್ದಾರೆ. ಒಂದು ತಲೆದಂಡ ಇದರಿಂದ ಆಗಿದೆ. ಇನ್ನು ಪರಮೇಶ್ವರ್ ಅವರ ಬಳಿ ಇರುವಂತಹ ಗೃಹಖಾತೆಗೆ ಕಾಯಕಲ್ಪ ನೀಡಲು ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ತಲೆದಂಡವನ್ನೂ ಪಡೆದು, ಜಿಲ್ಲೆಯಲ್ಲಿ ಸಹಜ ಸ್ಥಿತಿ ಮರಳಲು ವ್ಯವಸ್ಥೆ ಮಾಡಬೇಕಾಗಿದೆ.

■ ಬಿ.ಎನ್. ಮನು ಶೆಣೈ

ಹುಚ್ಚಾ ಮತ್ತು ಮೆಂಟಲ್ ಮೀಡಿಯಾ



ಅವನೇನೋ ಹುಚ್ಚ, ಕೆಣುವವರು ಎಂಥವರು? ಸೋಕಾಲ್ಡ್ ಹುಚ್ಚ ಬಿಗ್‌ಬಾಸ್ ಮನೆಯಲ್ಲಿ ಯಾರನ್ನೋ ಹೊಡೆದನಂತೆ. ಹೊಡೆದ ಏಟಿಗೆ ರಕ್ತವೂ ಬಂತಂತೆ. ಇದನ್ನೇ ಕಾನೂನುಬಾಹಿರ, ಒರಟುತನ, ಅನಾಗರಿಕ ಲಕ್ಷಣವೆಂದು ಬಿಗ್‌ಬಾಸ್ ಸೃಷ್ಟಿಕರ್ತರು ನಿರ್ಧರಿಸಿ ಹುಚ್ಚನಿಗೆ 'ಗೆಟ್‌ಔಟ್' ಅಂದರಂತೆ. ಕೆರಳಿದ ಹುಚ್ಚ 'ನನ್ನನ್ನೇ ಆಚೆಹೋಗು ಅನ್ನೋಕೆ ನೀನ್ಯಾರು' ಎಂದು ಗುಡುಗಿದನಂತೆ. ಇನ್ನು ಬಿಗ್‌ಬಾಸ್ ಕೇಳಬೇಕಾ? ಹತ್ತು ಮಂದಿ ದಾಂಡಿಗರನ್ನು ಛೂಬಿಟ್ಟದ್ದೇ ಹುಚ್ಚನನ್ನು ದರದರನೇ ಎಳೆದೊಯ್ದು ಹೊರದಬ್ಬಿಸಿದರಂತೆ. ಇದನ್ನು ಪ್ರತಿಭಟಿಸಿ ರಾಜ್ಯವ್ಯಾಪಿ ಹುಚ್ಚನ ಅಭಿಮಾನಿಗಳು ಬೀದಿಗಿಳಿದರಂತೆ. ಮತ್ತೊಂದೆಡೆ ತಮ್ಮ ಆರಾಧ್ಯದೈವ ಸುದೀಪ್‌ನನ್ನು ಏಕವಚನದಲ್ಲಿ ಹುಚ್ಚ ಕೆಣಕಿದನೆಂದು ಕಿಚ್ಚ ಅಭಿಮಾನಿಗಳು ಬೀದಿಗಿಳಿದಿದ್ದಾರಂತೆ. ಯಾವುದೇ ನ್ಯೂಸ್ ಚಾನಲ್ ಹಾಕಿದರೂ ಹುಚ್ಚ, ಯಾವ ಟೀವಿ ಸ್ವಿಚ್ಚೊತ್ತಿದರೂ ಹುಚ್ಚ, ಯೂಟ್ಯೂಬ್‌ನಲ್ಲಿ ಹುಚ್ಚ ಫೇಸ್‌ಬುಕ್‌ನಲ್ಲೂ ಹುಚ್ಚ, ವ್ಯಾಟ್ಸ್‌ಪ್, ಸೆಲ್‌ಫೋನ್, ರೇಡಿಯೋ ಮಿರ್ಚಿ, ಕ್ಯಾಂಟೀನ್, ಹೋಟೆಲ್ಸ್, ಥಿಯೇಟರ್ಸ್.... ಎಲ್ಲೆಂದರಲ್ಲೂ ಹುಚ್ಚ ಹುಚ್ಚ ಹುಚ್ಚ!

ಒಟ್ಟಿನಲ್ಲಿ ಸರ್ವಂ ಹುಚ್ಚಾಮಯಂ!

ಒಬ್ಬ ಹುಚ್ಚ ಇಡೀ ಊರಿಗೆ ಹುಚ್ಚು ಹಿಡಿಸಿದನಾ ಅಥವಾ ಹುಚ್ಚರ ಸಂತೇಲಿ ಉಂಡ ಹುಚ್ಚನೇ ಜಾಣನಾ?

ಹುಚ್ಚ ವೆಂಕಟ್ ಬಿಗ್‌ಬಾಸ್ ಮನೆಯಿಂದ ಅನಿರೀಕ್ಷಿತವಾಗಿ ಹೊರಬಿದ್ದಿದ್ದಾನೆ. ಮೂರು ವಾರಗಳ ಕಾಲ ಅಸಂಖ್ಯಾತ ಪ್ರೇಕ್ಷಕರನ್ನು ಟಿವಿ ಪರದೆಯೆದುರು ಹಿಡಿದಿಟ್ಟಿದ್ದ ಆಯಸ್ಕಾಂತವೊಂದು ಏಕಾಏಕಿ ನಿಷ್ಕ್ರಿಯಗೊಂಡಂತೆ ಬಿಗ್‌ಬಾಸ್ ಮನೆಯೇ ಪೇಲವ. ಕಲರ್ಸ್ ಟಿವಿಯಲ್ಲಿ ವೆಂಕಟ್ ವೈಭವ ಮುಗಿಯುತ್ತಿದ್ದುದನ್ನೇ ಮೂಳೆಚಕ್ಕಳಕ್ಕಾಗಿ ಹಸಿದು ಕೂತಿದ್ದ ನರಿತೋಳಗಳಂತೆ ನ್ಯೂಸ್ ಚಾನಲ್ಲುಗಳು ಕಚ್ಚಾಡಿದ್ದು, ಹುಚ್ಚನ ವರಸೆಯನ್ನೇ ಪ್ರಸಾದವೆಂಬಂತೆ ಕಣ್ಣಿಗೊತ್ತಿಕೊಂಡಿದ್ದು, ಕಳೆದೊಂದು ವಾರದಿಂದ ಬಿಡುವಿಲ್ಲದಂತೆ ವೆಂಕಟ್ ಚೇಷ್ಟೆಗಳ ಧಾರಾವಾಹಿ ವಿಜೃಂಭಿಸಿದ್ದು, ವೆಂಕಟ್ ಪರವಾಗಿ ಜನಸಾಮಾನ್ಯರ ಬೆಂಬಲ, ಅಭಿಮಾನಿಗಳ ಮಹಾಪೂರ ಹರಿದದ್ದು, ಈ ಬಗ್ಗೆ ಫೇಸ್‌ಬುಕ್, ವ್ಯಾಟ್ಸಪ್, ಯೂಟ್ಯೂಬ್‌ಗಳಲ್ಲಿ ವ್ಯಕ್ತವಾಗುತ್ತಿರುವ ಪ್ರತಿಕ್ರಿಯೆಗಳೆಲ್ಲವೂ ಹುಚ್ಚು ಸಮೂಹ ಸನ್ನಿಯೊಂದನ್ನು ಹುಟ್ಟುಹಾಕಿದ್ದು ಬಿಟ್ಟರೆ ಬೇರೇನೂ ಮಾಡಲಿಲ್ಲ.

ಹುಚ್ಚೇ ಬಂಡವಾಳ

ಬಿಗ್‌ಬಾಸ್ ಮೂರನೇ ಆವೃತ್ತಿಯಲ್ಲಿದ್ದ 'ಸ್ಟಾರ್'ಗಳಾದರೂ ಎಂಥವರು? ಅದ್ಯಾರೋ ಸುನಾಮಿ ಕಿಟ್ಟಿಯಂತೆ. ಕಿರುತೆರೆ ನಟ ಚಂದನ್ ಯಾರೆಂದು ಬಲ್ಲವರಷ್ಟೇ ಹೇಳಬೇಕು. ಹಿರಿಯ ನಟ ಶೃತಿ ಬಿಟ್ಟರೆ ಜನ ಯಾವತ್ತೋ ಮರೆತಿದ್ದ ಮಾಸ್ಟರ್ ಆನಂದ್. ಹೇಳಹೆಸರಿಲ್ಲದ ಸೋಕಾಲ್ಡ್ ಗಾಯಕ ರವಿ ಮೂರೂರು. ಟಿವಿ ನ್ಯೂಸ್ ರೆಹಮಾನ್, ರೇಡಿಯೋ ಜಾಕಿ ನೇತ್ರಾ, ಗಗನಸಖಿ ಸೌಜನ್ಯ ಭಾವನಾ ಬೆಳಗೆರೆ, ಸಿನಿಮಾ ನಟಿ ಜಯಶ್ರೀ, ಸೀರಿಯಲ್ ನಟಿ ಕೃತಿಕಾ.

ಈ ಪೈಕಿ ಶೃತಿ ಮತ್ತು ಪೂಜಾ ಗಾಂಧಿ ಬಿಟ್ಟರೆ ಮಿಕ್ಕ ಬಹುತೇಕರು ಯಾರೆಂಬುದೇ ಹೊರ ಜಗತ್ತಿಗೆ ಗೊತ್ತಿಲ್ಲ. ಪೂಜಾ ಗಾಂಧಿಯ ಚುಂಬಕತೆ ತನ್ನ ಹೊಳಪು ಕಳಕೊಂಡು ಯಾವುದೋ ಕಾಲವಾಗಿದೆ. ಇನ್ನು ಕಿಚ್ಚ ಸುದೀಪ್ ಇಡೀ ಬಿಗ್‌ಬಾಸ್ ಕಾರ್ಯಕ್ರಮದ ನಿರೂಪಕನಾಗಿರುವುದು ಇದು ಮೂರನೇ ಬಾರಿಗೆ. ಸುದೀಪ್ ಬದಲಿಗೆ ಉಪ್ಪಿ ಆ್ಯಂಕರಿಂಗ್ ಮಾಡುತ್ತಾರೆಂಬ ನಿರೀಕ್ಷೆಯಿತ್ತು, ಎಂಥದ್ದೇ ಸ್ಟಾರ್ ಆದರೂ ಪದೇಪದೇ ಕಿಸುಬಾಯಿ ದಾಸನಾದರೆ ಯಾರಿಗೆ ತಾನೇ ಇಷ್ಟ? ಸುದೀಪ್‌ಗಿದು ಅರ್ಥವಾಗಲಿಲ್ಲವೋ ಬಿಗ್‌ಬಾಸ್ ಸೃಷ್ಟಿಕರ್ತರ ಹಣೆಬರಹವೇ ಅಷ್ಟೋ ಗೊತ್ತಿಲ್ಲ.

ಪ್ರತಿಯೊಬ್ಬರಿಗೂ ಹುಚ್ಚ ವೆಂಕಟ್ ಮೇಲೆಯೇ ಕಣ್ಣು, ಬಹುಶಃ ಹುಚ್ಚ ವೆಂಕಟ್‌ನ ಜನಪ್ರಿಯತೆ, ವರ್ಚಸ್ಸು, ವಿಕಟ, ವಿಕ್ಷಿಪ್ತತೆ ಮತ್ತು ವಿಚಿತ್ರ ವರ್ತನೆಗಳನ್ನೇ ಬಂಡವಾಳವಾಗಿಸಿಕೊಂಡು ಟಿಆರ್‌ಪಿ ಹೆಚ್ಚಿಸಿಕೊಳ್ಳಬಹು ದೆಂಬ ಲೆಕ್ಕಾಚಾರ ಬಿಗ್‌ಬಾಸ್ ಬ್ರಹ್ಮರ ತಲೆ ಹೊಕ್ಕಿದ್ದೇ ಮೂರನೇ ಆವೃತ್ತಿಯ ಹುಟ್ಟಿಗೆ ಕಾರಣವಾಗಿರಬೇಕು. ಒಬ್ಬ ಹುಚ್ಚನನ್ನೇ ಬಂಡವಾಳ ಮಾಡಿಕೊಂಡರೆ ಮಿಕ್ಕ ಯಾವುದರ ಬಗ್ಗೆಯೂ ಜನ ಗಮನ ಹರಿಸುವುದಿಲ್ಲ ಎಂಬುದು ಮೂರನೇ ಬಿಗ್‌ಬಾಸ್ ಹಿಂದಿದ್ದ ತರ್ಕ ಕೂಡ.

ಹಾಗಿಲ್ಲದೇ ಹೋಗಿದ್ದರೆ ಹೇಳಹೆಸರಿಲ್ಲದ, ಯಾವ ವ್ಯಕ್ತಿ ವಿಶೇಷತೆಯೂ ಇಲ್ಲದ ಇಂಥ ಪುಡಿ ಪುಕ್ಕಾಗಳನ್ನು ಹಿಡಿತಂದು ಬಿಗ್‌ಬಾಸ್ ಮನೆಯೊಳಗ ಕೂಡುತ್ತಿರಲಿಲ್ಲ, ಹುಚ್ಚ ಎಂದು ಗೊತ್ತಿದ್ದೂ ಹುಚ್ಚನೊಬ್ಬ ಏನೆಲ್ಲಾ ಹುಚ್ಚಾಟ ಆಡಬಲ್ಲ ಎಂಬ ಪರಿವೆಯಿದ್ದೂ ಬಿಗ್‌ಬಾಸ್ ಮನೆಯೊಳಕ್ಕೆ ಕರೆತಂದ ಮೊದಲ ತಪ್ಪು, ಹುಚ್ಚ ಎಂದು ತನ್ನನ್ನು ತಾನೇ ಹೆಮ್ಮೆಯಿಂದ ಹೇಳಿಕೊಳ್ಳುವ ಆಸಾಮಿಯಿಂದ ನಾಗರಿಕ ವರ್ತನೆಗಳನ್ನು ಆರೋಗ್ಯ ಮನಸ್ಥಿತಿಯಿಂದ ಹೊಮ್ಮುವ ಪ್ರತಿಕ್ರಿಯೆಗಳನ್ನು ನಿರೀಕ್ಷಿಸುವುದು ಶು ತಪ್ಪು.

ಒದೆ ಬಿತ್ತು

ಮೊದಮೊದಲು ಬಿಗ್‌ಬಾಸ್ ಮನೆ ತುಂಬ ವೆಂಕಟ್‌ನದ್ದೇ ಕಲರವ. ಏಕೆಂದರೆ ಮುಖವಿಲ್ಲದ, ವ್ಯಕ್ತಿತ್ವವಿಲ್ಲದ, ರೂಪಲಾವಣ್ಯ ಮತ್ತು ಯೌವ್ವನ ಬಿ ಬೇರಾವುದೇ ಯೋಗ್ಯತೆಗಳಿಲ್ಲದ ಬಿಗ್‌ಬಾಸ್ ಸ್ಪರ್ಧಿಗಳೆಲ್ಲ ವೆಂಕಟ್ ಮುಂದೆ ಡಲ್ ಹೊಡೆಯುತ್ತಿದ್ದರು. ಸರ್ವಂ ವೆಂಕಟ್‌ಮಯಂ! ಆತ ಕುಂತರೂ ನಿಂತರೂ ತಲೆ ಕೆರೆದರೂ ಹಲ್ಲುಜ್ಜಿಕೊಂಡರೂ ಅದರಲ್ಲೊಂದು ವಿಶೇಷ ಹುಡುಕುವುದೇ ಪ್ರತಿಯೊಬ್ಬರ ಕಾಯಕವಾಯಿತು. ಬಿಗ್‌ಬಾಸ್ ಮನೆಯಲ್ಲಿದ್ದವರ ಪೈಕಿ ಒಂದಿಬ್ಬರು ವೆಂಕಟ್‌ನನ್ನು ಓಲೈಸಿದರಾದರೂ ಅದು- ಆತನ ಅಭಿಮಾನಿಗಳ ಬೆಂಬಲ ಗಿಟ್ಟಿಸುವುದಕ್ಕಾಗಿ ಮಾತ್ರ ಎಂಬುದು ಗುಟ್ಟಾಗುಳಿಯಲಿಲ್ಲ. ಸೆಕ್ಸಿ ಡ್ರೆಸ್ ಹಾಕಿದಳೆಂದು ಪೂಜಾಗಾಂಧಿಯನ್ನು ಅಟಕಾಯಿಸಿದ ಸುದೀಪ್‌ನನ್ನೇ ಏಕವಚನದಲ್ಲಿ ಬಚ್ಚಾನಂತೆ ರೇಗಿಸಿದ ಟಿವಿ ಆ್ಯಂಕರ್ ರೆಹಮಾನ್‌ಗೆ ತನ್ನ ಮುಂದೆ ಏನೇ ಅಲ್ಲವೆಂಬಂತೆ ಕಿಚಾಯಿಸಿದ. ನೀನು ಹೆಸರಿಗೆ ಸುನಾಮಿ ಕಿಟ್ಟಿಯಾದರೆ ನಾನು ಸುನಾಮಿ ಹುಟ್ಟಿಸಿದೋನು ಗೊತ್ತಾ? ಎಂದು ಕೆಣಕಿದ. ಇದೆಲ್ಲವೂ ವೆಂಕಟ್ ಪೌರುಷವನ್ನು ಮತ್ತಷ್ಟು ಹೆಚ್ಚಿಸಿತೇ ಹೊರತು ಇತರೇ ಸ್ಪರ್ಧಿಗಳ ಕಿಮ್ಮತ್ತು ಏರಲಿಲ್ಲ.

ಬರುಬರುತ್ತಾ ಬಿಗ್‌ಬಾಸ್ ಮನೆಯ ಪ್ರತಿ ಪಾತ್ರವೂ ವೆಂಕಟ್ ಕೇಂದ್ರೀಕೃತವಾಗಿ ಸ್ವಂತ ವ್ಯಕ್ತಿತ್ವವನ್ನೇ ಕಳಕೊಂಡವು. ಮೂರನೇ ವಾರದ ಹೊತ್ತಿಗೆ ಒಂದಿಬ್ಬರನ್ನು ಬಿಟ್ಟರೆ ಮಿಕ್ಕೆಲ್ಲರೂ ವೆಂಕಟ ವರ್ಚಸ್ಸಿನ ವಿರುದ್ಧವೇ ಹೊಟ್ಟೆಕಿಚ್ಚಿಗೆ ಬಿದ್ದರು. ಹೇಗಾದರೂ ಮಾಡಿ ವೆಂಕಟ್‌ನನ್ನು ಕಾಲೆಳೆಯಬೇಕು ಅವಮಾನಿಸಬೇಕು, ಹೀಯಾಳಿಸಬೇಕು. ತನ್ನನ್ನು




ರಮ್ಯನ್ನ ಬೇರೆ ಯಾರೇ ಮದುವೆಯಾದ್ರೂ ನಾನೇ ಅವನನ್ನ ಮರ್ಡರ್ ಮಾಡ್ತೀನಿ...


ತನಗೆ ತಾನೇ 'ಹುಚ್ಚಾ ವೆಂಕಟ್' ಎಂದು ಹೆಮ್ಮೆಯಿಂದ ಪರಿಚಯಿಸಿಕೊಳ್ಳು ವಾತನ ಬಗ್ಗೆ ತಲೆ ನೆಟ್ಟಗಿರುವ ಯಾರಾದರೂ ಏನು ತಾನೇ ಹೇಳಲು ಸಾಧ್ಯ?




ತನಗೆ ಅಮಿತಾಬ್ ಬಚ್ಚನ್, ಶಾರುಖ್ ಖಾನ್, ತೆಲುಗಿನ ಮಹೇಶ್ ಬಾಬು ಎಲ್ಲರೂ ಗೊತ್ತು ಅಂತಾನೆ. ಅಂಥವರೆಲ್ಲ ನಿನಗೆ ಹೇಗೆ ಪರಿಚಯ? ಅದಕ್ಕೆ ಏನು ಪ್ರೂಫ್ ಎಂದು ಪ್ರಶ್ನೆಯಿಟ್ಟರೆ ಹೋಗಿ ಅವರನ್ನೇ ಕೇಳಿನೋಡಿ, ನಾನೇನಾದ್ರೂ ಅವರಿಗೆ ಗೊತ್ತಿಲ್ಲ ಅಂತ ಅವರೇನಾದ್ರೂ ಹೇಳಿದ್ರೆ ಆಗ ಬಂದು ನನ್ನನ್ನು ಕೇಳಿ, ಸಾಯೋತನಕ ನಿಮ್ಮ ಗುಲಾಮನಾಗಿರ್ತೀನಿ ಅಂತಾನೆ. ತಲೆ ಸರಿಯಾಗಿರುವ ಯಾರಾದರೂ ಅಮಿತಾಬ್, ಶಾರುಖ್‌ರನ್ನು ನಿಲ್ಲಿಸಿ ನಿಮಗೆ ಹುಚ್ಚಾ ವೆಂಕಟ್ ಗೊತ್ತಾ ಎಂದು ಕೇಳಲು ಸಾಧ್ಯವೆ?

ಇದು ವೆಂಕಟ್ ವರಸೆ. ಇಂಥದ್ದೇ ತಿಕ್ಕಲನ್ನು ನಟಿ ರಮ್ಯಾ ವಿಷಯಕ್ಕೂ ತೇಲಿಬಿಡುತ್ತಾನೆ. ಮಾತುಮಾತಿಗೆ ರಮ್ಯಾಳನ್ನು ಮದುವೆಯಾಗಿದ್ದೀನಿ ಅಂತಿಯಲ್ಲಾ ಅದಕ್ಕೇನಾದ್ರೂ ಪ್ರೂಫ್ ಇದೆಯಾ ಎಂದು ಪ್ರಶ್ನೆಯಿಟ್ಟರೆ ಅದಕ್ಕೆಲ್ಲಾ ನಿಮಗ್ಯಾಕ್ರೀ ನಾನು ಪ್ರೂಫ್ ಕೊಡಬೇಕು? ಹೋಗಿ ರಮ್ಯಾಳನ್ನೇ ಕೇಳಿ ನೋಡಿ. ಅವರೇನಾದ್ರೂ









ನನ್ನನ್ನ ಮದುವೆಯಾಗಿದ್ದೀನಿ ಅಂದ್ರೆ ನಾನೂ ಮದುವೆಯಾಗಿದ್ದೀನಿ ಅಂತೀನಿ. ಅವರೊಮ್ಮೆ ನೀನ್ಯಾರೋ ಗೊತ್ತೇ ಇಲ್ಲಾ ಅಂದ್ರೆ ನಾನೂ ಗೊತ್ತಿಲ್ಲ ಅಂತೀನಿ... ಅನ್ನುತ್ತಾನೆ. ಹಾಗೊಮ್ಮೆ ನನ್ನನ್ನು ಬಿಟ್ಟು ರಮ್ಯಾ ಅವ್ರು ಬೇರೆ ಯಾರನ್ನೇ ಮದುವೆಯಾದ್ರೂ ಅವನನ್ನು ನಾನೇ ಮರ್ಡರ್ ಮಾಡ್ತೀನಿ ಅಂತಾನೂ ರಾಜಾರೋಷವಾಗಿ ಧಮಕಿ ಹಾಕುತ್ತಾನೆ.

ಕಾನೂನಿನ ದೃಷ್ಟಿಯಿಂದ ತಾನೇನು ಮಾತಾಡುತ್ತಿದ್ದೇನೆಂಬ ಪರಿವೆಯೂ ಈತನಿಗಿದ್ದಂತಿಲ್ಲ, ತನ್ನನ್ನು all over the world ಮಿಲಿಯನ್ಸ್ ಆಫ್ ಹುಡುಗಿಯರು ಪ್ರೀತಿಸುತ್ತಿದ್ದಾರೆ. ತನಗೋಸ್ಕರ ಸಾವಿರಾರು ಹುಡುಗಿಯರು ಇನ್ನು ಮದುವೆಯಾಗದೆ ಕಾಯುತ್ತಿದ್ದಾರೆ ಎನ್ನುತ್ತಾನೆ. ಇದನ್ನೇ ಮುಂದುವರಿಸಿ ಈಗಾಗಲೇ ಸಾವಿರಾರು ಹುಡುಗಿಯರು ತನ್ನನ್ನು ಮದುವೆಯಾಗಿದ್ದಾರೆ ಎ ಹೇಳುತ್ತಾನೆ. ರಮ್ಯಾ ಏನಾದ್ರೂ ಮತ್ತೆ ಪೊಲೀಸ್ ಕಂಪ್ಲೇಂಟ್ ಕೊ ಏನು ಮಾಡ್ತೀಯ ಅಂದರೆ ನನ್ನನ್ನು ನೋಡಿದ ಪೊಲೀಸರೇ ತಮ್ಮ ಮಗ ಮದುವೆಯಾಗುವಂತೆ ನನಗೆ ದುಂಬಾಲು ಬೀಳುತ್ತಾರೆ, ಅಷ್ಟೊಂದು ಒಳ್ಳೆಯ ನಾನು ಗೊತ್ತಾ...? ಎಂದು ಮರುಪ್ರಶ್ನೆ ಹಾಕುತ್ತಾನೆ.

ಉಪ್ಪಿ, ಜಗ್ಗೇಶ್, ವಾಟಾಳ್, ಕಾಶೀನಾಥ್ ಇತ್ಯಾದಿಗಳೆಲ್ಲ ಬಣ್ಣ ಕೊಡುವ ಮಜಾದ ಹತ್ತುಪಟ್ಟನ್ನು ಬಣ್ಣ ಹಚ್ಚದೆಯೇ ನ್ಯಾಚುರಲ್ಲಾಗಿ ವೇ ಬಿಟ್ಟಿಯಾಗಿ ಕೊಡುತ್ತಾನೆಂದರೆ ಯಾರಿಗೆ ತಾನೇ ಬೇಡ. ದಟ್ ಹುಚ್ಚಾ ವೆಂಕಟ್!

...ಯೊಬ್ಬರನ್ನೂ ವೆಂಕಟ್ ಅದ್ಯಾವ ಪರಿ ...ಂದರೆ ಮತ್ತೆಂದೂ ಅವರು ವೆಂಕಟ್ ...ುವುದಕ್ಕೇ ಭಯಪಡಬೇಕು. ಹೀಗೆ ...ಂಜೆ ಇಳಿಸಿಕೊಂಡವರೆಲ್ಲ ಒಟ್ಟಾಗಿಯೇ ಆತನ ...ತ್ತಿ ಮಸೆಯುತ್ತಿದ್ದರು. ಇಡೀ ಬಿಗ್‌ಬಾಸ್ ... ಒಂದಾದರೆ ಒಬ್ಬ ವೆಂಕಟ್ ಮಾತ್ರ ಒಂದು.

ಅತಿರೇಕಕ್ಕೆ ಹೋಗಿದ್ದು ರವಿ ಮುರೂರು ...ಯಕನನ್ನು ವೆಂಕಟ್ ಹಿಡಿದು ಎಕ್ಕಾಮಕ್ಕಾ ...ಮೂಲಕ. ಮೊದಲು ಹುಚ್ಚಾ ವೆಂಕಟ್‌ನ ...ಪಕ್ಷ ರವಿ ಮುರೂರು ಹುಚ್ಚಾ ವೆಂಕಟ್ ...ಗಳ ಸೇನೆಯೇ ಬಂದಲ್ಲು ...ಮುಕ್ಕಾಲು ಜನ ಎಂದೆಲ್ಲ ಕಿಚ್ಚಾಯಿಸಿಬಿಟ್ಟ. ... ಏನೂ ಬೇಕಾದರೂ ಹೇಳು ಆದರೆ ನನ್ನ ...ಗಳನ್ನು ಅವಮಾನಿಸಿದರೆ ಸುಮ್ಮನಿರಲ್ಲ ...ರೌದ್ರಾವತಾರ ತಾಳಿದ ವೆಂಕಟ್ ...ನನ್ನು ಮುಖಾಮೂತಿ ನೋಡದೇ ಚಚ್ಚಿಬಿಟ್ಟ. ...ಟನೆ ಮುಖದಲ್ಲಿ ರಕ್ತ ಸೋರುತ್ತಿದ್ದರೂ ...ಒರೆಸಿಕೊಳ್ಳದೇ ಕ್ಯಾಮೆರಾ ಎದುರು ಪೋಜು ...ಕುರಲ್ಲೇ ಒದೆ ತಿಂದ ಮುರೂರು ...ದ್ದ ಇದರರ್ಥ ಒದೆ ತಿನ್ನುವುದು ಕೂಡ ... ಮನೆಯಲ್ಲಿ ಒಂದು ಶೋಕಿ ಮತ್ತು

ರೊಚ್ಚಿಗೆದ್ದು ಚಚ್ಚಿದ್ದು

...ಬಾಸ್ ನಿಯಮಾವಳಿಗಳ ಪ್ರಕಾರ ಸ್ಪರ್ಧಿಗಳ ...ವರ ಮೇಲೆ ಯಾರು ಕೈಮಾಡಿದರೂ ಅದು ನಿಷಿದ್ಧ ಮತ್ತು ಅಪದ್ಧ. ಮಾತುಮಾತಿಗೆ ತನ್ನ ಹೆಸರೇ ಹುಚ್ಚಾ ವೆಂಕಟ್, ತನ್ನ ಅಭಿಮಾನಿಗಳ ಸೇನೆಯೇ ಇದೆಯೆಂದು ಪಕ್ಕಾ ಹುಚ್ಚನಂತೆ ಕೊಚ್ಚಿಕೊಳ್ಳುವ ಆಸಾಮಿಯಿಂದ ಬಿಗ್‌ಬಾಸ್ ಮನೆಯ ಪ್ರತಿಸ್ಪರ್ಧಿಯೂ ನಾಗರಿಕ ವರ್ತನೆಯನ್ನು ನಿರೀಕ್ಷಿಸುತ್ತಾರೆ ಮತ್ತು ಹುಚ್ಚನ ಪ್ರತಿಕ್ರಿಯೆಯನ್ನು ಗಂಭೀರವಾಗಿ ಪರಿಗಣಿಸಿ ಅದರ ವಿರುದ್ಧ ಕತ್ತಿ ಮಸೆಯುತ್ತಾರೆ!





ಇಲ್ಲಿ ಹುಚ್ಚರು ಯಾರೆಂಬುದೇ ಪ್ರಶ್ನೆಯಾಗಿ ಉಳಿದುಬಿಟ್ಟಿತ್ತು. ಬಿಗ್‌ಬಾಸ್ ಮನೆಯ ನಿಯಮಾವಳಿಗಳು ಮಾನಸಿಕ ಸ್ವಾಸ್ಥರಿಗೇ ಹೊರತು ಅಸ್ವಸ್ಥರಿಗಲ್ಲ. ಹುಚ್ಚರಿಗದು ಅನ್ವಯಿಸುವುದಿಲ್ಲ ಎಂಬ ಕನಿಷ್ಠ ಪರಿವೆಯೇ ಬಿಗ್‌ಬಾಸ್ ಬ್ರಹ್ಮರಿಗಿರಲಿಲ್ಲ. ವೆಂಕಟ್ ತನ್ನನ್ನು ಕೆಣಕಿ ಹೀಯಾಳಿಸುತ್ತಿದ್ದವನನ್ನು ರೊಚ್ಚಿಗೆದ್ದು ಅಟ್ಟಾಡಿಸುತ್ತಿದ್ದರೆ ಇತ್ತ ಸುದೀಪ್ ಅದು ಮಹಾಪರಾಧ ಅಂದರು. ತನ್ನನ್ನು ಉಚ್ಚಾಟಿಸಿದ್ದು ಗೊತ್ತಾಗಿದ್ದೇ ಮೌನವಾಗಿ ಎದ್ದು ನಡೆದ ವೆಂಕಟ್ ಇನ್ನೇನು ಷೂ ಹಾಕಿಕೊಂಡು ಹೊರಬೀಳಬೇಕೆನ್ನುವಷ್ಟರಲ್ಲೇ ನಾಲ್ವರು ಬೌನ್ಸರ್‌ಗಳನ್ನು ಛೂಬಿಟ್ಟು ಅಪರಾಧಿಯಂತೆ ಹೊರದಬ್ಬಲೆತ್ನಿಸಿದ್ದು, ಆನಂತರ ಪ್ರೇಕ್ಷಕರೆದುರು ಹೊಡೆದಾಟ ವೀರಾವೇಶದಲ್ಲಿ ತಾವೇನೂ ಕಮ್ಮಿಯಿಲ್ಲವೆಂಬಂತೆ ಸುದೀಪ್ ತೊಡೆ ತಟ್ಟಿದ್ದು, ಅದಕ್ಕೆ ವೆಂಕಟ್ ತನ್ನದೇ ಧಾಟಿಯಲ್ಲಿ ಎದುರುತ್ತರ ನೀಡಿದ್ದು-ಇತ್ಯಾದಿಗಳೆಲ್ಲವೂ ಹುಚ್ಚನೊಬ್ಬನನ್ನು ತನ್ನ ಮುಗ್ಧತೆಯ ಕಾರಣಕ್ಕೆ ನರಿಬುದ್ಧಿಯ ಕ್ರಿಮಿನಲ್‌ಗಳೆಲ್ಲ ಸೇರಿಕೊಂಡು ಭೇಟಿಯಾಡಿದಂತಿತ್ತು.

ಜನಪ್ರಿಯತೆಯಲ್ಲಿ ವೆಂಕಟ್ ಬೇರೆಲ್ಲ ಸ್ಪರ್ಧಿಗಳಿಗಿಂತಲೂ ಮುಂದಿದ್ದ. ಬಿದ್ದ ಓಟುಗಳಿಗೆ ಹೋಲಿಸಿದರೆ ಬೇರೆ ಯಾವೊಬ್ಬ ಸ್ಪರ್ಧಿಯೂ ವೆಂಕಟ್ ಹತ್ತಿರಕ್ಕೂ ಬರಲು ಸಾಧ್ಯವಿರಲಿಲ್ಲ. ವೆಂಕಟ್ ಬಿಗ್‌ಬಾಸ್ ಮನೆಯಲ್ಲಿದ್ದ ಕೊನೇಕ್ಷಣದವರೆಗೂ ಆತನೇ ಈ ಬಾರಿಯ ವಿನ್ನರ್ ಎಂಬ ಭರವಸೆ ಮೂಡಿಸಿದ್ದ. ಒಂದು ಮೂಲದ ಪ್ರಕಾರ ವೆಂಕಟ್‌ನನ್ನು ಮತ್ತೆ ಬಿಗ್‌ಬಾಸ್ ಮನೆಗೆ ಕರೆತರುವ ಉದ್ದೇಶ ಅದರ ಸೃಷ್ಟಿಕರ್ತರಿಗಿತ್ತು. ಆದರೆ ವೆಂಕಟ್ ತಾನೇ ಹೊರಹೋಗಲು ಮುಂದಾಗಿಬಿಟ್ಟ. ಅದರಲ್ಲೂ ಸುದೀಪ್‌ನನ್ನು ಆತ ಕೆಣಕಿದ ರೀತಿಯಿತ್ತಲ್ಲ; ಮತ್ತೆ ಪ್ಯಾಚ್‌ಅಪ್ ಸಾಧ್ಯವೇ ಇರಲಿಲ್ಲ!

ಚಾನಲ್ ಕಚ್ಚಾಟ

ಇದು ಬಿಗ್‌ಬಾಸ್ ಮನೆಯಿಂದ ವೆಂಕಟ್ ಹೊರಬಿದ್ದ ರೀತಿಯಾದರೆ ಅದನ್ನೇ ಕಾದು ಕುಳಿತಿದ್ದ ನ್ಯೂಸ್ ಚಾನಲ್ಲುಗಳ ಹುಚ್ಚಾಟವಿತ್ತಲ್ಲ ಅದು ಕಸದ ತೊಟ್ಟಿಗಳ ಮುಂದೆ ಕಚ್ಚಾಟಕ್ಕಿಳಿದ ನಾಯಿಗಳನ್ನೂ ಅಸಹ್ಯಪಡಿಸುವಂತಿತ್ತು. ಬಿಗ್‌ಬಾಸ್ ಮನೆಯಿಂದ ವೆಂಕಟ್ ಸುದ್ದಿ ಕೇಳಿದ್ದೇ ತಡ ಮುಕ್ಕಾಲು ಡಜನ್ ನ್ಯೂಸ್ ಚಾನಲ್ಲುಗಳ ಓಬಿ ವ್ಯಾನುಗಳೆಲ್ಲ ಬಿಗ್‌ಬಾಸ್ ಮನೆಯ ಬಾಗಿಲಲ್ಲಿ ಇಟ್ಟಾಡುತ್ತಿದ್ದವು. ವೆಂಕಟ್ ಹೊರಬೀಳುವುದನ್ನೇ ರಣಹದ್ದುಗಳಂತೆ ಹಪಾಹಪಿಸುತ್ತಿದ್ದ ಚಾನಲ್‌ಗಳನ್ನು ಕಂಡಿದ್ದೇ ಪರಮೇಶ್ವರ್ ಗುಂಡ್ಕಲ ಹೌಹಾರಿದ.

ವೆಂಕಟ್ ಹೊರಬರುತ್ತಿದ್ದಂತೆ ಟಿವಿ ನೈನ್‌ನಲ್ಲಿ ಮೊದಲ ಸಂದರ್ಶನ ಪ್ರಸಾರವಾಯಿತು. ಅದರಲ್ಲಿ ಸುದೀಪ್ ಅಭಿಮಾನಿಗಳಿಗೂ ವೆಂಕಟ್ ಅಭಿಮಾನಿಗಳಿಗೂ ಹಣಾಹಣಿ ಏರ್ಪಟ್ಟಂತೆ ಒಂದು ಟೈಪಿನ ವಿದ್ಯಮಾನವಾದರೆ ವೆಂಕಟ್ ನೇರವಾಗಿ ಸುದೀಪ್‌ನನ್ನೇ ಅಟಕಾಯಿಸಿಕೊಂಡ. ಇಡೀ ದಿನ ಟಿವಿ ನೈನ್ ಮತ್ತು ನ್ಯೂಸ್ ನೈನ್‌ಗಳು ವೆಂಕಟ್ ಮಹಾತ್ಮೆಯನ್ನು ಬಿತ್ತರಿಸಿದವು. ಇದಾಗುತ್ತಿದ್ದಂತೆ ಮತ್ತೊಂದು ಚಾನಲ್ ಟಿವಿ ನೈನ್‌ನ ಗೇಟಿನಲ್ಲೇ ವೆಂಕಟ್‌ನನ್ನು ಎತ್ತಾಕಿಕೊಂಡು ತನ್ನ ಸ್ಟುಡಿಯೋಗೆ ಎಳೆದೊಯ್ದಿತು. ಟಿವಿ ಪರದೆಯಲ್ಲಿ ವೆಂಕಟ್ ಮುಖ ಬರುವುದಕ್ಕೂ ಮುನ್ನ ಸ್ಟುಡಿಯೋ ಪಕ್ಕದ ರೆಸ್ಟ್‌ರೂಮಿನಲ್ಲಿ ಬರೋಬ್ಬರಿ ಒಂದು ಕ್ವಾರ್ಟರ್ ವಿಸ್ಕಿ ಮತ್ತು ಪ್ಲೇಟ್ ಕಬಾಬು ಮುಗಿಸಿದ್ದ. ಅದು ಮುಗಿಯುತ್ತಿದ್ದಂತೆ ನೆಲಗಳ್ಳರ ಚಾನಲ್ಲಿಗೂ ಕರಗಳ್ಳರ ಚಾನಲ್ಲಿಗೂ ಅಕ್ಷರಶಃ ಮಾರಾಮಾರಿಯೇ ನಡೆದುಹೋಯಿತು.

ಕೊನೆಗೂ ವಿಧಿಯಿಲ್ಲದೆ ರಿಯಲ್ ಎಸ್ಟೇಟ್ ರೌಡಿಗಳ ಚಾನಲ್ಲಿಗೆ ಶರಣಾದ ವೆಂಕಟ್ ಇಲ್ಲೂ ಕೂಡ ವಿಧಿಯಿಲ್ಲದೆ ಮತ್ತೆ ಎಣ್ಣೆ ಹೊಡೆಯಬೇಕಾಯಿತು. ಇನ್ನೇನು ಮುಗಿಯಬೇಕೆನ್ನುವಷ್ಟರಲ್ಲಿ ಸಮಯಸಾಧಕರ ಚಾನಲ್ ಎತ್ತಾಕಿಕೊಂಡಿತು. ಅಲ್ಲಿಂದ ತಪ್ಪಿಸಿಕೊಂಡರೆ ಭೂಗತ ಡಾನ್‌ನ ಚಾನಲ್. ಅದು ಮುಗಿಯಿತೆಂದರೆ ಗಣಿಕಳ್ಳರ ಚಾನಲ್- ಹೀಗೆ ಐದು ದಿನಗಳ ಕಾಲ ಕರ್ನಾಟಕದಲ್ಲಿ ಬರ, ಅತಿವೃಷ್ಟಿ, ಕೋಮುಗಲಭೆ, ಅಧಿವೇಶನ, ರೈತರ ಆತ್ಮಹತ್ಯೆ, ಉಗ್ರರ ರಕ್ತಪಾತ, ಭ್ರಷ್ಟಾಚಾರ ಇತ್ಯಾದಿ ಏನೆಲ್ಲಾ ಸಮಸ್ಯೆಗಳಿದ್ದರೂ ನ್ಯೂಸ್ ಚಾನಲ್ಲುಗಳು ಮಾತ್ರ ಹುಚ್ಚನ ಭಜನೆಯಲ್ಲೇ ಕಾಲ ಕಳೆದುಬಿಟ್ಟವು.

ನಿಜಕ್ಕೂ ಹುಚ್ಚರು ಯಾರೆಂಬುದೇ ಗೊಂದಲವಾದಂತೆ ಸರ್ವಂ ಹುಚ್ಚ ಮಯಂ. ಕರ್ನಾಟಕದ ದಿನನಿತ್ಯದ ಆಗುಹೋಗುಗಳಿಗಿಂತಲೂ ಹುಚ್ಚನೊಬ್ಬನ ಹುಚ್ಚಾಟವೇ ಈ ಚಾನಲ್ಲುಗಳಿಗೆ ಮುಖ್ಯವಾಯಿತೆ? ಕರ್ನಾಟಕದ ಸಮಸ್ಯೆಗಳ ಬಗ್ಗೆ, ಟಿಪ್ಪೂ ಸುಲ್ತಾನ್ ಬಗ್ಗೆ, ಅಂಬೇಡ್ಕರ್ ಕುರಿತಂತೆ ಹುಚ್ಚನೊಬ್ಬನ ಬಾಯಿಂದ ಪ್ರತಿಕ್ರಿಯೆ ಬೇಡುವ ಚಾನಲ್‌ಗಳು, ಹುಚ್ಚ ಕೊಟ್ಟ ಪ್ರತಿಕ್ರಿಯೆಯನ್ನು ವಿರೋಧಿಸಿ ಹುಚ್ಚನ ಮುಖಕ್ಕೆ ಮಸಿ ಬಳಿಯುವ ಹೋರಾಟಗಾರರು. ಇಲ್ಲಿ ಹುಚ್ಚ್ಯಾರು, ಅತೀ ಹುಚ್ಚ್ಯಾರು, ಅರೆ ಹುಚ್ಚ್ಯಾರು?

ಜನ ಮರುಳೋ ಜಾತ್ರೆ ಮರುಳೋ ಎಂಬುದು ಹಳೇ ಮಾತು. ಕರ್ನಾಟಕದ ಮೀಡಿಯಾಗಳ ಮಟ್ಟಿಗದು ಹುಚ್ಚನ ಮದುವೇಲಿ ಉಂಡೋನೇ ಜಾಣ ಎಂಬಂತಾಗಿದೆ. ಒಬ್ಬ ಹುಚ್ಚ ಇನ್ನೊಬ್ಬ ಕಿಚ್ಚ ಮತ್ತೊಬ್ಬ ಮಗದೊಬ್ಬ ಬಚ್ಚಾ ಲುಚ್ಚಾ, ಒಳ್ಳೇ ಐಡಿಯಾ.... ಮೆಂಟಲ್ ಮೀಡಿಯಾ....?

■ ರಾ. ಸೋಮನಾಥ್

...ಚ್ಚ ವೆಂಕಟಿಯ ದರ್ಶನ...


...ಮೊಗ್ಗದ ನರರೋಗ ತಜ್ಞ ವೈದ್ಯರು ತುಂಬ ಹೆಸರು ವಾಸಿಯಾಗಿದ್ದಾರೆ. ...ಕಡಿಮೆ ಚಾರ್ಜು ಮಾಡುವ ಅವರು ನೀಡುವ ಚಿಕಿತ್ಸೆಯಿಂದ ... ಸಂಪೂರ್ಣ ಗುಣ ಹೊಂದಿದ್ದಾರೆ. ನಮ್ಮೂರಿನ ಎಂಟತ್ತು ಜನರು ... ಬರದಂತೆ ಗುಣಮುಖರಾಗಿದ್ದಾರೆ. ಈ ಪೈಕಿ ಒಬ್ಬ ಹುಡುಗ ... ತಿರುಗಿ ಬಿದ್ದ ಫಲವಾಗಿ ಶಿವಮೊಗ್ಗಕ್ಕೆ ಬರುತ್ತೇನೆಂದು ಫೋನ್ ... ಕೂಡಲೇ ನನಗೊಂದಿಷ್ಟು ಭಯವಾಯ್ತು.

...ದರೆ ನರರೋಗತಜ್ಞ ವೈದ್ಯರು ಹೇಳಿದ ಪಥ್ಯಗಳನ್ನು ಈತ ಪಾಲಿಸಿಲ್ಲ, ... ಮಾತ್ರೆಗಳನ್ನು ತೆಗೆದುಕೊಂಡಿಲ್ಲ. ಅದೇ ಕಾರಣಕ್ಕೆ ಈತ ...ದ್ದಿದ್ದಾನೆ ಅನ್ನಿಸಿತು. ಈ ಸಂಬಂಧವಾಗಿ ವೈದ್ಯರು ...ದವರಂತೆ ಗಿಂಜುತ್ತಾ ರೇಗುವುದನ್ನು ನೆನೆಸಿಕೊಂಡೇ ...ಯ್ಯ "ಆ ಡಾಕ್ಟ್ರು ಬೈತರೆ ಕಣಪ್ಪ, ನಿಂದೇ ಏನೋ ತಪ್ಪದೆ" ...ಣ್ಣ ಮದುವೆ ಫಿಕ್ಸಾಗಿದೆ ಕಣಣ್ಣ, ಏನಾರ ಮಾಡಣ್ಣ" ...ಗರೆದ. ನಾನು ನಿರ್ವಾಹವಿಲ್ಲದೆ ಶಾಪಿನ ಹತ್ತಿರ ಸುಳಿದೆ. ...ದು ಬರೆಸಿದರೆ ರೋಗಿ ಸರದಿ ಇನ್ನು ಮೂರು ತಿಂಗಳಿಗೆ ...ತ್ತ ತೋರಿಸಬೇಕೆಂದರೆ ಬೆಳಗ್ಗೆಯಿಂದ ರಾತ್ರಿ 9 ಗಂಟೆವರೆಗೆ ... ಅದೂ ಭರವಸೆಯಿಲ್ಲ, ಹೇಗಾದರಾಗಲಿ ಎಂದು ಹೆಸರು ...ಟರಿಗೆ ಹೋಗಿ ನಿಂತು ತುಂಬಾ ವಿನಯದಿಂದ "ಮೇಡಂ, ...ಷಂಟ್ ಒಬ್ಬ ಮಂಡ್ಯ ಜಿಲ್ಲೆಯಿಂದ ಬರ್ತಾಯಿದಾನೆ. ... ಬರಕೊಳ್ರಿ. ಹನ್ನೊಂದು ಗಂಟೆಗೆ ಬರ್ತಾನೆ" ಎಂದು ...ಳಿದೆ.

...ಸ್ಪೆಪುರು ಮೂಲೆಯಲ್ಲಿದ್ದ ಟಿವಿ ನೋಡುತ್ತಿದ್ದಳು. ನನ್ನತ್ತ ತಿರುಗಿ ... ಉತ್ತರ ಕೊಡಲಿಲ್ಲ, ಸರ್ಕಾರಿ ಹೋಲಿ ನಿಯಮದ ಪ್ರಕಾರ ...ಗಳಿಗೆ ಪೇಷಂಟೇ ಬಂದು ಹೆಸರು ಬರೆಸಬೇಕು. ಆದರೀಗ ...ಸದು ನಾನಿದ್ದೇನೆ. ಆತ ಇನ್ನೂ ಬೀರೂರು ಸಮೀಪ ಬರುತ್ತಿದ್ದಾನೆ. ...ಸಾಕಿರುವುದೆಂದು "ಆತ ಹಳೆ ಪೇಷಂಟ್ ಮೇಡಂ. ಬೇಕಿದ್ರೆ ಈ ...ನಂಬ್ರೆ, ಹೆಸರು ಬರುಕೊಳ್ರಿ" ಎಂದೆ.

...ಯಲ್ಲಿ ಕಾಣುತ್ತಿದ್ದ ಹುಚ್ಚ ವೆಂಕಟನ ಕಡೆಯಿಂದ ನನ್ನ ಕಡೆ ...ಲ್ಲ, ಮಾತನಾಡಲಿಲ್ಲ. ಆಕೆಯ ತಾತ್ಸಾರ ಒಂದಿಷ್ಟು ಸಿಟ್ಟು ... ತರೆದುಕೊಂಡು "ಹುಡುಗನಿಗೆ ಮದುವೆ ಫಿಕ್ಸಾಗಿದೆ ... ಹೋಗಬೇಕು. ಮತ್ತೆ ತಲೆತಿರುಗಿ ಬಿದ್ದರೇನಂತೆ. ಮದುವೆ ದಿನ ಬಿದ್ರೇನು ಗತಿ. ಅದ್ಕೆ ನೀವು ಡಾಕ್ಟ್ರು ನೋಡಕ್ಕೆ ಅವಕಾಶ ಮಾಡಿಕೊಡಿ" ಎಂದೆ.

ಅಷ್ಟರಲ್ಲಿ ಪಕ್ಕದ ಕೊಠಡಿಯಿಂದ ಆಕೆಗೆ ಕರೆಬಂತು. ಅವಳು ಟಿವಿಯಲ್ಲಿ ನೆಟ್ಟಿದ್ದ ಕಣ್ಣುಗಳು ಅಲುಗಲಿಲ್ಲ. ಅದೇ ಭಂಗಿಯಲ್ಲಿ ಪಕ್ಕದ ರೂಮಿಗೆ ಹೋದವಳು, ಕೂಡಲೇ ಬಂದಳು. ಬರುವಾಗಲೂ ಅವಳ ಕಣ್ಣು ಟಿವಿ ಆಕ್ರಮಿಸಿಕೊಂಡಿದ್ದವು. ಅವಳು ಡ್ರಾ ಎಳೆಯುವಾಗ, ಏನನ್ನೋ ತಡಕಿ ತೆಗೆದುಕೊಂಡಾಗ, ಮತ್ತೆ ರೂಮಿಗೆ ಹಿಂದುಮುಂದಾಗಿ ಹೋದಾಗ ಕೂಡ



ಹುಚ್ಚ ವೆಂಕಟನ ಮಾತುಗಳಿಗೆ ವಶೀಕರಣಗೊಂಡ ಗೊಂಬೆಯಂತಾಗಿದ್ದಳು. ಆದ್ದರಿಂತ ನನ್ನ ಮಾತುಗಳು ಅವಳ ತಲೆಗೆ ಹೋದಂತೆ ಕಾಣಲಿಲ್ಲ.

ಏನು ಮಾಡುವುದು? ರೇಗಿದರೆ ಜಗಳವಾಗುತ್ತೆ, ರೋಗಿ ಕಡೆಯವರು ರೇಗುವಂತಿಲ್ಲ, ಆದಾಗಲೇ ಬಂದು ಕುಳಿತ ಅಷ್ಟೂ ರೋಗಿಗಳು ಬಿಗ್‌ಬಾಸ್ ಮನೆ ದೃಶ್ಯದಲ್ಲಿ ಬಂದಿಯಾಗಿಹೋಗಿದ್ದರು. ಅವರ ಹೆಸರು ಬರೆದುಕೊಂಡು ಕೂರಿಸಿದವಳಂತೂ ನಿಜಕ್ಕೂ ಹುಚ್ಚು ವೆಂಕಟಿಯಾಗಿ ಹೋಗಿದ್ದಳು. ಒಮ್ಮೆ ಅವಳು ಹುಚ್ಚ ವೆಂಕಟನಂತೆಯೇ ಕಣ್ಣುಬಿಟ್ಟು ರೇಗಿ "ಈ ಕಡೆ ಬನ್ರಿ" ಎಂದಳು. ಯಾಕೆಂದರೆ ನಾನು ಟಿವಿಗೆ ಅಡ್ಡವಾಗಿ ನಿಂತಿದ್ದೆ. ಅಷ್ಟರಲ್ಲಿ ಪೇಷಂಟನಿಂದ ಫೋನ್ ಬಂತು.

"ಬಸ್ಟಾಂಡಿನಲ್ಲಿದ್ದೇನೆ ಬಂದು ಕರೆದುಕೊಂಡು ಹೋಗಿ" ಎಂದ. ಇದೊಂದು ಸೈರಣೆಯನ್ನೇ ಹಾಳು ಮಾಡುವ ಪ್ರಸಂಗ. ಏಕೆಂದರೆ ಬಸ್ಟಾಂಡಿನಲ್ಲಿ ಎಲ್ಲಿದ್ದೇನೆ, ನನ್ನೆದುರು ಯಾವ ಅಂಗಡಿಯಿದೆ ಎಂದು ಯಾವ ಗುರುತನ್ನೂ ಹೇಳಲಾಗದ ಆತ ನಿಂತಲ್ಲಿ ನಿಲ್ಲದೆ, ನನ್ನನ್ನು ಹುಡುಕುತ್ತ, ನಾನೂ ಅವನನ್ನು ಹುಡುಕುತ್ತ ಒಂದು ಗಂಟೆಯೇ ಕಳೆದುಹೋಯ್ತು. ಅಂತೂ ಸಿಕ್ಕಿದ. ರೇಗಿದರೆ ಊರ ಕಡೆಯವರು "ನಮ್ಮ ಹಣೆಬರ ಇದ್ದಂಗಾಯ್ತದೆ" ಎಂದು ಹೊರಟುಹೋಗುತ್ತಾರೆಂದು ಗೊತ್ತಿದ್ದ ನಾನು ರೇಗಲಿಲ್ಲ. ಸುಮ್ಮನೆ ಕರೆದುಕೊಂಡು ಹೋಗಿ ಹುಚ್ಚು ವೆಂಕಟಿಯ ಎದುರು ನಿಲ್ಲಿಸಿದೆ.

ಟಿವಿಗೆ ಮರೆಯಾಗಿ ನಿಂತ ನಮ್ಮನ್ನ ಗದರಿ ದೂರ ಕೂರಲು ಹೇಳಿದಳು. ಕೂರುವುದೆಂದರೆ ರಾತ್ರಿ ಒಂಬತ್ತು ಗಂಟೆಯವರೆಗೆ. ಅಂತೂ ಸರದಿಯಂತೆ ಎಲ್ಲಾ ಚಾನಲ್‌ಗಳಿಗೂ ಹೋಗುತ್ತಿದ್ದ ಆಕೆ ರಾತ್ರಿ ಒಂಬತ್ತು ಗಂಟೆವರೆಗೆ ನಮಗಿಷ್ಟವಿಲ್ಲದಿದ್ದರೂ ಹುಚ್ಚ ವೆಂಕಟನನ್ನು ತೋರಿದಳು.

ನಿಜಕ್ಕೂ ಈ ಹುಚ್ಚ ವೆಂಕಟ ಮನೋವೈದ್ಯರ ತಪಾಸಣೆಗೆ ಗುರಿಯಾಗಿ ವಾಪಸು ಬರಬೇಕಿರುವ ವ್ಯಕ್ತಿ. ಈತನನ್ನ ಬಿಗ್‌ಬಾಸ್ ಮನೆಗೆ ಕರೆತಂದವರು ಏನನ್ನಾದರೂ ಮಾಡಲು ಹೇಸದ ಕ್ರೂರಿಗಳಂತವರು; ಮನೆ ಹುಚ್ಚನನ್ನು ಬೀದಿಗೆ ಬಿಟ್ಟು ಕಾಸು ಮಾಡುವಂತವರು ಅನ್ನಿಸಿತು. ಆತ ಸಹಜವಾಗಿಲ್ಲ. ಯಾವಾಗಲಾದರೂ ತನ್ನ ಆವೇಶದಿಂದ ಏನನ್ನಾದರೂ ಮಾಡಿಬಿಡುವಂತಹವನು. ಹೊಗಳಿದರೆ ಆತನ ಮುಖ ಅರಳುತ್ತದೆ. ಬೈದರೆ ಕೆಂಡಮಂಡಲವಾಗುತ್ತಾನೆ. ಒಮ್ಮೊಮ್ಮೆ ಇದೂ ಕೂಡ ಸುಳ್ಳು. ಇಂತಹ ವಿಕ್ಷಿಪ್ತನನ್ನು ಕರೆತಂದು ಇಡೀ ಕರ್ನಾಟಕಕ್ಕೆ ಹುಚ್ಚೆಬ್ಬಿಸಿದವರು ಒಂದು ಹಂತದಲ್ಲಿ ಅವನಂತೆಯೇ ರೇಗಿದ್ದರು.

ರೆಹಮಾನ್ ಅಷ್ಟೊಂದು ಆಕ್ರೋಶಭರಿತನಾಗಿ ಹುಚ್ಚನ ಮೇಲೆ ರೇಗುವ ಅಗತ್ಯವಿರಲಿಲ್ಲ. ಸುದೀಪ್ ಕೂಡ ಒಮ್ಮೆ ರೇಗಿ ಹುಚ್ಚ ವೆಂಕಟನ ಹಂತ ತಲುಪಿದ್ದರು. ಇದು ಹುಚ್ಚರ ಸಹವಾಸದ ಪರಿಣಾಮ. ಅಂತೂ ಆತ ಹೊರಬಿದ್ದನಂತರ ಕಾಡಿನಲ್ಲಿ ಬಲಿಯಾದ ಮಿಕವೊಂದರ ಉಚ್ಚಿಷ್ಟಗಳನ್ನು ಅರಸುತ್ತ ಬರುವ ಹೈನಾಗಳಂತೆ ನಮ್ಮ ಟಿವಿ ಚಾನಲ್‌ನವರು ವೆಂಕಟನನ್ನು ಹಿಂದಿ ಹೀರಿ ಬಿಸಾಕಿದರು.

ಆತ ಗುಣಮುಖನಾಗುವುದು ಅವರ್‍ಯಾರಿಗೂ ಬೇಕಾಗಿರಲಿಲ್ಲ. ಹುಚ್ಚ ವೆಂಕಟನಂತೆ ಕಾಣುವ ರಂಗನಾಥನಂತೂ ರಾಧಾ ಎಂಬಾಕೆಯನ್ನು ಬಿಟ್ಟು ಮರೆಯಲ್ಲಿ ನಿಂತು ಹುಚ್ಚನ ಪರಮಾವಧಿ ನೋಡಿ ನಗುತ್ತಿರುವಂತೆ ಕಂಡ. ಬರುಬರುತ್ತ ನಮ್ಮ ಮನೆಯ ಟಿವಿಗಳೇ ಮನೆಗೆ ಬಂದು ಸ್ಥಾಪನೆಗೊಂಡ ಹುಚ್ಚನಂತೆ ಕಾಣತೊಡಗಿದೆ. ಅಂತೂ ಹುಚ್ಚ ವೆಂಕಟ್ ಹುಟ್ಟುಹಾಕಿದ ಹುಚ್ಚ ವೆಂಕಟಗೆ ಧನ್ಯವಾದ.

■ ಬಿ. ಚಂದ್ರೇಗೌಡ

ಗೋ ರಾಜಕಾರಣ: ಒಳಗೊಂದು ಹೊರಗೊಂದು

2002ನೇ ಇಸವಿಯಲ್ಲಿ ಹರಿಯಾಣದ ಜಝ್ಝಾರ್ ಜಿಲ್ಲೆಯ ದಿಲಾವ್ ಪೊಲೀಸ್ ಸ್ಟೇಷನ್ನಿನ ಎದುರಿಗೇ ನಡೆದ ಘಟನೆಯನ್ನು ಎಲ್ಲರೂ ಮರೆತಿರುವಂತಿದೆ. ಕನಿಷ್ಠ ಪಕ್ಷ ದಾದ್ರಿಯ ಇಖ್ಲಾಕ್‌ನನ್ನು ಅಮಾನವೀಯವಾಗಿ ಉಗ್ರರು ಕೊಂದಾಗಲಾದರೂ ಹೆಸರೇ ತಿಳಿಯದ ಆ 5 ಜೀವಗಳು ಸುಮ್ಮನೆ ಲೊಚಗುಟ್ಟಲಾದರೂ ನಮಗೆ ನೆನಪಾಗಬೇಕಿತ್ತು. ಏಕೆಂದರೆ ಯಾವ ಕಾರಣಕ್ಕೆ ಜಝ್ಝಾರಿನ 5 ಜೀವಗಳನ್ನು ಅಂದು ಉಗ್ರರು ಕೊಂದರೋ ಅದೇ ಕಾರಣಕ್ಕೆ ಮತ್ತದೇ ಮನಸ್ಥಿತಿಯ ಉಗ್ರರು ಇಂದು ಇಖ್ಲಾಕ್‌ನನ್ನು ಕೊಂದು ಹಾಕಿದ್ದಾರೆ.

ಹೌದು 15 ವರ್ಷಗಳ ಹಿಂದೆ ಜಝ್ಝಾರಿನ ದಲಿತರು ತಮ್ಮ ಕಾಯಕದಂತೆ ಸತ್ತ ದನದ ಚರ್ಮ ಸುಲಿಯುತ್ತಿದ್ದರು. ಆಗ ಜೀವಂತ ಹಸುವನ್ನು ಕೊಂದು ಚರ್ಮ ಸುಲಿಯಲಾಗುತ್ತಿದೆ ಎಂದು ಗುಲ್ಲೆಬ್ಬಿಸಿದ ಉಗ್ರರ ಗುಂಪೊಂದು ಏಕಾಏಕಿ ಅವರ ಮೇಲೆ ದಾಳಿ ಇಟ್ಟಿತ್ತು. ದಲಿತರು ರಕ್ಷಣೆಗೆಂದು ಸ್ಥಳೀಯ ಪೊಲೀಸ್ ಸ್ಟೇಷನ್ ಹೊಕ್ಕಿದರೂ ಪೊಲೀಸರನ್ನೂ ಲೆಕ್ಕಿಸದೆ ಮೇಲ್ಜಾತಿ ಉಗ್ರರು ಅವರನ್ನು ಹೊರಗೆಳೆದುಕೊಂಡು ಮ್ಯಾಜಿಸ್ಟ್ರೇಟರಿನ ಮುಂದೆಯೇ ಬೆಂಕಿ ಹಚ್ಚಿ ಸುಟ್ಟು ಹಾಕಿದ್ದರು.

"ನಮ್ಮನ್ನೂ ಕೊಂದು ಬಿಡುತ್ತಾರೆ ಎಂಬ ಭಯದಿಂದ ದಲಿತರನ್ನು ರಕ್ಷಿಸಲು ಸಾಧ್ಯವಾಗಲಿಲ್ಲ" ಎಂದು ಪೊಲೀಸರು ಹೇಳಿದ್ದರು. ವಿಶ್ವ ಹಿಂದೂ ಪರಿಷತ್‌ನ ಹಿರಿಯ ಮುಖಂಡ ಗಿರಿರಾಜ ಕಿಶೋರ್ "ನೂರಾರು ಜೀವಕ್ಕಿಂತಲೂ ಒಂದು ಗೋವಿನ ಜೀವಕ್ಕೆ ಹೆಚ್ಚಿನ ಮಹತ್ವವಿದೆ" ಎಂದಿದ್ದನು. ಸ್ಥಳೀಯ ದೇವಸ್ಥಾನದ ಅರ್ಚಕ ಮಹೇಂದ್ರ ಪರಮಾನಂದ "ಅವರು (ದಲಿತರು) ನಮ್ಮ ತಾಯಿಯನ್ನು (ದನ) ಕೊರಿದಿದ್ದಾರೆ. ಅವಳನ್ನು ಕೊಂದವರನ್ನು ಕೊಂದರೆ ತಪ್ಪೇನು?" ಎಂದು ಸಮಜಾಯಿಷಿ ನೀಡಿದ್ದ.

ಹೀಗೆ ಗೋ ರಾಜಕಾರಣಕ್ಕೆ ಅಂದು ದಲಿತರು ಬಲಿಯಾಗಿದ್ದರು. ಈಗ ಮುಸಲ್ಮಾನ ಬಲಿಯಾಗಿದ್ದಾನೆ. ಆದರೆ ಕೊಂದ ಉಗ್ರರ ಪರವಾಗಿರುವವರ ಮಾತು ಮಾತ್ರ ಬದಲಾಗಿಲ್ಲ, ಉದಾಹರಣೆಗೆ ಈ ಹೇಳಿಕೆಗಳನ್ನು ಗಮನಿಸಿ.

"ಮುಸ್ಲಿಮರು ಈ ದೇಶದಲ್ಲಿ ಬದುಕಬೇಕೆಂದರೆ ಗೋಮಾಂಸ ಭಕ್ಷಣೆಯನ್ನು ನಿಲ್ಲಿಸಬೇಕು" ಎಂದು ಹರಿಯಾಣದ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಹೇಳಿದ್ದಾರೆ.

"ಗೋ ಹತ್ಯೆ ಮಾಡುವವರಿಗೆ ಮರಣದಂಡನೆ ಯಾಗಬೇಕು" ಬಿಜೆಪಿ ಸಂಸದೆ ಸಾಕ್ಷಿ ಮಹಾರಾಜ್ ಹೇಳುತ್ತಾರೆ.

"ವೇದಗಳು ಗೋಹತ್ಯೆ ಮಾಡುವ ಪಾಪಿಗಳನ್ನು ಕೊಲ್ಲುವಂತೆ ಹೇಳುತ್ತದೆ" ಎಂದು ಆರೆಸ್ಸೆಸ್ ಮುಖವಾಣಿಯಾದ ಪಾಂಚಜನ್ಯದಲ್ಲಿ ಲೇಖಕ ತುಫೈಲ್ ಚತುರ್ವೇದಿ ಹೇಳುತ್ತಾರೆ.

ಹೀಗೆ ವಿವಾದಾತ್ಮಕ ಹೇಳಿಕೆಗಳನ್ನು ನೀಡಿದ ಕಾರಣಕ್ಕೆ



ಉತ್ತರಪ್ರದೇಶದ ಬಿಜೆಪಿ ಶಾಸಕ ಸಂಗೀತ್ ಸೋಮ್, ಕೇಂದ್ರ ಸಚಿವ ಮಹೇಶ್ ಶರ್ಮ ತಮ್ಮದೇ ಪಕ್ಷದಿಂದ ಸಮನ್ಸ್ ಪಡೆದಿದ್ದಾರೆ.

ಈ ಎರಡು ಅಮಾನವೀಯ ಘಟನೆಗಳ ನಂತರ ಅದನ್ನು ಸಮರ್ಥಿಸಿಕೊಂಡ ಬಿಜೆಪಿ ಮುಖಂಡರು ಮತ್ತು ಹಿಂದೂತ್ವ ಸಂಘಟನೆಗಳು ಏನು ನಿರೂಪಿಸುತ್ತಿವೆ? ನಾವು ದಲಿತರು ಮತ್ತು ಮುಸ್ಲಿಮರನ್ನು ಒಂದಿಲ್ಲೊಂದು ಕಾರಣಕ್ಕೆ ಕೊಲ್ಲುತ್ತಲೇ ಇರುತ್ತೇವೆ ಎಂದು. ಇವೆರಡು ಸಮುದಾಯಗಳ ಬಗ್ಗೆ ಹಿಂದುತ್ವವಾದಿಗಳ ನಿಲುವು ಬದಲಾಗದಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಆದರೆ ವೋಟ್ ಬ್ಯಾಂಕಿಗೋಸ್ಕರ ಬಲಪಂಥೀಯರ ನಿಲುವುಗಳು ಎಡಬಿಡಂಗಿತನದಿಂದ ಕೂಡಿರುವುದನ್ನು ನಾವು ಗಮನಿಸಿ ಜಗಜ್ಜಾಹೀರುಗೊಳಿಸಬೇಕಿದೆ. ಗೋವಿನ ಬಗ್ಗೆ ಬಿಜೆಪಿ ಅಥವಾ ಹಿಂದೂತ್ವವಾದಿಗಳಲ್ಲಿ ಇರುವ ದ್ವಂದ್ವ ಅವರು ಗೋ ರಕ್ಷಣೆಗಾಗಿ ಪಣತೊಟ್ಟು ನಿಂತಿಲ್ಲ, ಬದಲಾಗಿ ದಲಿತರು ಮತ್ತು ಮುಸ್ಲಿಮರನ್ನು ಸದೆಬಡಿಯುವುದಕ್ಕಾಗಿಯೇ ಗೋವನ್ನು ಮುಂದಿಟ್ಟುಕೊಂಡಿರುವುದು ಇಂದು ಸಂಪೂರ್ಣ ಸಾಬೀತಾಗಿದೆ. ಅದನ್ನು ಹಿಂದೂತ್ವವಾದಿಗಳ ಬಾಯಿಗಳೇ ಹೊರಹಾಕಿವೆ. ಅಂತಹ ಹೇಳಿಕೆಗಳನ್ನು ಗಮನಿಸಿ.

"ಕೇರಳದಲ್ಲಿ ಗೋಮಾಂಸ ನಿಷೇಧಕ್ಕೆ ಪಕ್ಷದ ಸಮ್ಮತಿ ಇಲ್ಲ, ಬೀಫ್ ನಿಷೇಧ ಮಾಡುವಂತಹ ಸನ್ನಿವೇಶ ಕೇರಳದಲ್ಲಿ ಇಲ್ಲ, ಬಿಜೆಪಿ ಈ ನಿಟ್ಟಿನಲ್ಲಿ ಯಾವುದೇ ಅಭಿಯಾನ ನಡೆಸಲು ಮುಂದಾಗುವುದಿಲ್ಲ" ಎಂದು ಕೇರಳದ ಬಿಜೆಪಿ ರಾಜ್ಯಾಧ್ಯಕ್ಷ ಮುರಳೀಧರನ್ ಹೇಳಿದ್ದಾರೆ. ಕೇರಳದ ಆರ್ಥಿಕತೆಗೆ ಗೋ ಮಾಂಸದ ಕೊಡುಗೆ ಅಪಾರವಿದೆ. ಅಲ್ಲಿನ ಒಟ್ಟು ಮಾಂಸಾಹಾರ ಬಳಕೆಯಲ್ಲಿ ಗೋಮಾಂಸದ ಪ್ರಮಾಣ ಶೇ. 50ನ್ನು ಮೀರುತ್ತದೆ. ಅದಕ್ಕೆ ಕೇರಳದಲ್ಲಿ ಗೋಮಾಂಸ ನಿಷೇಧಿಸಿದರೆ ಆ ರಾಜಕೀಯ ಪಕ್ಷ ಅಲ್ಲಿನ ರಾಜಕಾರಣದಲ್ಲಿ ಮಕಾಡೆ ಮಲಗುತ್ತದೆ.

ಒಮ್ಮೆ ಕೇರಳದಲ್ಲಿನ ಬಲಪಂಥೀಯ ಸಂಘಟನೆಗಳು ಜಾನುವಾರು ಸಾಗಾಟಗಾರರಿಗೆ ಕಿರುಕುಳ ಕೊಟ್ಟಾಗ ಗೋಮಾಂಸ ಮಾರಾಟವನ್ನೇ ಗೋ ಸಾಗಾಟಗಾರರು ನಿಲ್ಲಿಸಿ ಪ್ರತಿಭಟಿಸಿದ್ದರು. ಇದರ ಪರಿಣಾಮವಾಗಿ ಪ್ರತಿಷ್ಠಿತ ಹೋಟೆಲ್ಲುಗಳು ಒಂದು ಕೆ.ಜಿ ದನದ ಮಾಂಸಕ್ಕೆ 320 ರೂಪಾಯಿ ಕೊಡುವಂತಾಗಿತ್ತು. ಕೇರಳದ ಪ್ರಗತಿಪರ ಸಂಘಟನೆಗಳು ರಾಜ್ಯಕ್ಕೆ ಬರುವ ತರಕಾರಿ ಮತ್ತು ಕೋಳಿ ಲಾರಿಗಳನ್ನು ತಡೆಯುವುದಾಗಿ ಧಮಕಿ ಹಾಕಿದ್ದವು. ಇಂತಹ ಪರಿಸ್ಥಿತಿಯಲ್ಲಿ ಹಿಂದೂತ್ವ ರಾಜಕಾರಣ ಕೇರಳದಲ್ಲಿ ಗೋಮಾಂಸ ರಾಜಕಾರಣವನ್ನು ಬದಿಗಿಟ್ಟು ತೆಪ್ಪಾಯಿತಲ್ಲದೆ ಗೋವಮಾಂಸ ಮಾರಾಟದ ಪರವಾಗಿ ಹೇಳಿಕೆ ನೀಡುವಂತಾಯಿತು. ಅದರ ಪರಿಣಾಮವೇ ಈ ಮೇಲಿನ ಮುರಳೀಧರನ್ ಹೇಳಿಕೆ.

ಇನ್ನು ಗೋವಾ ವಿಚಾರಕ್ಕೆ ಬನ್ನಿ. ಕಳೆದ ಸರ್ಕಾರದಲ್ಲಿ ಬಹಳಷ್ಟು ಚರ್ಚಿತವಾಗಿದ್ದ ಸುದ್ದಿ ಗೋಮಾಂಸ ನಿಷೇಧದ್ದು. ಅಂದಿನ ಗೋವಾ ಮುಖ್ಯಮಂತ್ರಿಯಾಗಿದ್ದ ಮನೋಹರ್ ಪರಿಕ್ಕರ್ ಗೋಮಾಂಸ ನಿಷೇಧದ ಬಗ್ಗೆ ಸ್ಪಷ್ಟ ನಕಾರದ ನಿಲುವನ್ನು ಹೊಂದಿದ್ದರು. ಇಂದು ಕೇಂದ್ರ ಸರ್ಕಾರದ ರಕ್ಷಣಾ ಸಚಿವರಾದ ನಂತರವೂ "ಗೋಮಾಂಸ ತಿನ್ನುವುದು ವ್ಯಕ್ತಿಗತ ವಿಚಾರ. ಆ ಆಯ್ಕೆ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗಬಹುದು. ಸರ್ಕಾರದ ಭಾಗವಾಗಿ ನಾನು ಒಂದು ಗುಂಪನ್ನು ತೃಪ್ತಿಪಡಿಸುವ ನಿಲುವು ತೆಗೆದುಕೊಳ್ಳಲಾರೆ" ಎಂದು ಸ್ಪಷ್ಟವಾಗಿ ತಿಳಿಸುತ್ತಾರೆ. ಗೋವಾದ ಇಂದಿನ ಮುಖ್ಯಮಂತ್ರಿ ಲಕ್ಷ್ಮಿಕಾಂತ್ ಪಾರ್ಸೆಕರ್ "ಗೋವಾದಲ್ಲಿ ಗೋಹತ್ಯೆ ನಿಷೇಧವನ್ನು ಜಾರಿಗೊಳಿಸುವುದಿಲ್ಲ. ಏಕೆಂದರೆ ಈ ರಾಜ್ಯದಲ್ಲಿ ಶೇ. 40 ಮಂದಿಯ ಆಹಾರ ಗೋಮಾಂಸ. ಶೇ. 40ರಷ್ಟು ಮಂದಿ ಪ್ರತಿನಿತ್ಯ ಗೋಮಾಂಸ ಬಳಸುತ್ತಿರುವುದರಿಂದ ಅವರ ಆಹಾರದ ಹಕ್ಕ[...] ಹೇಗೆ ಕಸಿದುಕೊಳ್ಳಲಿ?" ಎಂದು ಗೋರ[...] ಪ್ರಶ್ನಿಸುತ್ತಾರೆ. ಮನೋಹರ್ ಪರಿಕರ್ ಇನ್ನೂ[...] ಹೆಜ್ಜೆ ಮುಂದೆ ಹೋಗಿ "ನಾಳೆಯ ದಿನ ಸಸ್ಯಾ[...] ಇಡೀ ವಿಶ್ವದಾದ್ಯಂತ ಸಸ್ಯಾಹಾರವನ್ನೇ ಸೇವಿಸಬೇಕು[...] ಅದು ಇತರರಿಗೆ ಅನಾನುಕೂಲ, ಅ[...] ಅಸಮಂಜಸವಷ್ಟೇ ಅಲ್ಲ ಒಂದು ದಿನ ತರಕಾರಿಗಳ[...] ಮುಗಿಲುಮುಟ್ಟಬಹುದು ಮತ್ತು ತಿನ್ನಲು [...] ಸಿಗದಂತಾಗಬಹುದು" ಎಂದು ವೈಜ್ಞಾನಿಕ ಪ[...] ಮಾಡುತ್ತಾರೆ. ಈ ಹೇಳಿಕೆಗಳನ್ನು ನಾವು [...] ತೆಗೆದುಕೊಂಡರೆ ಅದರ ಹಿಂದಿನ ರಾಜಕೀ[...] ಬಿಕ್ಕಟ್ಟನ್ನು, ಗೋವಾದ ಬಿಜೆಪಿಗರ ಗೋ ರಾಜಕಾ[...] ಅರ್ಥಮಾಡಿಕೊಂಡಂತಾಗದು. ಮುಖ್ಯಮ[...] ಒಪ್ಪಿಕೊಳ್ಳುವಂತೆ ಗೋವಾದಲ್ಲಿ ಶೇ. 40 ರಷ್ಟಿರು[...] ಮತ್ತು ಮುಸ್ಲಿಮರ ಪ್ರಮುಖ ಆಹಾರ ಗೋ[...] (ಅಲ್ಲಿನ ಕೆಲವು ಹಿಂದೂಗಳೂ ಗೋಮಾಂಸ ಸೇ[...] ಎನ್ನುವುದನ್ನು ಅಲ್ಲಗಳೆಯುವಂತಿಲ್ಲ). ಅದಕ್ಕಾ[...] ಓಟ್ ಬ್ಯಾಂಕಿನ ಮೇಲೆ ಕಣ್ಣಿಟ್ಟ ಬಿಜೆಪಿ ಗೋ ಪ್ರ[...] ಬದಿಗಿಟ್ಟಿತು. ಇದರ ಪರಿಣಾಮವಾಗಿ 1994[...] ಶಾಸಕರನ್ನು ಮಾತ್ರ ಹೊಂದಿದ್ದ ಬಿಜೆಪಿ ಇಂ[...] ಶಾಸಕರನ್ನು ಹೊಂದಿದೆ. ಸತತವಾಗಿ ಎರಡನೇ[...] ಅಧಿಕಾರವನ್ನು ಹಿಡಿದಿದೆ. ಹೀಗಾಗಿ ಗೋವಾದ[...] ಗೋಹತ್ಯೆ ನಿಷೇಧ ಕಾಯ್ದೆಯನ್ನು ಜಾರಿ ಮಾಡ[...] ಕೇವಲ ಗೋರಾಜಕಾರಣ ಮಾಡುತ್ತದೆ.

ಅಷ್ಟೇ ಏಕೆ ಕಳೆದ ಚುನಾವಣೆಯಲ್ಲಿ [...] ನಿಷೇಧ ಮಸೂದೆ ಜಾರಿ ಮಾಡುವುದಾ[...] ಪ್ರಣಾಳಿಕೆಯಲ್ಲಿ ಪ್ರಕಟಿಸಿದ್ದ ಬಿಜೆಪಿ ಇಂದು[...] ರಾಜ್ಯಾಧ್ಯಕ್ಷ ಅಮಿತ್ ಶಾರಿಂದ ಹೇಳಿಸಿರುವು[...] ಏನು? "ದೇಶಾದ್ಯಂತ ಗೋಹತ್ಯೆ ನಿಷೇಧ [...] ಯಾವುದೇ ಪ್ರಸ್ತಾಪ ಕೇಂದ್ರ ಸರ್ಕಾರಕ್ಕಿಲ್ಲ". [...] ಹೀಗೂ ಅರ್ಥಮಾಡಿಕೊಳ್ಳಬಹುದು "ನಮಗ[...] ದಲಿತರು ಮತ್ತು ಮುಸ್ಲಿಮರ ವಿರುದ್ಧ ಓಟು ಒಂದ[...] ಕೊಳ್ಳಬೇಕೋ ಅಲ್ಲಿ ಗೋರಾಜಕಾರಣವನ್ನು ಬಹಿ[...] ಮಾಡುತ್ತೀವಿ. ಎಲ್ಲೆಲ್ಲಿ ದಲಿತರು ಮತ್ತು ವ[...] ಓಟುಗಳೂ ಬೇಕೋ ಅಲ್ಲಿ ಗೋ ರಾಜಕಾ[...] ಬಹಿರಂಗವಾಗಿ ಕೈಬಿಡುತ್ತೀವಿ" ಇದಕ್ಕಿಂತ [...] ಅಮಿತ್ ಶಾರವರ ಮಾತನ್ನು ಅರ್ಥೈಸಬಹುದ[...] ಬಿಜೆಪಿಯ ಗೋರಾಜಕಾರಣ ಮೇಲಿನ ವಿ[...] ಇನ್ನಿಲ್ಲದಷ್ಟು ಸಾಕ್ಷಿಯನ್ನು ದಾದ್ರಿ ಘಟನೆಯ[...] ನೀಡಿದೆ. ಆ ಇಡೀ ಸಾಕ್ಷಗಳು ಬಿಜೆಪಿಗರಿಗ[...] ಬಲಪಂಥೀಯರಿಗೆ ಗೋವಿನ ಮೇಲಿರುವುದ[...] ಪ್ರೇಮವಲ್ಲದೆ ಬೇರೇನೂ ಇಲ್ಲವೆಂದು ಸಾಬೀತ[...] ಅವರಿಗೆ ದಲಿತರನ್ನು, ಮುಸಲ್ಮಾನರನ್ನು ಕೊಲ್ಲಲು[...] ಅಧಿಕಾರ ಉಳಿಸಿಕೊಳ್ಳಲು ಮಾತ್ರ ಗೋವು [...]

ತೆಂಗಿನಕಾಯಿ ಕೀಳುವ ಜಯಣ್ಣ

ಜಯಣ್ಣನಿಗೆ ಸುಮಾರು ಐವತ್ತು ವರ್ಷ ವಯಸ್ಸು ಇರಬಹುದು; ಕಟ್ಟು ಮಸ್ತಾದ ಆಳು. ಶಿರಾ ತಾಲೂಕು ಬುಕ್ಕಾಪಟ್ಟಣದ ಕಡೆ ತನ್ನೂರು ಎನ್ನುತ್ತಾನೆ. ಎರಡು ತಿಂಗಳಿಗೊಮ್ಮೆ ನಮ್ಮೂರಿಗೆ (ಶಿರಾ ತಾಲೂಕು ಕರೇಜವನಹಳ್ಳಿ) ಬರುತ್ತಾನೆ. ಒಂದು ವಾರ ಕ್ಯಾಂಪ್ ಮಾಡಿ ಈ ಸುತ್ತಣ ತೋಟಗಳಲ್ಲಿ ತೆಂಗಿನ ಕಾಯಿ ಕೀಳುತ್ತಾನೆ. ತೆಂಗಿನಕಾಯಿ ಕೀಳುವ ಎರಡು ವಿಧಾನಗಳು; ಮರಹತ್ತಿ ಕೀಳುವುದು, ರೋಟಿಯಲ್ಲಿ ಕೀಳುವುದು. ಅದೊಂದು ಕಲೆ. ಜಯಣ್ಣ ರೋಟಿಯಿಂದ ಕೀಳುತ್ತಾನೆ. ಯಾವ ತೋಟದ ಮರ ಎಷ್ಟು ಅಡಿ ಎತ್ತರ ಇವೆ ಎಂಬುದನ್ನು ಮೊದಲೇ ಅಂದಾಜು ಮಾಡಿ ನೋಡಿ ಅಷ್ಟು ಅಡಿ ಎತ್ತರ ಇರುವ ರೋಟಿ ತರುತ್ತಾನೆ. ಅದಕ್ಕೆ ಹರಿತವಾದ 'ರೋಟಿ ಕುಡಗೋಲು' ಕಟ್ಟಿರುತ್ತಾನೆ. ಅದನ್ನು ಮರದ ಬುಡಕ್ಕೆ ಆತುಕೊಂಡು ಮೇಲೆ ಎತ್ತುತ್ತಾನೆ. ಹಾಗೆ ಎತ್ತಿದ ರೋಟಿಯಿಂದ ಹಣ್ಣಾದ ಎಂದರೆ ಬಲಿತಿರುವ, ಸಿಲುಕು ನೀರಿರುವ ಗೊನೆಯನ್ನು ಚರಕ್ ಎಂದು ಕೊಯ್ಯುತ್ತಾನೆ. ಈತನ ಕಣ್ಣು ತುಂಬಾ ಸೂಕ್ಷ್ಮ. ತೆಂಗಿನಗರಿ ಮಟ್ಟೆ ಸಂದಿನಲ್ಲಿ ಸಿಕ್ಕಿಕೊಂಡ ಕಾಯಿ ಕೆಲವೊಮ್ಮೆ ತಪ್ಪಿಸಿಕೊಳ್ಳುತ್ತವೆ. ಅವುಗಳನ್ನು ಇವನ ಸರ್ಚ್‌ಲೈಟ್ ಕಣ್ಣುಗಳು ಹುಡುಕಿ ಕುಡುಗೋಲು ಮೊತಿಯಿಂದ ಎಳೆದು ಕೆಳಕ್ಕೆ ಬೀಳಿಸುತ್ತವೆ. (ಮಲೇಶಿಯಾದಲ್ಲಿ ಕೋತಿಗೆ ತರಬೇತು ನೀಡಿ ಕಾಯಿ ಕೀಳಿಸುತ್ತಾರಂತೆ.)

ಜಯಣ್ಣ ಹೀಗೆ ದಿನಕ್ಕೆ 100 ರಿಂದ 200 ಮರಗಳ ಕಾಯಿ ಕೆಡವುತ್ತಾನೆ. ಒಂದೊಂದು ಮರದಲ್ಲಿ 2-3 ಗೊನೆ



ಇರುತ್ತವೆ. ಅವುಗಳಲ್ಲಿ ಸರಾಸರಿ 5 ರಿಂದ 20ರ ವರೆಗೂ ಕಾಯಿ ಇದ್ದಿರಬಹುದು. ನಮ್ಮ ಸುತ್ತಿನ, ಕಳ್ಳಂಬೆಳ್ಳ ಕೆರೆ ಆಸರೆಯ ತೋಟಗಳ ಕಾಯಿ ಸಿಪ್ಪೆ ಸುಲಿದರೆ ಅರ್ಧ ಕೆ.ಜಿ. ತೂಕ ಬರಬಹುದು. ಈತನು ಕೈಚಳಕದಷ್ಟೇ ಮಾತಿನ ಚಳಕವೂ ಮೋಹಕ. ಸುಮಾರು ನೂರು ಮರ ಇರುವ ತೋಟ ಒಂದಕ್ಕೆ ಈಗ 650 ರೂಪಾಯಿ ಫಿಕ್ಸ್ ಮಾಡಿದ್ದಾನೆ. ಅದರಲ್ಲಿ ಒಂದು ಚಿಕ್ಕಾಸು ಬಿಡಲಾರ. "ನಿಮ್ಮ ಮಾವನೋ ಭಾವನೋ ಅಥವಾ ತಾತನೋ ಹೇಳಿದ್ದರಿಂದ ಬಂದೆ ಸಾರ್. ಇಗೋ ನನಗಿಂತ ಕಡಿಮೆ ರೇಟಿಗೆ ಕೀಳುವವರು ಸಿಕ್ಕರೆ ಅವರಿಂದಲೇ ಕೀಳಿಸಿಕೊಳ್ಳಿ. ಇನ್ನು ಮೇಲೆ ನಾನು ಇತ್ತ ಬರುವುದಿಲ್ಲ" ಎಂದು ಖಡಾಖಂಡಿತ ಹೇಳಿಬಿಡುತ್ತಾನೆ. 650 ರೂಪಾಯಿ ಅಲ್ಲದೆ ಕೊಬ್ಬರಿಗೆ ಬರುವ ದೊಡ್ಡ ಸೈಜಿನ 12 ಕಾಯಿಗಳನ್ನು ಗುದಿಕಟ್ಟಿ ತೆಗೆದುಕೊಂಡು ಹೋಗುತ್ತಾನೆ. ಹೀಗೆ ದಿನಕ್ಕೆ ಕೂಲಿ ಮತ್ತು ಕಾಯಿ ಬೆಲೆ ಸೇರಿ 2000 ವರೆಗೆ ಗಳಿಸುತ್ತಾನೆ. ಒಮ್ಮೊಮ್ಮೆ ಒಂದು ಸಾವಿರ ಆಗಬಹುದು. ಒಟ್ಟಾರೆ ನಮ್ಮೂರ ಪ್ರತಿ ಎರಡು ತಿಂಗಳಿನ ಒಂದು[...] ಕ್ಯಾಂಪಿಗೆ ಕನಿಷ್ಠ ಐದು ಸಾವಿರ ಗರಿಷ್ಠ ಹತ್ತ[...] ದುಡಿಯುತ್ತಾನೆ. ಯಾರೇ ಆಗಲಿ ದುಡಿದುಣ್ಣು[...] ಕೈ ತುಂಬ ಹಣ ಬಾಯಿ ತುಂಬ ಅನ್ನ ಗ್ಯಾರಂ[...]

ಜಯಣ್ಣ ನಮ್ಮ ತೋಟದ ಕಾಯಿ[...] ಲಾಗಾಯ್ತಿನಿಂದ ಕೀಳುತ್ತಿದ್ದನಾದರೂ ನಾನು [...] ಮಾತ್ರ ಈ ಸಲ (30-10-2015). ಈವರೆಗೆ[...] ಫೋನಿನಲ್ಲೇ ನಮ್ಮ ವ್ಯವಹಾರ ಇತ್ತು. ಈ ಸ[...] ಬೋರ್‌ವೆಲ್ ರಿಪೇರಿಗಾಗಿ ತೋಟದಲ್ಲೇ ಇದ್ದೆನಾ[...] ಆತನೂ ಅಲ್ಲಿ ಕಾಯಿ ಕೀಳುತ್ತಿದ್ದನಾಗಿ ಭೇಟಿ[...] ಕಾಯಿ ಕೀಳುವ ಕೆಲಸ ಮಾಡುತ್ತಲೆ ಆತ [...] ಎಳೆಯುತ್ತಾನೆ. ಅವನ ಕಥೆ, ವ್ಯಥೆ ಬಿಚ್ಚುತ್ತಾನೆ. [...] ಸಾರ್ ಕಳೆದ 20 ವರ್ಷದಿಂದ ನಾನು ಈ[...] ಮಾಡುತ್ತಿದ್ದೇನೆ. ನನ್ನ ಬಳಿ ಒಂದು ಸಾ[...] ರೋಟಿಗಳಿವೆ. ಇವುಗಳನ್ನು ಹೋದ ಕಡೆಗೆಲ್ಲಾ[...] ಹೋಗುವುದಿಲ್ಲ, ನಿಮ್ಮೂರಿನ ಮರಗಳ ಎತ್ತ[...] ಎಂಬುದು ನನಗೆ ಅಂದಾಜಿದೆ. ಹಾಗಾಗಿ [...] ಅಡಿಯಿಂದ 50 ಅಡಿ ಉದ್ದದ ಹತ್ತಾರು ರೋ[...] ಮಾತ್ರ ಇದೇ ಊರಿನಲ್ಲಿ ಇಟ್ಟಿರುತ್ತೇವೆ. ನೆ[...] ಕೊರಟಗೆರೆವರೆಗೂ, ಅತ್ತ ಹಿರಿಯೂರಿನ ಕಡೆಗೂ[...] ಕೀಳುತ್ತೇನೆ. ನಾನು ಹೋದ ಊರಿನಲ್ಲಿಯೇ [...] ಆದಾದ ಮೇಲೆ ಇನ್ನೊಂದು ಊರು. ಹೀ[...] ಮೂರು ಎಕರೆ ಜಮೀನು ಮಾಡಿದೆ. ಈಗ[...] ತೆಂಗಿನಮರಗಳು ಮತ್ತು ಬಾಳೆ ಹಾಕಿಸಿದ್ದೇನೆ[...] ಫಸಲಿಗೆ ಬಂದಿದೆ. ಬಾಳೆ ಕೆ.ಜಿ.ಗೆ 20 ರಿಂದ [...] ಇದೆ. ತಿಂಗಳಿಗೆ 50 ಕೆ.ಜಿ.ಯಷ್ಟು ಮಾರುತ್ತೇ[...] ಕೆಲಸ ಮಾಡುತ್ತಾ ನನ್ನ ಇಬ್ಬರು ಹೆಣ್ಣು ಮಕ್ಕಳ[...]

ಕಳೆದ ಲೋಕಸಭಾ ಚುನಾವಣೆಯ ಬಿಜೆಪಿ ಪ್ರಧಾನಿ ಅಭ್ಯರ್ಥಿಯಾಗಿದ್ದ ನರೇಂದ್ರ ಮೋದಿಯವರು ನವೆಂಬರ್ 2013 ರಂದು ಝಾಂಡ್ಸಾದಲ್ಲಿ ಆವೇಶದಿಂದ ಆಡಿದ ಮಾತುಗಳಿವು. 'ಲಾಲ್ ಬಹಾದ್ದೂರ್ ಶಾಸ್ತ್ರಿ ಹಸಿರು ಕ್ರಾಂತಿಯ ಕುರಿತು ಮಾತಾಡಿದ್ದಾರೆ. ಯುಪಿಎ ಸರ್ಕಾರ ಗೋಮಾಂಸ ರಫ್ತು ಪ್ರಾಯೋಜಿಸುವ ಮೂಲಕ 'ಗುಲಾಬಿ ಕ್ರಾಂತಿ'ಯನ್ನು ಪ್ರೋತ್ಸಾಹಿಸಿದೆ. ಕಾಂಗ್ರೆಸ್ ಸರ್ಕಾರ ಕಸಾಯಿಖಾನೆಗಳಿಗೆ ಸಬ್ಸಿಡಿ ನೀಡಿ ದನಗಳ ಹಾಗೂ ಕರುಗಳನ್ನು ಅಪಾರ ಪ್ರಮಾಣದಲ್ಲಿ ಹತ್ಯೆ ಮಾಡುತ್ತಿದೆ. ನಾವು (ಬಿಜೆಪಿ) ಗೋವಂಶದ ರಕ್ಷಣೆಗಾಗಿ ಅತ್ಯಗತ್ಯ ಕ್ರಮ ಕೈಗೊಳ್ಳುತ್ತೇವೆ''. ಆದರೆ ಈಗ ಪ್ರಧಾನಿ ಮೋದಿಯವರ ಸರ್ಕಾರ ಮಾಡಿರುವುದಾದರೂ ಏನು? 2013 ರಲ್ಲಿ ಯುಪಿಎ ಸರ್ಕಾರ 17 ದಶಲಕ್ಷ ಟನ್ ಜಾನುವಾರು ಮಾಂಸ ರಫ್ತು ಮಾಡಿ ಬ್ರೆಜಿಲ್ ನಂತರದ ಸ್ಥಾನವನ್ನು ಪಡೆದಿತ್ತು. 2015ರಲ್ಲಿ ನರೇಂದ್ರ ಮೋದಿಯವರ ಸರ್ಕಾರ 24 ದಶಲಕ್ಷ ಟನ್‌ನಷ್ಟು ಜಾನುವಾರು ಮಾಂಸವನ್ನು ರಫ್ತು ಮಾಡಿ ಬ್ರೆಜಿಲ್ಲನ್ನು ಹಿಂದಿಕ್ಕಿ ವಿಶ್ವದಲ್ಲಿಯೇ ಪ್ರಥಮ ಸ್ಥಾನವನ್ನು ಗಳಿಸಿದೆ. ಗುಲಾಬಿ ಕ್ರಾಂತಿಯನ್ನು ಮುಂದುವರೆಸುತ್ತಿರುವವರು ಯಾರು? ಗೋಪ್ರೇಮಿಗಳು ಮೋದಿಯವರ ವಿರುದ್ಧ ಹೋರಾಡುತ್ತಿಲ್ಲವೇಕೆ?

ಸಿದ್ದರಾಮಯ್ಯನವರು ಗೋಮಾಂಸ ತಿನ್ನುತ್ತೇನೆಂದರೆ ಬೊಬ್ಬೆ ಹೊಡೆಯುವ ಈ ಗೋಪ್ರೇಮಿಗಳು ಅವರದೇ ಸರ್ಕಾರವಿರುವ ಕೆಲವು ರಾಜ್ಯಗಳಲ್ಲಿ ಗೋಹತ್ಯೆ ನಿಷೇಧಿಸಿಲ್ಲವೇಕೆ? ಕೇಂದ್ರ ಸಚಿವ ಕಿರೆನ್ ರಿಜ್ಜು "ನಾನು ಗೋಮಾಂಸ ತಿನ್ನುತ್ತೇನೆ, ಯಾರಾದರೂ ನಿಲ್ಲಿಸುತ್ತೀರಾ?'' ಎಂದು ಪ್ರಶ್ನಿಸಿದರಲ್ಲ ಬಿಜೆಪಿಯವರು ಅವರ ವಿರುದ್ಧ ನಾಟಕ್ಕಿಳಿಯಲಿಲ್ಲವೇಕೆ?

ಇದರಿಂದ ತಿಳಿಯುವುದಿಷ್ಟೆ ಗೋವು ಇವರಿಗೆ ಮಾತೆಯಲ್ಲ. ಕೇವಲ ಓಟ್ ಬ್ಯಾಂಕ್ ಮತ್ತು ಕೋಮುವಾದವನ್ನು ಸೃಷ್ಟಿಸಲು ಬೇಕಿರುವ ಒಂದು ಆಯುಧ. ಬೇಕಾದಾಗ ಆ ಆಯುಧವನ್ನು ಸಾಣೆ ಹಿಡಿಯುತ್ತಾರೆ. ಬೇಡವಾದಾಗ ತುಕ್ಕು ಹಿಡಿಸುತ್ತಾರೆ. ಆ ಕಾರಣಕ್ಕಾಗಿಯೇ ಗೋಹತ್ಯೆ ನಿಷೇಧ ಎಂಬ ಗುಮ್ಮ ಗೋವಾ, ಈಶಾನ್ಯಭಾರತದ ರಾಜ್ಯಗಳಲ್ಲಿ ತೆಪ್ಪಗಿದೆ. ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಸ್ತಾನ, ಹರಿಯಾಣ ಮತ್ತು ದೆಹಲಿಯಲ್ಲಿ ರಕ್ತಕಾರುತ್ತಿದೆ. ಇವರ ನಿರ್ದೇಶನದ ನಾಟಕದಲ್ಲಿ ಪಾತ್ರಧಾರಿಗಳಾಗಿರುವ ಅಮಾಯಕ ಜನತೆ ಬ್ರಾತೃತ್ವವನ್ನು ಕದಡಿ ಭಾರತದ ಮಾನವನ್ನೇ ವಿಶ್ವದಾದ್ಯಂತ ಹರಾಜಾಕಲು ಹೊರಟಿದ್ದಾರೆ. ಈ ಅಮಾಯಕ ಜನತೆಗೆ ಗೋರಕ್ಷಕರ ನಿಜಬಣ್ಣವನ್ನು ಬಯಲು ಮಾಡುವ ಹೊಣೆ ನಮ್ಮೆಲ್ಲರ ಮೇಲಿದೆ. ಬಿಹಾರದ ಚುನಾವಣ ಫಲಿತಾಂಶ ಈ ಬದಲಾವಣೆಯ ಆರಂಭವಾಗಿದ್ದು ಅದನ್ನು ಮುಂದುವರೆಸುವ ಕೆಲಸ ಜಾತ್ಯತೀತ ಮನಸ್ಥಿತಿಯುಳ್ಳವರ ಜವಾಬ್ದಾರಿಯಾಗಿದೆ. ಇಲ್ಲವಾದರೆ ಇನ್ನು ಕೆಲವೇ ದಿನಗಳಲ್ಲಿ ಗೋರಾಜಕಾರಣದ ಹೆಸರಿನಲ್ಲಿ ಮತ್ತೊಂದು ರಾಜಕಾರಣ ಆರಂಭಿಸಿ ಅಮಾಯಕರಿಗೆ ಮಂಕುಬೂದಿ ಎರಚುತ್ತಾರೆ.


■ ವಿಕಾಸ ಆರ್ ಮೌರ್ಯ

...ದೆ. ಈ ಕಾಲದಲ್ಲಿ ಮದುವೆ ಎಂದರೆ ಸಾಮಾನ್ಯವೇ? ಕನಿಷ್ಠ ಒಂದು ಲಕ್ಷ ಇಲ್ಲದೆ ಆದೀತಾ? ಮೈ ಬಗ್ಗಿಸಿ ದುಡಿದರೆ ದೇವರು ಕೊಡುತ್ತಾನೆ. ಕೈ ಬಿಡಲ್ಲ ...ವೇ ಸಾರ್'' ಎಂದು ಅಭಿಮಾನದಿಂದ ಹೇಳಿಕೊಳ್ಳುತ್ತಾನೆ.

...ಯಣ್ಣಾ ಹತ್ತಾರು ಊರಿನ ನೀರು ಕುಡಿದವನು. ...ಊರಿನ ಜನರ ಜಾತಕವನ್ನು ಚೆನ್ನಾಗಿ ಬಲ್ಲವನು. ...ಕುಡುಕರಾಗಿ ಹಾಳಾದರು ಸಾರ್. ಸಂಜೆ ಹೊತ್ತು ...ರಿನ ಅಂಗಡಿ ಬಳಿ ಇದ್ದರೆ ಈ ಒಕ್ಕಲು ಮಕ್ಕಳು ...ಹಿಡಿದು ಪ್ಯಾಕೆಟ್ಟಿಗೆ ದುಡ್ಡು ಕೇಳುತ್ತಾರೆ. ಅವರ ...ಹೇಳತೀರದು. ಕೂಲಿ ಮಾಡುವವನಿರಲಿ, ...ರಲಿ ಸಂಜೆ ಪ್ಯಾಕೆಟ್ ಇಲ್ಲದೆ ಇರಲಾರ. ...ಹಾಳಾದದ್ದೇ ಇದರಿಂದ ಅಲ್ವಾ ಸಾರ್? ಒಕ್ಕಲು ...ಕುಡಿಯುತ್ತಾರಲ್ಲ ಸಾರ್? ಇವರಿಗೇನು ಬಂತು ...'' ಎಂದು ಬೇಸರ ಪಟ್ಟುಕೊಳ್ಳುತ್ತಾ "ಈಗ ...ಲ್ಲಿ ಹೆಂಡದ ಅಂಗಡಿಗಳಿವೆ. ಮಾನ-ಮರ್ಯಾದೆಗೆ ...ವುದೇ ಇಲ್ಲ, ಯಾವ ಊರಿಗೆ ಹೋದರೂ ಇದೇ ...'' ಎನ್ನುತ್ತಾ ತನ್ನ ರೋಟ, 12 ತಿಂಗಳಾಯಿಗುದಿ ...ದು "ಇನ್ನು ಎರಡು ತಿಂಗಳು (ಜನವರಿ 2016) ...ಸಾರ್'' ಎಂದು ಹೇಳಿಹೊರಟ. ಈತನಿಗೆ ...ವರಿ ಬೆಳಗ್ಗೆ ತಿಂಡಿ, ಮಧ್ಯಾಹ್ನ ಊಟ ಕೊಡಬೇಕು. ...ಡಿ ಪಗ್ಗರೆ ಚಟ ಇಲ್ಲ, ದುಡಿಮೆಯಲ್ಲಿ ...ಕತೆ. ಪ್ರಾಮಾಣಿಕತೆ ಇದ್ದರೆ ನೆಮ್ಮದಿಯ ಬದುಕು ...ಬಹುದು ಎಂಬುದಕ್ಕೆ ಜಯಣ್ಣ ಒಂದು ...ನೆ. (ಅವನ ಮೊಬೈಲ್ ನಂಬರ್ ...055121).

■ ಹೊ. ಶಿವರಾಮಯ್ಯ

ಮುಜುಗರ ತಪ್ಪಿಸುವ ಯತ್ನ



ಇದನ್ನು ಕಾಲದ ಮಹಿಮೆ ಎನ್ನಿ ಇಲ್ಲ ಅವಕಾಶವಾದ ಎನ್ನಿ. ವಿಷಯ ಏನೆಂದರೆ ಇವತ್ತು ಸಂಘ ಪರಿವಾರದ ಮುಖಂಡರುಗಳೆಲ್ಲ ಯಾವ ಸರ್ದಾರ್ ವಲ್ಲಭಭಾಯಿ ಪಟೇಲ್ ಹಿಂದೊಮ್ಮೆ ತಮ್ಮ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನಿಷೇಧಿಸಿದ್ದರೂ ಅದೇ ಪಟೇಲರ ಗುಣಗಾನ ಮಾಡತೊಡಗಿದ್ದಾರೆ. ಗುಜರಾತಿನಲ್ಲಿ ಪಟೇಲರ ಬೃಹದಾಕಾರದ ಉಕ್ಕಿನ ಪ್ರತಿಮೆಯೊಂದನ್ನು ಸ್ಥಾಪಿಸಲು ಹೊರಟಿದ್ದಾರೆ. ಅದೇ ರೀತಿ ಗಾಂಧಿ, ಅಂಬೇಡ್ಕರ್, ಭಗತ್ ಸಿಂಗ್ ಎಲ್ಲಾ ಇದ್ದಕ್ಕಿದ್ದಂತೆ ಆದರ್ಶಪ್ರಾಯರಾಗಿಬಿಟ್ಟಿದ್ದಾರೆ! ನೆನಪಿದೆಯೇ 2014ರ ಚುನಾವಣೆಗಳ ಸಂದರ್ಭದಲ್ಲಿ ಉಕ್ಕಿನ ಮನುಷ್ಯ ಪಟೇಲರನ್ನು ಆಗಾಗ ಉಲ್ಲೇಖಿಸುತ್ತಿದ್ದ ಮೋದಿ, ದೇಶದ ಮೂಲೆಮೂಲೆಗಳಿಂದ ಉಕ್ಕು ಸಂಗ್ರಹಿಸಿ 'ಮೇಕ್ ಇನ್ ಇಂಡಿಯ' ಯೋಜನೆಯಡಿ ಪಟೇಲರ ದೊಡ್ಡ ಪ್ರತಿಮೆಯೊಂದನ್ನು ನಿರ್ಮಿಸುವ ಬಗ್ಗೆ ಭಾರಿ ಬಡಾಯಿ ಕೊಚ್ಚಿದ್ದ. ಆದರೆ 'ಮೇಕ್ ಇನ್ ಇಂಡಿಯ' ಈಗ 'ಮೇಕ್ ಇನ್ ಚೀನಾ' ಆಗುವ ಎಲ್ಲಾ ಲಕ್ಷಣಗಳು ತೋರಿಬರುತ್ತಿವೆ! ಏಕೆಂದರೆ ಪ್ರತಿಮೆಯ ನಿರ್ಮಾಣ ಕಾರ್ಯವನ್ನು ಚೀನಾ ದೇಶದ ಕಂಪೆನಿಯೊಂದಕ್ಕೆ ಹೊರ ಗುತ್ತಿಗೆ ನೀಡಲಾಗಿದೆ! ಅರ್ಥವಾಯಿತಲ್ಲವೇ ಇವರ 'ಮೇಕ್ ಇನ್ ಇಂಡಿಯ' ಮೊದಲಾದ ಘೋಷಣೆಗಳು ಮತ್ತು ಸರ್ದಾರ್ ಪಟೇಲ್ ಪ್ರೇಮ ಎಷ್ಟೊಂದು ಪೊಳ್ಳೆಂದು! ಬನ್ನಿ, ಆರೆಸ್ಸೆಸ್ ಮತ್ತು ಪಟೇಲರ ನಿಲುವುಗಳ ಬಗ್ಗೆ ಇನ್ನಷ್ಟು ವಿವರಗಳನ್ನು ತಿಳಿಯೋಣ.

ಆರೆಸ್ಸೆಸ್ ಮೇಲಿನ ನಿಷೇಧಾಜ್ಞೆ

ಗಾಂಧೀಜಿಯವರು 1948ರ ಜನವರಿ 30ರಂದು ಹಂತಕ ಗೋಡ್ಸೆಯ ಗುಂಡೇಟಿಗೆ ಬಲಿಯಾದ ಸಂದರ್ಭದಲ್ಲಿ ಭಾರತ ಸರಕಾರ ಆದೇಶವೊಂದನ್ನು ಹೊರಡಿಸಿ ಫೆಬ್ರವರಿ 4ರಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು (ಆರೆಸ್ಸೆಸ್) ನಿಷೇಧಿಸಿತು. ಆ ನಿರ್ಧಾರವನ್ನು ತೆಗೆದುಕೊಂಡವರು ಇನ್ಯಾರೂ ಅಲ್ಲ, ಅಂದು ನೆಹರು ಮಂತ್ರಿಮಂಡಲದಲ್ಲಿ ಗೃಹಸಚಿವರಾಗಿದ್ದ ಸರ್ದಾರ್ ಪಟೇಲರು. ಸರಕಾರ ಹೊರಡಿಸಿದ್ದ ಪ್ರಕಟಣೆ ಹೀಗಿದೆ: "ಭಾರತ ಸರಕಾರ ತನ್ನ ಫೆಬ್ರವರಿ 2, 1948ರ ಠರಾವಿನಲ್ಲಿ ರಾಷ್ಟ್ರದ ಸ್ವಾತಂತ್ರ್ಯವನ್ನು ಗಂಡಾಂತರಕ್ಕೀಡುಮಾಡಿ ಅದರ ಒಳ್ಳೆಯ ಹೆಸರಿಗೆ ಕಳಂಕ ತರುವ ರೀತಿಯಲ್ಲಿ ಈ ನಾಡಿನಲ್ಲಿ ಕಾರ್ಯಾಚರಿಸುತ್ತಿರುವ ದ್ವೇಷ ಹಾಗೂ ಹಿಂಸೆಯ ಶಕ್ತಿಗಳನ್ನು ಬೇರುಸಮೇತ ಕಿತ್ತುಹಾಕುವ ಸಂಕಲ್ಪವನ್ನು ಘೋಷಿಸಿದೆ. ಈ ಕಾರ್ಯನೀತಿಗೆ ಅನುಸಾರವಾಗಿ ಭಾರತ ಸರಕಾರ ಆರೆಸ್ಸೆಸ್‌ನ್ನು ಕಾನೂನುಬಾಹಿರವೆಂದು ಘೋಷಿಸಲು ನಿರ್ಧರಿಸಿದೆ." ಆರೆಸ್ಸೆಸ್ ಮೇಲೆ ನಿಷೇಧ ಹೇರಬೇಕಾಗಿ ಬಂದ ಸಂದರ್ಭ, ಹಿನ್ನೆಲೆ ಮತ್ತು ಅನಿವಾರ್ಯತೆಗಳನ್ನು ವಿವರಿಸುತ್ತ ಪ್ರಕಟಣೆ ಹೇಳುತ್ತದೆ: "ಸಂಘದ ಸದಸ್ಯರು ಅನಪೇಕ್ಷಣೀಯ ಮತ್ತು ಅಪಾಯಕಾರಿ ಚಟುವಟಿಕೆಗಳನ್ನು ಕೂಡ ನಡೆಸುತ್ತಿದ್ದಾರೆ. ಆರೆಸ್ಸೆಸ್ ಸದಸ್ಯರು ಕಿಚ್ಚಿಡುವಿಕೆ, ದರೋಡೆ, ಡಕಾಯಿತಿ ಮತ್ತು ಕೊಲೆಗಳನ್ನೊಳಗೊಂಡ ಹಿಂಸಾಚಾರದ ಕೃತ್ಯಗಳನ್ನು ವೈಯಕ್ತಿಕವಾಗಿ ದೇಶದ ವಿವಿಧೆಡೆಗಳಲ್ಲಿ ನಡೆಸಿದ್ದಾರೆ ಮತ್ತು ಅಕ್ರಮವಾಗಿ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಶೇಖರಿಸಿದ್ದಾರೆ ಎಂದು ಕಂಡುಕೊಳ್ಳಲಾಗಿದೆ. ಜನರು ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು, ಬಂದೂಕುಗಳನ್ನು ಸಂಗ್ರಹಿಸಬೇಕು, ಸರಕಾರದ ವಿರುದ್ಧ ಅತೃಪ್ತಿ ಸೃಷ್ಟಿಸಬೇಕು ಮತ್ತು ಪೊಲೀಸ್ ಹಾಗೂ ಸೇನೆಗಳನ್ನು ದುಷ್ಕೃತ್ಯಗಳಲ್ಲಿ ತೊಡಗುವಂತೆ ಪ್ರೇರೇಪಿಸಬೇಕು ಎನ್ನುವ ಕರಪತ್ರಗಳನ್ನು ಅವರು ವಿತರಿಸುತ್ತಿರುವುದಾಗಿ ಕಂಡುಬಂದಿದೆ" (ಎಂ.ಎಸ್.ಗೋಲ್ವಾಲ್ಕರ್ ವಿರಚಿತ ಶ್ರೀ ಗುರೂಜಿ ಸಮಗ್ರ ದರ್ಶನ್, ಸಂಪುಟ 2, ಪುಟ 9-10).

ನಂತರದ ದಿನಗಳಲ್ಲಿ ಸರಕಾರ ಮತ್ತು ಆರೆಸ್ಸೆಸ್ ನಡುವೆ ಹಲವು ಸುತ್ತಿನ ಮಾತುಕತೆಗಳು ನಡೆದುವು. ಕೊನೆಗೆ ಆರೆಸ್ಸೆಸ್ ವತಿಯಿಂದ ಒಂದು ಲಿಖಿತ ವಾಗ್ದಾನ ಪಡೆದುಕೊಂಡು ನಿಷೇಧವನ್ನು ಹಿಂತೆಗೆದುಕೊಳ್ಳಬೇಕೆಂಬ ತೀರ್ಮಾನಕ್ಕೆ ಬರಲಾಯಿತು. ಆ ವಾಗ್ದಾನದ ಮುಖ್ಯಾಂಶಗಳು ಹೀಗಿವೆ: ಆರೆಸ್ಸೆಸ್ ಸಂಸ್ಥೆ ಒಂದು ಸಂವಿಧಾನವನ್ನು ರಚಿಸಿಕೊಳ್ಳಬೇಕು. ಅದರಲ್ಲಿ ತಾವು "ರಾಜಕೀಯ" ಚಟುವಟಿಕೆಗಳಲ್ಲಿ ತೊಡಗುವುದಿಲ್ಲ ಮತ್ತು ಕೇವಲ "ಸಾಂಸ್ಕೃತಿಕ" ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವೆವು ಎಂದು ಸ್ಪಷ್ಟವಾಗಿ ನಮೂದಿಸಬೇಕು.

ಆರೆಸ್ಸೆಸ್ ಮತ್ತು ಸ್ವಾತಂತ್ರ್ಯ ಹೋರಾಟ

ಸತ್ಯ ಏನೆಂದರೆ ಆರೆಸ್ಸೆಸ್ ಮತ್ತದರ ಸಂಘ ಪರಿವಾರ ಎಂದೂ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿರಲಿಲ್ಲ. ಅದರ ಒಬ್ಬನೇ ಒಬ್ಬ ನಾಯಕನಾದರೂ ಗಾಂಧೀಜಿ ನೇತೃತ್ವದ ಸ್ವಾತಂತ್ರ್ಯ ಚಳವಳಿ ಜೊತೆ ಗುರುತಿಸಿಕೊಂಡಿರಲಿಲ್ಲ. ಬದಲು ಪ್ರಾಮಾಣಿಕ ದೇಶಪ್ರೇಮಿಗಳ ನೈತಿಕಬಲ ಕುಗ್ಗಿಸಿ ಸ್ವಾತಂತ್ರ್ಯ ಚಳವಳಿಯಿಂದ ವಿಮುಖರನ್ನಾಗಿಸಲು ಪ್ರಯತ್ನಿಸಿರುವುದೇ ಅದರ ಸಾಧನೆ! ಅದು ತನ್ನ ತೀವ್ರ ಪ್ರತ್ಯೇಕತಾವಾದಿ 'ಹಿಂದೂ ರಾಷ್ಟ್ರ' ಘೋಷಣೆ ಮುಖಾಂತರ ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟವನ್ನು ಒಡೆಯುವ ಪ್ರಯತ್ನದಲ್ಲಿ ಸಫಲವಾಗಿದೆ. ತಾಯ್ನಾಡಿನ ಮುಕ್ತಿಗಾಗಿ ತಮ್ಮ ಪ್ರಾಣಗಳನ್ನೆ ಸಮರ್ಪಿಸಿದ ಮಹಾನ್ ಹುತಾತ್ಮರಾದ ಭಗತ್ ಸಿಂಗ್ ಹಾಗೂ ಆತನ ಸಹಚರರನ್ನೂ ಗೇಲಿ ಮಾಡಿದೆ. ಗೋಲ್ವಾಲ್ಕರರ 'ಬಂಚ್ ಆಫ್ ಥಾಟ್ಸ್' ಪುಸ್ತಕದಲ್ಲಿ 'ಪ್ರಖ್ಯಾತ ಆದರೆ ಆದರ್ಶಣೀಯನಲ್ಲದ ಹುತಾತ್ಮ' ಎಂಬ ಅಧ್ಯಾಯವೊಂದಿದೆ. ಅದರ ಒಂದು ಕಡೆಯಲ್ಲಿ ಇಡೀ ಹುತಾತ್ಮ ಪರಂಪರೆಯನ್ನೇ ದೂಷಿಸಲಾಗಿದೆ: "ಹುತಾತ್ಮರಾಗುವ ಅಂತಹ ವ್ಯಕ್ತಿಗಳು ನಿಸ್ಸಂದೇಹವಾಗಿಯೂ ಶ್ರೇಷ್ಠ ನಾಯಕರು..... ನಾವು ಅವರ ಹುತಾತ್ಮತೆಯನ್ನು ಮನುಷ್ಯರು ಹಂಬಲಿಸುವ ಖ್ಯಾತಿಯ ಅತ್ಯುನ್ನತ ಬಿಂದು ಎಂಬುದಾಗಿ ಪರಿಗಣಿಸಿಲ್ಲ. ಏಕೆಂದರೆ ಅಂತಿಮವಾಗಿ ಅವರು ತಮ್ಮ ಆದರ್ಶಗಳನ್ನು ತಲುಪುವಲ್ಲಿ ವಿಫಲರಾದರು. ವೈಫಲ್ಯದ ಅರ್ಥ ಅವರಲ್ಲಿ ಯಾವುದಾದರೂ ಮಾರಣಾಂತಿಕ ದೋಷವಿದ್ದಿರಬೇಕು" (ಪುಟ 283). 1947ರ ಮಾರ್ಚ್‌ನಲ್ಲಿ ಬ್ರಿಟಿಷರು ಭಾರತ ಬಿಟ್ಟು ತೊಲಗಲು ನಿರ್ಧರಿಸಿದ್ದ ಸನ್ನಿವೇಶದಲ್ಲಿ ದೆಹಲಿಯಲ್ಲಿ ನಡೆದ ಆರೆಸ್ಸೆಸ್‌ನ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಗೋಲ್ವಾಲ್ಕರ್, "ಸಂಕುಚಿತ ದೃಷ್ಟಿಯ ನಾಯಕರು ಬ್ರಿಟಿಷರ ರಾಜಾಡಳಿತವನ್ನು ವಿರೋಧಿಸಲು ಯತ್ನಿಸುತ್ತಿದ್ದಾರೆ" ಎಂದು ಹೇಳಿದರು. (ಶ್ರೀ ಗುರೂಜಿ ಸಮಗ್ರ ದರ್ಶನ್, ಸಂಪುಟ 4, ಪುಟ 109-110)

ಆರೆಸ್ಸೆಸ್ ಮತ್ತು ರಾಷ್ಟ್ರಧ್ವಜ, ರಾಷ್ಟ್ರಸಂವಿಧಾನ

ಅಲ್ಪಸಂಖ್ಯಾತರೆಲ್ಲರೂ ಒಂದಿನಿತೂ ಚಂಚಲರಾಗದೆ, ಹಿಂಜರಿಯದೆ ದೇಶಕ್ಕೆ ನಿಷ್ಠರಾಗಿರಬೇಕೆಂದು ಒತ್ತಾಯಿಸುವ ಆರೆಸ್ಸೆಸ್ ಖುದ್ದು ತಾನೇ ಭಾರತದ ಸಂವಿಧಾನಕ್ಕೂ ರಾಷ್ಟ್ರಧ್ವಜಕ್ಕೂ ನಿಷ್ಠತೆ ತೋರಿಸುವುದಿಲ್ಲ. ಅದು ಆರಂಭದಿಂದಲೂ ಅದರದೇ ಭಗವಾಧ್ವಜಕ್ಕೆ ನಿಷ್ಠವಾಗಿದೆ. 1930ರಲ್ಲಿ ಆರೆಸ್ಸೆಸ್ ಸರಸಂಘಚಾಲಕನಾಗಿದ್ದ ಡಾ. ಹೆಡ್ಗೆವಾರ್ ಎಲ್ಲಾ ಆರೆಸ್ಸೆಸ್ ಶಾಖೆಗಳಿಗೆ ಕಳುಹಿಸಿದ್ದ ಸುತ್ತೋಲೆಯೊಂದರಲ್ಲಿ ಭಗವಾಧ್ವಜವನ್ನು ಆರಾಧಿಸುವಂತೆ ಆದೇಶಿಸಲಾಗಿದೆ. ಆರೆಸ್ಸೆಸ್ ಮುಂದೆ ಸ್ವತಂತ್ರ ಭಾರತ ಅಳವಡಿಸಿಕೊಂಡ ತ್ರಿವರ್ಣ ಧ್ವಜವನ್ನು ಗೌರವಿಸಲು ನಿರಾಕರಿಸಿದೆ. ರಾಷ್ಟ್ರಧ್ವಜದ ವಿಷಯವನ್ನು ಚರ್ಚಿಸುತ್ತ ಗೋಲ್ವಲ್ಕರ್ ತನ್ನ 'ಬಂಚ್ ಆಫ್ ಥಾಟ್ಸ್'ನಲ್ಲಿ ಹೀಗೆ ಹೇಳುತ್ತಾರೆ: "ನಮ್ಮ ನಾಯಕರು ನಮ್ಮ ದೇಶಕ್ಕಾಗಿ ಹೊಸದೊಂದು ಧ್ವಜವನ್ನು ಅಳವಡಿಸಿಕೊಂಡಿದ್ದಾರೆ..... ಅದು ಗೊತ್ತುಗುರಿಯಿಲ್ಲದಿರುವಿಕೆ ಮತ್ತು ಅನುಕರಣೆ....." (ಪುಟ 237-238). 2002ರ ಸಪ್ಟೆಂಬರ್‌ನಲ್ಲಿ ನಡೆದಂತಹ ಒಂದು ವಿಚಾರ ಸಂಕಿರಣದಲ್ಲಿ ಮಾತನಾಡಿದ ಆರೆಸ್ಸೆಸ್‌ನ ಪ್ರಚಾರ್ ಪ್ರಮುಖ್ ಮನಮೋಹನ ವೈದ್ಯ 'ತ್ರಿವರ್ಣಧ್ವಜ ಕೋಮುವಾದಿ, ಭಗವಾಧ್ವಜವೇ ರಾಷ್ಟ್ರಧ್ವಜ ಆಗಬೇಕು' ಎಂದು ಆಗ್ರಹಿಸಿದ್ದರು.

ಆರೆಸ್ಸೆಸ್‌ಗೆ ಭಾರತದ ಈ ಸಂವಿಧಾನ ಕೂಡ ಬೇಕಿರಲಿಲ್ಲ. ಅದಕ್ಕೆ ಬೇಕಾಗಿದ್ದದ್ದು 'ಮನುಸ್ಮೃತಿ' ಅಥವಾ ಮನುವಿನ ನೀತಿಸಂಹಿತೆಗಳು. ಗೋಲ್ವಾಲ್ಕರ್ ತನ್ನ 'ಬಂಚ್ ಆಫ್ ಥಾಟ್ಸ್'ನಲ್ಲಿ ಸಂವಿಧಾನವನ್ನು ಟೀಕಿಸುತ್ತ "ನಮ್ಮ ಸಂವಿಧಾನ ಕೂಡ ಕೇವಲ ಪಾಶ್ಚಾತ್ಯ ದೇಶಗಳ ವಿವಿಧ ಸಂವಿಧಾನಗಳಿಂದ ಆಯ್ದ ವಿವಿಧ ಕಲಮುಗಳನ್ನು ಕ್ಲಿಷ್ಟಕರವಾಗಿ, ಒಂದಕ್ಕೊಂದು ಸಂಬಂಧವಿಲ್ಲದಂತೆ ಜೋಡಿಸಿ ಮಾಡಿರುವುದಾಗಿದೆ. ಅದರಲ್ಲಿ ನಮ್ಮದೇ ಎನ್ನುವಂಥಾದ್ದು ಏನೇನೂ ಇಲ್ಲ....." ಎಂದು ಬರೆದಿದ್ದಾರೆ (ಪುಟ 238). ಆರೆಸ್ಸೆಸ್‌ನ ಪ್ರಕಟಣೆಯಾದ 'ಆರ್ಗನೈಸರ್' ಪತ್ರಿಕೆಯ ನವಂಬರ್ 30, 1949ರ ಸಂಪಾದಕೀಯ ಹೀಗೆ ಹೇಳುತ್ತದೆ: "ಆದರೆ ನಮ್ಮ ಸಂವಿಧಾನದಲ್ಲಿ ಪ್ರಾಚೀನ ಭಾರತದ ಅನನ್ಯ ಸಾಂವಿಧಾನಿಕ ವಿಕಾಸದ ಕುರಿತು ಹೇಳಲಾಗಿಲ್ಲ. ಮನುವಿನ ಕಾನೂನುಗಳು ಸ್ಪಾರ್ಟಾದ ಲೈಕರ್ಗಸ್ ಅಥವಾ ಪರ್ಷಿಯದ ಸೋಲೋನ್‌ಗಿಂತಲೂ ಬಹಳ ಹಿಂದೆಯೇ ಬರೆಯಲ್ಪಟ್ಟಿವೆ. ಮನುಸ್ಮೃತಿಯಲ್ಲಿ ನಿರೂಪಿಸಲಾದ ಆತನ ಕಾನೂನುಗಳು ಇಂದಿಗೂ ವಿಶ್ವದ ಶ್ಲಾಘನೆಗೆ ಪಾತ್ರವಾಗಿವೆಯಲ್ಲದೆ ಸ್ವಯಂಪ್ರೇರಿತವಾಗಿ ವಿಧೇಯತೆಯಿಂದ ಅನುಸರಿಸಲ್ಪಡುತ್ತವೆ......"

ಆರೆಸ್ಸೆಸ್ ಕುರಿತು ಪಟೇಲರ ಅಸಲಿ ನಿಲುವುಗಳೇನಿದ್ದವು?

ರಾಷ್ಟ್ರಧ್ವಜ, ಸಂವಿಧಾನ, ಪ್ರಜಾಸತ್ತೆ, ಧರ್ಮನಿರಪೇಕ್ಷತೆ ಮತ್ತು ಒಕ್ಕೂಟ ರಾಜ್ಯರಚನೆ (Federalism)ಯಲ್ಲಿ ನಂಬಿಕೆಯಿರದ ಇಂಥಾ ಆರೆಸ್ಸೆಸ್‌ಗೆ ಸೇರುವ ಉತ್ಸುಕತೆಯನ್ನು ಸರ್ದಾರ್ ಪಟೇಲರು ಯಾವತ್ತೂ ತೋರಿಸಿರಲಿಲ್ಲ. ಬದಲು ಕಾಂಗ್ರೆಸ್ ಪಕ್ಷದ ಸದಸ್ಯತ್ವವನ್ನು ಆರಿಸಿಕೊಂಡರು. ಅಂದು ಲಾಲಾ ಲಜಪತ್ ರಾಯ್, ಮದನ ಮೋಹನ ಮಾಲವೀಯ ಮೊದಲಾದ ಕೆಲವು ಕಾಂಗ್ರೆಸ್ಸಿಗರು ಹಿಂದೂ ಮಹಾಸಭಾ ಜೊತೆಗೂ ಒಡನಾಟ ಇಟ್ಟುಕೊಂಡಿದ್ದರಾದರೂ ಪಟೇಲರೆಂದೂ ಹಾಗೆ ಮಾಡಿಲ್ಲ. ಅವರು ಗಾಂಧೀಜಿ ಹತ್ಯೆಯಾದಾಗ ಆರೆಸ್ಸೆಸ್ ಮಂದಿ ಆನಂದ ತುಂದಿಲರಾಗಿ ಸಿಹಿ ಹಂಚಿದುದಕ್ಕೆ ವಿಷಾದ ವ್ಯಕ್ತಪಡಿಸಿ ಗೋಲ್ವಾಲ್ಕರ್‌ಗೆ ಪತ್ರ ಕೂಡ ಬರೆದಿದ್ದರು. ಪಟೇಲರು ಆರೆಸ್ಸೆಸ್ ನಿರ್ದೋಷಿಯೆಂದು ಹೇಳಿದ್ದರೇ ಎಂಬ ಪ್ರಶ್ನೆಗೆ ಉತ್ತರವಾಗಿ "1948ರಲ್ಲಿ ಅವರು ಆರೆಸ್ಸೆಸ್‌ಗೆ ಕ್ಲೀನ್‌ಚಿಟ್ ನೀಡಿರಲೇ ಇಲ್ಲ. ಒಂದು ವೇಳೆ ಇದು ನಿಜವಾಗಿದ್ದರೆ ಅವರು ಅದು ಹೇಗೆ 25,000 ಸ್ವಯಂಸೇವಕರನ್ನು ಬಂಧಿಸಲು ಆದೇಶ ಹೊರಡಿಸಿದರು?" ಎಂದು ಮರುಪ್ರಶ್ನಿಸುತ್ತಾರೆ ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾನಿಲಯದ ಚಾರಿತ್ರಿಕ ಅಧ್ಯಯನ ಕೇಂದ್ರದ ಆದಿತ್ಯ ಮುಖರ್ಜಿ. ಇತಿಹಾಸತಜ್ಞೆಯೂ ಪಟೇಲರ ಕುರಿತಂತೆ ಎರಡು ಪುಸ್ತಕಗಳನ್ನು ಬರೆದವರೂ ಆದ ನೀರಜಾ ಸಿಂಗ್ ಪ್ರಕಾರ, ಪಟೇಲರು ಆರೆಸ್ಸೆಸ್ ಮತ್ತು ಹಿಂದೂ ಮಹಾಸಭಾದೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದ ಮಹಾಂತ ದಿಗ್ವಿಜಯನಾಥ, ಪ್ರೊಫೆಸರ್ ರಾಂ ಸಿಂಗ್ ಮತ್ತು ದೇಶಪಾಂಡೆಯವರ ಕೃತ್ಯಗಳನ್ನು ಟೀಕಿಸುತ್ತಿದ್ದರು. 1948ರ ಡಿಸೆಂಬರ್ 20ರಂದು ಜೈಪುರದಲ್ಲಿ ಮಾಡಿದ್ದ ಭಾಷಣದಲ್ಲಿ "ನಾವು ಯಾವುದೇ ಸಂಘಟನೆ ನಿರಂತರವಾಗಿ ಯಾವುದೇ ವಿಧದ ಕೋಮುವಾದದಲ್ಲಿ ತೊಡಗಿರಲು ಬಿಡುವುದಿಲ್ಲ" ಎಂದಿದ್ದರು.

ಮೇಲಿನ ವಿದ್ಯಮಾನಗಳಿಗೆ ಸಂಬಂಧಿಸಿದ ಕಡತಗಳು ಬಹುಮುಖ್ಯ ದಾಖಲೆಗಳಾಗಿವೆ. ಏಕೆಂದರೆ ಅವುಗಳ ಮೂಲಕ ನಾವು ಮೋದಿ ಸರ್ಕಾರಕ್ಕೆ ಇರಿಸುಮುರಿಸು ಉಂಟುಮಾಡಬಲ್ಲ ಆರೆಸ್ಸೆಸ್‌ನ ನೈಜ ಚರಿತ್ರೆ ಮತ್ತು ಆರೆಸ್ಸೆಸ್ ಕುರಿತು ಪಟೇಲರ ಅಸಲಿ ನಿಲುವುಗಳನ್ನು ತಿಳಿದುಕೊಳ್ಳಬಹುದಾಗಿದೆ. ಆದರೆ ಆರ್‌ಟಿಐ ಕಾರ್ಯಕರ್ತ ಕಪೂರ್ ಈ ವಿಷಯಗಳ ಕುರಿತು ಸರಕಾರದಿಂದ ಮಾಹಿತಿ ಪಡೆಯಬಯಸಿದಾಗ ಆತನೆದುರಿಗೆ ಗೋಡೆಯೊಂದು ಧುತ್ತೆಂದು ಎದ್ದುನಿಂತಿದೆ. ಕಪೂರ್ 2014ರಲ್ಲಿ, 2015ರ ಜನವರಿಯಲ್ಲಿ ಮತ್ತು ಆಗಸ್ಟ್‌ನಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿ ಒಟ್ಟು ಮೂರು ಬಾರಿ ಅರ್ಜಿ ಸಲ್ಲಿಸಿದ್ದರು. ಆದರೆ ಅತ್ಯಂತ ಆಘಾತಕಾರಿಯಾಗಿ ಪ್ರತಿಬಾರಿಯೂ ಸಚಿವಾಲಯ ಕೊಟ್ಟ ಉತ್ತರವೆಂದರೆ: "ಮಹಾತ್ಮ ಗಾಂಧಿ ಹತ್ಯೆ ನಂತರದಲ್ಲಿ ಆರೆಸ್ಸೆಸ್ ಮೇಲೆ ನಿಷೇಧ ಹೇರಿದುದಕ್ಕೆ ಸಂಬಂಧಿಸಿದಂತೆ ನಮ್ಮಲ್ಲಿ ಯಾವುದೇ ದಾಖಲೆ/ ಕಡತಗಳು ಲಭ್ಯವಿಲ್ಲ". ಮಾಹಿತಿ ಹಕ್ಕು ಕಾಯ್ದೆಯಲ್ಲಿ ಗೃಹಸಚಿವಾಲಯದ ಜಂಟಿ ಕಾರ್ಯದರ್ಶಿಗೆ ಮೇಲ್ಮನವಿ ಸಲ್ಲಿಸುವ ಅವಕಾಶವಿದ್ದು ಅದರಂತೆ ಆಕೆಯನ್ನು ಸಂಪರ್ಕಿಸಿದಾಗ "ಇದಕ್ಕೆ ಉತ್ತರ ನೀಡಲು ನಾನು ಸೂಕ್ತ ವ್ಯಕ್ತಿಯಲ್ಲ. ನಾನೀಗ ಒಂದು ಮೀಟಿಂಗ್‌ನಲ್ಲಿರುವೆ" ಎಂಬ ಪ್ರತಿಕ್ರಿಯೆ ದೊರೆತಿದೆ. ಹಾಗಾದರೆ ಗೃಹಸಚಿವಾಲಯ ಮಾಹಿತಿಗಳನ್ನು ತಡೆಹಿಡಿದಿದೆಯೇ? ಹೀಗೆ ತಡೆಹಿಡಿಯಲು ಕಾರಣವೇನು? ಅಥವಾ ಕಡತಗಳು ನಾಪತ್ತೆಯಾಗಿವೆಯೇ? ಅವು ನಿಜಕ್ಕೂ ಕಾಣೆಯಾಗಿದ್ದರೆ ಅದಕ್ಕೆ ಯಾರು ಹೊಣೆ?

ವಾಸ್ತವ ಏನೆಂದರೆ ಸಂಘ ಪರಿವಾರಿಗರು ಸರ್ದಾರ್ ಪಟೇಲರನ್ನು ತಮ್ಮವನೆಂದು ಬಿಂಬಿಸಲು ಶತಾಯಗತಾಯ ಪ್ರಯತ್ನಿಸುತ್ತಿರುವಂತಹ ಇಂದಿನ ಸಂದರ್ಭದಲ್ಲಿ ಆರೆಸ್ಸೆಸ್‌ನ ನೈಜ ರೂಪವನ್ನು ಹಾಗೂ ಆರೆಸ್ಸೆಸ್ ಕುರಿತಂತೆ ಪಟೇಲರು ತಳೆದಿದ್ದ ನಿಲುವುಗಳನ್ನು ಬಯಲುಗೊಳಿಸುವ ದಾಖಲೆಗಳು ಸಾರ್ವಜನಿಕರ ಕೈಸೇರುವುದು ಮೋದಿ ಸರ್ಕಾರಕ್ಕೆ ಬೇಕಾಗಿಲ್ಲ. ಆದುದರಿಂದ ಸರ್ಕಾರ ಇವತ್ತು ಸಂಬಂಧಪಟ್ಟ ಮಾಹಿತಿಗಳನ್ನು ಸಾರ್ವಜನಿಕರಿಗೆ ಲಭ್ಯವಾಗದಂತೆ ಮಾಡಿರುವುದು ಸಂಭಾವ್ಯ ಮುಜುಗರವನ್ನು ತಪ್ಪಿಸುವುದಕ್ಕೋಸ್ಕರ ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

(ಆಧಾರ: 'ರಾಷ್ಟ್ರೀಯ ಸ್ವಯಂಸೇವಕ ಸಂಘದ ಬಗ್ಗೆ ಅರಿಯಿರಿ', ಶಂಸುಲ್ ಇಸ್ಲಾಮ್; 14.11.2015ರ ತೆಹೆಲ್ಕಾದಲ್ಲಿ ಸಾಗರ್ ಬಧೂರಿ ಲೇಖನ)



ಟಿಪ್ಪು ಸುಲ್ತಾನನೂ, ಅಬ್ಬಕ್ಕ ದೇವಿಯ...

ಕರಾವಳಿಯಲ್ಲಿ ಟಿಪ್ಪು ಸುಲ್ತಾನ್ ಮಾಡಿದ ಅನಾಹುತಕ್ಕೆ ಕಣ್ಣೀರು ಸುರಿಸುತ್ತಿರುವ ಸಂಘ ಪರಿವಾರದವರು ತಮ್ಮ ಸ್ವಂತ ಹಿರಿಯರು ಭಾರತದ ಪ್ರಪ್ರಥಮ ಸ್ವಾತಂತ್ರ್ಯ ಹೋರಾಟಗಾರ್ತಿ ಅಬ್ಬಕ್ಕ ರಾಣಿಗೆ ಮಾಡಿದ ದ್ರೋಹದ ಬಗ್ಗೆ ಅರಿಯುವುದು ಒಳಿತು. ಉಳ್ಳಾಲದ ರಾಣಿ ಅಬ್ಬಕ್ಕದೇವಿ ಮೊದಲ ಬಾರಿ ಪೋರ್ಚುಗೀಸರನ್ನು ಸೋಲಿಸಿದ್ದು ಮೊಗವೀರರೆಂಬ ಮೀನುಗಾರ ಸಮುದಾಯ ಮತ್ತು ಸ್ಥಳೀಯ ಮುಸ್ಲಿಮ ಸೈನಿಕರ ಸಹಾಯದಿಂದ ಎಂದು ಚರಿತ್ರೆಯಲ್ಲಿಯೇ ನಮೂದಿತವಾಗಿದೆ. ಈಗ ಕರಾವಳಿಯಲ್ಲಿ ಸಂಘ ಪರಿವಾರದ ಬೆನ್ನೆಲುಬಾಗಿರುವ ಗೋಡ್ಸೆಯ ಜಾತಿಯ ಚಿತ್ಪಾವನ್ ಬ್ರಾಹ್ಮಣರು, ಕೊಂಕಣಿ ಸಾರಸ್ವತರು, ತುಳು ಬ್ರಾಹ್ಮಣರು ಆಗ ಎಲ್ಲಿಯೋ ಅಡಗಿ ಕುಳಿತ್ತಿದ್ದರು.

ಅಬ್ಬಕ್ಕದೇವಿಯ ವಿಚ್ಛೇದಿತ ಗಂಡ ಲಕ್ಷ್ಮಪ್ಪ ಬಂಗರಸ ಮತ್ತು ಜೈನ ಅಧಿಕಾರಿಗಳು ಪೋರ್ಚುಗೀಸರೊಂದಿಗೆ ಗುಟ್ಟಾಗಿ ಕೈಜೋಡಿಸಿ ಅಬ್ಬಕ್ಕ ರಾಣಿಯ ವಿರುದ್ಧವೇ ಪಿತೂರಿ ನಡೆಸಿದ್ದರು, ಅಬ್ಬಕ್ಕ ದೇವಿಯನ್ನು ಪೋರ್ಚುಗೀಸ್ ಇತಿಹಾಸಕಾರರೇ ಜೈನ-ಬಂಟ ಎಂಬ ಜಾತಿಯವಳು ಎಂದು ಕರೆದಿದ್ದರು. ಹೀಗಿದ್ದರೂ ನಾವು ವೀರರು-ಶೂರರು-ಕ್ಷತ್ರಿಯರು ಎಂದು ಜಂಬ ಕೊಚ್ಚಿಕೊಳ್ಳುವ ನಾಡವ-ಬಂಟ ಸಮುದಾಯದವರು ಅಬ್ಬಕ್ಕದೇವಿಯ ಸಹಾಯಕ್ಕೆ ಹೋಗಲಿಲ್ಲ. ಈಗ ಮಾತ್ರ ಸಂಘಪರಿವಾರದ ಅಂಗಸಂಸ್ಥೆಗಳಲ್ಲಿ ಹಿಂದೂತ್ವದ ಹೆಸರಲ್ಲಿ ಗೂಂಡಾಗಿರಿ ಮಾಡುವ ಕಾಲಾಳುಗಳಲ್ಲಿ ಅರೆಸಾಕ್ಷರ ಬಂಟರು ಮತ್ತು ಬಿಲ್ಲವರೇ ಪ್ರಮುಖರು.

ಒಂದುವೇಳೆ 450 ವರ್ಷಗಳ ಹಿಂದೆ ಗೋವೆಯಂತೆ ನಮ್ಮ ಕನ್ನಡ ಕರಾವಳಿಯ ಮೇಲೂ ಪೋರ್ಚುಗೀಸರು ಪ್ರಭುತ್ವ ಸಾಧಿಸಲು ಸಾಧ್ಯವಾಗಿದ್ದರೆ ಈಗ ನಮ್ಮ ನಡುವೆ ಇರುವ ಮೇಲ್ಜಾತಿಯ ಹೆಗಡೆ ಶೆಟ್ಟಿ ಭಟ್ಟ ಆಳ್ವ ಈ ಹೆಸರುಗಳೆಲ್ಲಾ ಡಿಸೋಜಾ ಫರ್ನಾಂಡಿಸ್ ಪಿಂಟೊ ಆಲ್ವಾರಿಸ್ ಎಂದಾಗಿರುತ್ತಿತ್ತು!

ಪಾಪ ಪುಣ್ಯದ ಹೆಸರಲ್ಲಿ ಜನರಲ್ಲಿ ಭಯ ಮೂಡಿಸಿ ಜನರ ಮಾನಸಿಕತೆಯ ಮೇಲೆ ಮೂರು ನಾಲ್ಕು ಸಾವಿರ ವರ್ಷಗಳಿಂದ ಸವಾರಿ ಮಾಡುತ್ತಲೇ ಇದ್ದ ಸವರ್ಣೀಯರ ಮರಿಮಕ್ಕಳು ಈಗ ಜನರು ದೀಪಾವಳಿ ಹಬ್ಬಕ್ಕೆ ಪಟಾಕಿ ಸುಡುವುದರಲ್ಲೂ ಪಾಪ-ಪುಣ್ಯ ತುರುಕಲು ಪ್ರಯತ್ನಿಸುತ್ತಿದ್ದಾರೆ. ಸಂಘ ಪರಿವಾರದವರು ರಾಷ್ಟ್ರಪ್ರೇಮ, ದೇಶಭಕ್ತಿ ಇವನ್ನೆಲ್ಲ ತಾವೇ ಸಂಪೂರ್ಣ ಗುತ್ತಿಗೆ ಪಡೆದವರಂತೆ ವರ್ತಿಸುತ್ತಾ ಜನರು ದೀಪಾವಳಿಗೆ ಪಟಾಕಿ ಸುಟ್ಟರೆ ಅದು ದೇಶದ್ರೋಹ ಮತ್ತು ರಾಷ್ಟ್ರೀಯ-ಪಾಪ ಎಂದು ನಗರದಲ್ಲೆಲ್ಲಾ ಪೋಸ್ಟರ್ ಹಚ್ಚಿದ್ದರು. ಆದರೆ



ಮೊನ್ನೆ ನವಂಬರ್ 8 ರಂದು ಬಿಹಾರ ಚುನ... ಮತ ಎಣಿಕೆಯ ಸಮಯ ಮೊದಲ ಒಂದು ಗ... ಬಿಜೆಪಿ ನೂರ ಹತ್ತು ಸೀಟುಗಳಲ್ಲಿ ಮುಂದಿದ... ಟಿವಿಗಳ ಅರೆಬೆಂದ ವರದಿ ನೋಡಿ ಬಿಜೆಪಿಗರು... ತುಂಬೆಲ್ಲಾ ಭಯಂಕರವಾಗಿ ಚೈನಾ ಪಟಾಕಿ... ಸಂಭ್ರಮಿಸಿದರು (ಒಂದು ಗಂಟೆಯ ನಂತರ ಠುಸ್ ಆಗಿದ್ದು ಬೇರೆ ವಿಷಯ). ಅಂದರೆ ದೇಶದ್ರೋಹ-ರಾಷ್ಟ್ರೀಯ ಪಾಪದ ಬೋಧನೆಗಳು... ಅವು ಬೇರೆಯವರಿಗೆ ಮಾತ್ರ ಮೀಸಲು!

- ಆರ್.ಬಿ.ಶೇಣಾವ, ಮಂ...

ಶಂಕರಾಚಾರ್ಯ ಟಿಪ್ಪುಗಿಂತಲೂ ಭಯಾನಕ

ಉಡುಪಿಯ ಪರ್ಯಾಯ ಮಹೋತ್ಸವ ಹತ್ತಿರ ಹತ್ತಿರ ಬರುತ್ತಿರುವಂತೆ ಪೇಜಾವರ ಶ್ರೀಗಳ ಸ್ವಪ್ರಚಾರದ ವ್ಯಸನ ಹೆಚ್ಚು ಆಳ ಆಗುತ್ತಿರುವಂತೆ ಕಾಣುತ್ತಿದೆ. ಹಾಗಾಗಿ ಈಗ ಅವರು ದೊಡ್ಡ ಇತಿಹಾಸ ಸಂಶೋಧಕನಂತೆ ಟಿಪ್ಪುವಿನ ಶಾಸನವನ್ನು ವಿಶ್ಲೇಷಿಸುತ್ತಾ ಇಂತಹ 'ವಿವಾದಿತರ' ಜಯಂತಿ ಆಚರಣೆ ಅನಗತ್ಯ ಎಂದು ಮುಖ್ಯಮಂತ್ರಿಗಳಿಗೇ ಅಪ್ಪಣೆ ಕೊಡಿಸಿದ್ದಾರೆ. ಈ ಸ್ವಾಮೀಜಿ ಮೊದಲು ತಮ್ಮದೇ ಆಚಾರ್ಯರ ಮತ್ತು ಹಿಂದೂ ಧಾರ್ಮಿಕ ನೇತಾರರ ಜೀವನಚರಿತ್ರೆ ಓದಿದರೆ ಈ ಎಲ್ಲರೂ ವಿವಾದಿತರು ಎಂದು ಮನದಟ್ಟಾಗುತ್ತದೆ. ಆದರೂ ಇವರೆಲ್ಲರ ಜಯಂತಿ ಆಚರಿಸಲಾಗುತ್ತದೆ.



ಮೊಟ್ಟಮೊದಲು ಸ್ವಾಮೀಜಿಗಳು ಒಮ್ಮೆ ತಮ್ಮದೇ ಉಡುಪಿ ಮಠದ ಇತಿಹಾಸ ಓದಲಿ. ಮಧ್ವಾಚಾರ್ಯರಿಂದ ಹಿಡಿದು ವಾದಿರಾಜರವರೆಗಿನ ಮಾಧ್ವ ಯತಿಗಳೆಲ್ಲಾ ಬಲಾತ್ಕಾರದಿಂದ ಶೈವ ದೇವಸ್ಥಾನಗಳನ್ನೆಲ್ಲಾ ಕೈವಶ ಮಾಡಿಕೊಂಡು ಅಲ್ಲಿಯ ಶೈವ ಅರ್ಚಕರನ್ನೆಲ್ಲ ಬಲಾತ್ಕಾರದಿಂದ ವೈಷ್ಣವ ಪಂಥಕ್ಕೆ ಮತಾಂತರ ಮಾಡಿದರು. ಒಪ್ಪದಿದ್ದವರನ್ನು ಹೊಡೆದು ಬಡಿದು ಅರ್ಚಕ ಸ್ಥಾನದಿಂದ ತೆಗೆದುಹಾಕಿ ತಮ್ಮ ವೈಷ್ಣವ ಚೇಲಾಗಳನ್ನು ನೇಮಿಸಿ, ಶೈವ-ಶಾಕ್ತ ದೇವರಿಗೆಲ್ಲಾ ವೈಷ್ಣವ ಪದ್ಧತಿಯಲ್ಲಿ ಪೂಜೆ ಶುರು ಮಾಡಿದರು. ಮೊದಲಿದ್ದ ಅರ್ಚಕರನ್ನು 'ಸ್ಥಾನಿಕ ಬ್ರಾಹ್ಮಣರು' ಅಥವಾ 'ದ್ರಾವಿಡ ಬ್ರಾಹ್ಮಣರು' ಎಂದು ತುಚ್ಛವಾಗಿ ಹೆಸರಿಸಿ ಅವರನ್ನು ಈಗಲೂ ದಲಿತರಷ್ಟೇ ಕೆಟ್ಟದಾಗಿ ನಡೆಸಿಕೊಳ್ಳುತ್ತಾರೆ. ಈ ಎಲ್ಲಾ ಕೆಟ್ಟ ಸಂಪ್ರದಾಯ ಇಂದಿನವರೆಗೂ ತುಳುನಾಡಿನಲ್ಲಿ ಮುಂದುವರಿದಿದೆ.

700 ವರ್ಷಗಳಿಂದಲೂ ಉಡುಪಿ ಮಠದಲ್ಲಿ ಪಂಕ್ತಿ ಭೇದ ಅಡ್ಡ-ಪಂಕ್ತಿ ಇವೆಲ್ಲಾ ನಡೆದಿರುವದನ್ನು ಟಿಪ್ಪುವಿನ ಮತಾಂತರಕ್ಕೆ ಹೋಲಿಸಿದರೆ ಮಾನವತೆಯ ದೃಷ್ಟಿಯಿಂದ ಮಾಧ್ವ ಯತಿಗಳು ಮಾಡಿದ್ದೇ ಹೆಚ್ಚು ಹೇಯ. 1250 ವರ್ಷಗಳ ಹಿಂದೆ ನಾಗಾರ್ಜುನಕೊಂಡದಲ್ಲಿ ಶಂಕರಾಚಾರ್ಯರ ಶಿಷ್ಯರ ದಂಡು ಬೌದ್ಧ ವಿಹಾರಗಳನ್ನೆಲ್ಲಾ ನಾಶ ಮಾಡಿ ಬೌದ್ಧ ಭಿಕ್ಷುಗಳನ್ನೆಲ್ಲ ಕೊಂದು ಹಾಕಿದ್ದು ಹಾಗೂ ಅಲ್ಲಿಯ ಬೌದ್ಧ ಪ್ರಜೆಗಳನ್ನು ಬಲಾತ್ಕಾರದಿಂದ ಹಿಂದೂ ಧರ್ಮಕ್ಕೆ ಮತಾಂತರಿಸಿದ್ದು ಟಿಪ್ಪುವಿನ ಮಾರಣಹೋಮಕ್ಕಿಂತ ಹೆಚ್ಚು ಭಯಾನಕವಾಗಿತ್ತು. ರಾಮಾನುಜರು ಬಲೀಂದ್ರನ ಬೌದ್ಧ ಚೈತ್ಯಾಲಯವಾಗಿದ್ದ ತಿರುಪತಿ ಮಂದಿರವನ್ನು ವೈಷ್ಣವ ಮಂದಿರವಾಗಿ ಪರಿವರ್ತಿಸಿ ದೇವರನ್ನೇ ಮತಾಂತರಿಸುವಾಗ ಅದನ್ನು ವಿರೋಧಿಸಿದವರ ಹತ್ಯೆ ನಡೆಸಿದ್ದು ಯಾರು ಎಂದು ಇತಿಹಾಸದಲ್ಲಿ ಬರೆದಿದ್ದರೂ ಅದಕ್ಕೆ ಟಿಪ್ಪುವಿನ ಕೃತ್ಯಗಳನ್ನು ಹೋಲಿಸಿ ವಿಮರ್ಶಿಸದೇ ಟಿಪ್ಪುವಿನ ಶಾಸನವನ್ನು ಪ್ರತ್ಯೇಕವಾಗಿ ವಿಮರ್ಶಿಸುವುದು ಸರಿಯಲ್ಲ.

ಟಿಪ್ಪು ಕೊಲ್ಲೂರು ದೇವಳಕ್ಕೆ ಭೇಟಿ ಕೊಟ್ಟು ಹಿಂತಿರುಗುವಾಗ ಮಾರ್ಗ ಮಧ್ಯೆ ಉಡುಪಿ ದೇವಳಕ್ಕೂ ಭೇಟಿ ಕೊಟ್ಟು ದೊಡ್ಡ ಕಾಣಿಕೆಗಳನ್ನೂ ಕೊಟ್ಟಿದ್ದ ಎನ್ನಲಾಗುತ್ತದೆ. ಆದರೆ ಈ ಐತಿಹಾಸಿಕ ದಾಖಲೆಗಳನ್ನು ಅಳಿಸಿ ಹಾಕಿದ ಪೂರ್ವಗ್ರಹಪೀಡಿತ ಸನಾತನಿಗಳು ಯಾರು ಎಂದು ಪೇಜಾವರರಂತಹ ಕಾವಿಧಾರಿ ರಾಜಕಾರಣಿಗಳು ಹೇಳಬೇಕು.

- ಹರೀಶ್ ಎಂ ಆರ್, ಉಡುಪಿ

ಆರ್ಯರಿಗೆ ಬಲಿ ಚಕ್ರವರ್ತಿ ರಾಕ್ಷ... ದ್ರಾವಿಡರಿಗೆ ಸಾತ್ವಿಕ ರಾ...

ಟಿಪ್ಪು ಕೊಡವ ಹಿಂದೂಗಳ ಮತ್ತು ಕೆನರಾ ಕ್ರೈಸ್ತರ ಮಾರಣಹೋಮ ನಡೆಸಿದ್ದಕ್ಕಾಗಿ ಅವನ ಜಯಂತಿ ಆಚರಿಸುವುದು ತಪ್ಪು ಎನ್ನುವ ಅಭಿಪ್ರಾಯ ಹಿಂದೂತ್ವವಾದಿಗಳದ್ದು. ಆದಕ್ಕಾಗಿ ಕೆನರಾ-ಕರಾವಳಿಗೆ ಸಂಬಂಧಿಸಿದ ಪುರಾಣಗಳನ್ನೇ ಮೊದಲು ನೋಡೋಣ. ಕೆನರಾವನ್ನು ಸೃಷ್ಟಿಸಿದ ಪರಶುರಾಮನ ಕಥೆ ಕಾಲ್ಪನಿಕವಾದರೂ ವೈದಿಕರು ಈ ಕಥೆಯನ್ನು ನಿಜ ಕಥೆಯೆಂದು ವಾದಿಸುವುದರಿಂದ ಮೊದಲು ಇದನ್ನು ವಿಶ್ಲೇಷಿಸೋಣ.

ಪರಶುರಾಮನು ಕೇವಲ ರಾಜರನ್ನು ಮಾತ್ರ ಕೊಂದಿದ್ದಲ್ಲ, ಅವನು ನಿಸ್ಸಹಾಯಕ ಮುದುಕರು, ಮುಗ್ಧ ಮಕ್ಕಳು ಮತ್ತು ನಿರಪರಾಧಿ ಜನಸಾಮಾನ್ಯರನ್ನೂ - ಅವರೆಲ್ಲಾ ಕೇವಲ ಕ್ಷತ್ರಿಯ ಜಾತಿಯವರು ಎಂಬ ಒಂದೇ ಕಾರಣಕ್ಕೆ




- ಯಾವುದೇ ಕರುಣೆತೋರದೆ ಕೊಂದನು. ಈ... ಕ್ಷತ್ರಿಯ ವರ್ಗದವರೆಲ್ಲಾ ಆಗ ಕ್ಷತ್ರಿಯ ... ಹೊಟ್ಟೆಯಲ್ಲಿದ್ದ ಭ್ರೂಣದಿಂದ ಹುಟ್ಟಿದವರಂ... ಗರ್ಭಿಣಿಯರನ್ನು ಹತ್ಯೆ ಮಾಡಬಾರದೆಂದು ಪರಶು... ಪಾರ್ವತಿಯ ಆದೇಶವಿತ್ತಂತೆ! ಹಾಗಾಗಿ ... ಸ್ತ್ರೀಯರನ್ನು ಹೊರತುಪಡಿಸಿ ಬೇರೆಲ್ಲ ಕ... ಕ್ಷತ್ರಿಯರನ್ನು ಅವನು ಇಪ್ಪತ್ತೊಂದು ಬಾರಿ ಭೂ... ಏಳೂ ಖಂಡಗಳನ್ನು ಸುತ್ತಿ ಸುತ್ತಿ ಕೊಂದ... ಆಫ್ರಿಕಾ ಅಮೆರಿಕಾ ಆಸ್ಟ್ರೇಲಿಯಾ ಯುರೋಪ್ ... ದಕ್ಷಿಣ ಧ್ರುವ ಹಾಗೂ ಏಷಿಯಾದ ಚೀನಾ... ಅರೇಬಿಯಾ ಇಂಡೋನೇಷಿಯಾ ಇಲ್ಲೆಲ್ಲಾ ಕ... ಕ್ಷತ್ರಿಯರೂ ಇದ್ದು ಅವರನ್ನೆಲ್ಲ ಪರಶುರಾಮ ... ಕೊಂದನಂತೆ! ಇದನ್ನೆಲ್ಲಾ ನಂಬುವ ಮೂರ್ಖರ... ಇದ್ದಾರೆ). ಈ ಕಥೆಗೆ ಹೋಲಿಸಿದರೆ ಟಿಪ್ಪು... ಮಾಡಿದ ಹತ್ಯೆಗಳು ಬರೀ ಜುಜುಬಿ. ಆ... ಭೀಕರ ನರಹಂತಕ ಜಾತಿವಾದಿ ಪರಶು... ಜನ್ಮದಿನವಾದ ಅಕ್ಷಯ ತೃತೀಯ ಮಹಿಳೆಯ... ಕೊಳ್ಳಲು ತುಂಬಾ ಶುಭ ದಿನವಂತೆ!

ಪರಶುರಾಮನದು ಅಜ್ಜೀ ಕತೆಯಾಯಿತು ... ಹಿಂದಿನ ನಾಲ್ಕು ಸಾವಿರ ವರ್ಷಗಳಿಂದ ತಳವರ್ಗ... ನೆರಳು ಮೇಲ್ಜಾತಿಯ ಜಮೀನುದಾರ ಅಥವಾ ... ಮೇಲೆ ಬತ್ತು ಎಂಬ ಕಾರಣಕ್ಕೆ ಅದ... ತಳವರ್ಗದವರನ್ನು ಮನುಸ್ಮೃತಿಯಲ್ಲಿ ಹೇಳಿರು... ಸೀಸ್ ಹೊಯ್ದು ಕೊಲ್ಲಲಾಯಿತು ... ಇಟ್ಟವರಾರು? ಮಹಾ ಜೂಜುಕೋರ ಯು... ಹೆಂಡತಿಯನ್ನು- ತಮ್ಮಂದಿರನ್ನು ಪಣಕ್ಕಿಟ್ಟ... ಮಹಾಪಾಪಿ. ಅವನು ತನ್ನ ಜುಗಾರಿ ...

ಹಿಂದೂಗಳ ವೈರಿಗಳು ಮುಸ್ಲಿಂ ರಾಜರೋ, ಬ್ರಾಹ್ಮಣರೋ?

ಉತ್ತರ ಕೇರಳದಲ್ಲಿ ಟಿಪ್ಪು ಸುಲ್ತಾನ್ ಮಲೆಯಾಳಿ ಹಿಂದೂಗಳನ್ನು ಮುಸ್ಲಿಮರಾಗಿ ಮತಾಂತರ ಮಾಡಿದಾಗ ಮತಾಂತರ ಆಗಲು ಒಪ್ಪದ ಧನಿಕ ಹಿಂದೂಗಳು ಸಾರಾಸಗಟು ಊರುಬಿಟ್ಟು ದಕ್ಷಿಣ ಕೇರಳಕ್ಕೆ ಹೋಗಿ ತಾವು ತಂದಿದ್ದ ಚಿನ್ನವನ್ನೆಲ್ಲ ತಿರುವನಂತಪುರದ ಅನಂತಪದ್ಮನಾಭ ದೇವಸ್ಥಾನದಲ್ಲಿ ಇಟ್ಟು ತಮ್ಮ ಜೀವನ ನಿರ್ವಹಣೆಗಾಗಿ ಬೇರೆ ಬೇರೆ ಕಸುಬು ಮಾಡಹತ್ತಿದರು. ಈಗಲೂ ಆ ಪದ್ಮನಾಭ ದೇವಸ್ಥಾನದಲ್ಲಿ ಇರುವ ಅಪಾರ ಚಿನ್ನವೆಲ್ಲಾ ಟಿಪ್ಪು ಕಾಲದಲ್ಲಿ ವಲಸೆಬಂದ ಹಿಂದೂ ಜಮೀನುದಾರರು ಮತ್ತು ಕರಿಮೆಣಸು-ಏಲಕ್ಕಿ ವ್ಯಾಪಾರಿಗಳದ್ದೇ ಆಗಿದೆಯಂತೆ. ಹತ್ತು ವರ್ಷಗಳ ನಂತರ ಟಿಪ್ಪು ಸತ್ತ ಮೇಲೆ ಬ್ರಿಟಿಷರು ವಲಸೆಹೋದ ಹಿಂದೂಗಳಿಗೆ ಮರಳಿ ಬಂದು ಆಸ್ತಿಪಾಸ್ತಿ ವ್ಯಾಪಾರ ವಹಿಸಿಕೊಳ್ಳಲು ಅನುವು ಮಾಡಿಕೊಟ್ಟರು. ಆಗ ಇಸ್ಲಾಂ ಧರ್ಮಕ್ಕೆ ಮತಾಂತರವಾಗಿದ್ದ ಸ್ಥಳೀಯರ ಆಸ್ತಿಪಾಸ್ತಿ ಸಹ ವಾಪಸು ಬಂದ ಈ ಮೇಲ್ಜಾತಿ ಹಿಂದೂಗಳಿಗೇ ಬ್ರಿಟಿಷರು ವಹಿಸಿ ಕೊಟ್ಟರು. ಇದರಿಂದ ಈ ನವ-ಮುಸ್ಲಿಮರು ನಿರ್ಗತಿಕರಾದರು. ಹಾಗಾಗಿ ಈ ನವಮುಸ್ಲಿಮರು ಮರಳಿ ಹಿಂದೂ ಮಾತೃ ಧರ್ಮಕ್ಕೆ ಬರಲು ದೀಕ್ಷೆ ಕೊಡುವಂತೆ ಅಲ್ಲಿಯ ಹಿಂದೂ ಧಾರ್ಮಿಕ ನೇತಾರರಿಗೆ ಕೇಳಿಕೊಂಡರು. ಆದರೆ ಬ್ರಿಟಿಷ್ ಸರಕಾರದಿಂದ ತಮಗೆ ಸಿಕ್ಕ ಆಸ್ತಿಯಲ್ಲಿ ಹಿಂದೂ ಧರ್ಮಕ್ಕೆ ಮರಳಿ ಬಂದವರಿಗೂ ಪಾಲು ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಈ ನವಮುಸ್ಲಿಮರು ಮರಳಿ ಹಿಂದೂ ಮಾತೃ ಧರ್ಮಕ್ಕೆ ಬರದಂತೆ ತಡೆಗೋಡೆಯಾದವರು ಹಿಂದೂ ಮೇಲ್ಜಾತಿಗಳಾದ ನಾಯರ್ ಮತ್ತು ನಂಬೂದರಿಗಳೇ. ಹಿಂದೂ



ಪುರೋಹಿತರು ಯಾವುದೇ ನವಮುಸ್ಲಿಮನಿಗೂ ಮರಳಿ ಹಿಂದೂ ಧರ್ಮದ ದೀಕ್ಷೆ ಕೊಡದಂತೆ ಇದೇ ಮೇಲ್ಜಾತಿ ನಂಬೂದರಿ ಮತ್ತು ನಾಯರ್‌ಗಳು ತಾವೇ ಧಾರ್ಮಿಕ ನಿಯಮ ರೂಪಿಸಿದರು. ಇಲ್ಲದಿದ್ದರೆ ಈಗಲೂ 70% ಮುಸ್ಲಿಂ ಜನಸಂಖ್ಯೆ ಇರುವ ಮಲ್ಲಾಪುರಮ್ ಜಿಲ್ಲೆ ಅಥವಾ 30% ಗಿಂತ ಹೆಚ್ಚು ಮುಸ್ಲಿಂ ಜನಸಂಖ್ಯೆ ಇರುವ ಇತರ ಮಲಬಾರ್ ಪ್ರದೇಶ ಇಂದು ಪೂರ್ಣ ಹಿಂದೂ ಜನಸಂಖ್ಯೆಯುಳ್ಳ ಜಿಲ್ಲೆಗಳಾಗಿರುತ್ತಿದ್ದವು. ಈ ರೀತಿ ಟಿಪ್ಪು ಸುಲ್ತಾನ್ ಹಿಂದೂ ಧರ್ಮಕ್ಕೆ ಮಾಡಿರುವ ಕೆಡುಕಿಗಿಂತ ಹೆಚ್ಚು ಕೆಡುಕು ಕೇರಳದ ಹಿಂದೂ ಧಾರ್ಮಿಕ ನೇತಾರರು ಟಿಪ್ಪು ಸತ್ತ ನಂತರ 1799-1800 ಇಸ್ವಿಯಲ್ಲಿ ಮಾಡಿದ್ದಾರೆ.

ಹೀಗಾಗಿ ಆಗ ಬಡ ನವಮುಸ್ಲಿಮರು ಕೃಷಿ ಕಾರ್ಮಿಕರಾಗಿಯೇ ಉಳಿದರೆ ಹೆಚ್ಚಿನ ಜಮೀನುದಾರರೆಲ್ಲಾ ನಾಯರ್ ನಂಬೂದ್ರಿ ಮತ್ತು ನಂಬಿಯಾರ್ ಮೇಲ್ಜಾತಿಯವರಾದರು. ಕೊನೆಗೆ 1921 ರಲ್ಲಿ ಎದ್ದ 'ಮಾಪಿಳ್ಳೆ ದಂಗೆ'ಗೂ ಇದೇ ಬೀಜವಾಯಿತು.

ಹಿಂದೂ ಧಾರ್ಮಿಕ ನೇತಾರರಿಂದ ಇದೇ ಐತಿಹಾಸಿಕ ತಪ್ಪು ಕಾಶ್ಮೀರದಲ್ಲಿಯೂ ನಡೆದಿದೆ. ಕಾಶ್ಮೀರವು ಶತಮಾನಗಳಿಂದಲೂ ಮುಸ್ಲಿಂ ಬಾಹುಳ್ಯ ಪ್ರದೇಶವಾಗಿದ್ದರೂ ಅದು ಯಾವಾಗಲೂ ಹಿಂದೂ ಡೋಗ್ರಾ ವಂಶದ ಅರಸೊತ್ತಿಗೆಯಲ್ಲಿಯೇ ಇತ್ತು, ಸುಮಾರು 150 ವರ್ಷಗಳ ಹಿಂದೆ ಆಗಿನ ಕಾಶ್ಮೀರದ ಹಿಂದೂ ರಾಜ ಅಲ್ಲಿಯ ಮುಸ್ಲಿಮರೆಲ್ಲರನ್ನು ಹಿಂದೂ ಧರ್ಮಕ್ಕೆ ಮರಳುವಂತೆ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದ. ಅವರಿಗೆ ಹಿಂದೂ ಧರ್ಮದ ದೀಕ್ಷೆ ಕೊಡಲು ಆ ಡೋಗ್ರಾ ರಾಜ ವಾರಣಾಸಿಯ ಕಾಶಿ ಧರ್ಮ ಸಂಸತ್ತಿನವರಿಗೆ ಕೇಳಿದ. ಆಗ ಬೇರೆ ಧರ್ಮದವರನ್ನು ಹಿಂದೂ ಧರ್ಮದೊಳಗೆ ತರುವಂತಹ ಯಾವುದೇ ಪ್ರಾವಿಧಾನ್ಯ (Provision) ಹಿಂದೂ ಧರ್ಮಗ್ರಂಥಗಳಲ್ಲಿ ಇಲ್ಲ, ಹಾಗಾಗಿ ಕಾಶ್ಮೀರದ ಮುಸ್ಲಿಮರನ್ನು ಹಿಂದೂಗಳಾಗಿ ಪರಿವರ್ತಿಸುವುದು ಸಾಧ್ಯವೇ ಇಲ್ಲ ಎಂದು ವಾರಣಾಸಿಯ ಕಾಶಿ ಧರ್ಮಸಂಸತ್ತು ಅಡ್ಡಗಾಲು ಇಟ್ಟಿತು. ಒಂದು ವೇಳೆ ಅಂದು ಕಾಶಿಯ ಧರ್ಮ ಸಂಸತ್ತು ಕಾಶ್ಮೀರದ ಹಿಂದೂ ರಾಜನಿಗೆ ಸಹಕಾರ ಕೊಟ್ಟಿದ್ದರೆ ಇಂದು ಕಾಶ್ಮೀರದ ಸಮಸ್ಯೆ ಇರುತ್ತಲೇ ಇಲ್ಲ, ಈಗ ಹೇಳಿ ಹಿಂದೂಗಳ ನಿಜವಾದ ವೈರಿಗಳು ಯಾರು? ಮುಸ್ಲಿಂ ರಾಜರೇ ಅಥವಾ ಕೇರಳ ಮತ್ತು ಕಾಶಿಯ ಹಿಂದೂ ಧಾರ್ಮಿಕ ಪಂಡಿತರೇ?

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

...ಪ್ಪು ಜನ್ಮದಿನ ಆಚರಣೆ: ಬಿಜೆಪಿ ನೆನಪುಗಳ ರಾಜಕೀಯ

...ಪಕ್ಷ ಸರ್ಕಾರದ ವತಿಯಿಂದ ಕಳೆದವಾರ ...ಡ ಟಿಪ್ಪು ಜಯಂತಿ ಕಾರ್ಯಕ್ರಮವನ್ನು ಬಿಜೆಪಿ ...ಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಮುಸ್ಲಿಂ ...ಬ್ಬ ದೇಶಪ್ರೇಮಿಯಾಗಿದ್ದು ತನ್ನ ಪ್ರಜೆಗಳ ...ಣಗಳನ್ನು ಪಡೆದುಕೊಂಡಿದ್ದಿರಬಹುದು ಎಂದು ...ಲು ಸಹ ಅವರು ಸಿದ್ಧರಿಲ್ಲ. ಅಷ್ಟೇ ಏಕೆ, ...ನ್ನು ದೇಶದ ಪ್ರಜೆಗಳು ಎಂದು ಪರಿಗಣಿಸಲು ...ಗೆ ಮನಸ್ಸು ಬಾರದು. ಬಿಜೆಪಿಯ ಸಿದ್ಧಾಂತದ ...ಮುಸ್ಲಿಮರು ಈ ದೇಶಕ್ಕೆ ಸ್ವಕೀಯರಲ್ಲ; ಇದು ...ಭೂಮಿಯೂ ಅಲ್ಲ; ಪಿತೃಭೂಮಿಯೂ ಅಲ್ಲ.

ಟಿಪ್ಪುವಿನ ನೆನಪನ್ನು ಬಿಜೆಪಿ ಗೌರವಿಸುತ್ತದೆ ...ರೀಕ್ಷಿಸಲು ಸಹ ಸಾಧ್ಯವಿಲ್ಲ. ಮಾಜಿ ರಾಷ್ಟ್ರಪತಿ ...ಕಲಾಂರನ್ನು ಬಿಜೆಪಿ ಮೆಚ್ಚಿಕೊಳ್ಳುವುದು ಕೂಡ, "...ಮುಸ್ಲಿಮನಾದರೂ ರಾಷ್ಟ್ರೀಯವಾದಿ" ಎಂದು ...ರುವ ಕಾರಣಕ್ಕೆ. ಹಾಗಾಗಿ ಟಿಪ್ಪು ಜನ್ಮದಿನ ...ವನ್ನು ವಿರೋಧಿಸುವುದು ಬಿಜೆಪಿಯ ಸ್ವಭಾವಕ್ಕೆ ...ದೆ. ಆದರೆ ಟಿಪ್ಪು ಸಂಸ್ಮರಣೆ ಚುನಾಯಿತ ...ಂದರ ತೀರ್ಮಾನ. ಪ್ರಜಾಪ್ರಭುತ್ವದಲ್ಲಿ ಸರ್ಕಾರದ ...ವನ್ನು ಪ್ರಶ್ನಿಸುವ ಹಕ್ಕು ಎಲ್ಲರಿಗೂ ಇದೆ.

ಗೌರವಿಸುವ ಅಥವಾ ತಿರಸ್ಕರಿಸುವ ಹಕ್ಕು ...ರದ ನಿರ್ಧಾರದಿಂದ ಮೊಟಕುಗೊಂಡಿಲ್ಲ. ಆದರೆ ...ನ್ನೆ ಮಡಿಕೇರಿಯಲ್ಲಿ ಮಾಡಿದಂತೆ ಬೀದಿಗಳಲ್ಲಿ ...ಡೆಸಿ ಸಂಚಾರಕ್ಕೆ ತಡೆವೊಡ್ಡಿ, ಕಾನೂನು ವ್ಯವಸ್ಥೆಗೆ ...ದು ಕೊನೆಗೆ ಇಬ್ಬರ ಸಾವಿಗೆ ಕಾರಣವಾದದ್ದು ಅದು ಪ್ರಜಾಸತ್ತಾತ್ಮಕ ಪ್ರತಿಭಟನೆಯೆ? ...ಯ ರಸ್ತೆಗಳಲ್ಲಿ ಬಿಜೆಪಿಗಳು ಮೈಮೇಲೆ ಭೂತ ...ಹಾಗೆ ವರ್ತಿಸುತ್ತಿದ್ದುದನ್ನು ಅಷ್ಟೇ ಮೈದುಂಬಿ ...'ಲೈವ್' ಪ್ರಸಾರ ಮಾಡುತ್ತಿದ್ದ ಕನ್ನಡದ ಟಿವಿ ...ಳು "ಈ ಸಮಾರಂಭವನ್ನು ಜನರ ವಿರೋಧಿವಿದೆ ...ಗೊತ್ತಿದ್ದೂ ಸರ್ಕಾರ ಉದ್ಧಟತನದಿಂದ ...ಡೆ" ಎಂದು ಪ್ರಸಾರ ಮಾಡುತ್ತಿದ್ದವು. ಯಾವ ...ಗ್ಗೆ ಅವು ಕಿರುಚುತ್ತಿದ್ದುದು? ಸಿದ್ದರಾಮಯ್ಯನವರ ...ನ್ನು ಆಯ್ಕೆ ಮಾಡಿದ್ದು ಜನಗಳಲ್ಲವೆ?

...ಹೇಳಿಕೇಳಿ ಒಬ್ಬ ನಿರಂಕುಶ ದೊರೆಯಾಗಿದ್ದು ...ತ್ವ ಸರ್ಕಾರವೊಂದು ಅವನ ಜನ್ಮದಿನವನ್ನು ...ದು ಸರಿಯೆ? ಎಂದು ಕೆಲವು ಮಹನೀಯರು ...ದ್ದಾರೆ. ದೊರೆಗಳೂ ಸೇರಿದಂತೆ ಐತಿಹಾಸಿಕ ... ವ್ಯಕ್ತಿಗಳನ್ನು ಸರ್ಕಾರ ಹಲವು ವಿಧಾನಗಳಲ್ಲಿ ...ಳ್ಳುತ್ತದೆ. ರಸ್ತೆ, ಬಡಾವಣೆ, ಸರ್ಕಾರಿ ಕಟ್ಟಡ, ...ಳು ಮುಂತಾದವಕ್ಕೆ ಅವರ ಹೆಸರು ಇಡುವುದು, ...ಅಭಿವೃದ್ಧಿ ಯೋಜನೆಗಳನ್ನು ಅವರ ಹೆಸರಿನಲ್ಲಿ ...ಸುವುದು, ಪುಸ್ತಕ ಪ್ರಕಟಣೆ, ಸಾಕ್ಷ್ಯಚಿತ್ರ, ಸ್ಮಾರಕ- ...ಲವು ಬಗೆಗಳಲ್ಲಿ ಸರ್ಕಾರ, ಗತಕಾಲದ ದೊಡ್ಡ



ಮನುಷ್ಯರ ನೆನಪುಗಳನ್ನು ಅಧಿಕೃತಗೊಳಿಸುತ್ತದೆ. ಹಾಗೆಯೇ ಸರ್ವಾಧಿಕಾರ ಪ್ರಜಾಪ್ರಭುತ್ವ- ಎಲ್ಲ ಬಗೆಯ ಸರಕಾರಗಳೂ ಹಾಲಿ ನೆನಪುಗಳನ್ನು ಉಜ್ಜಿ ಹಾಕಿ ಅವುಗಳ ಜಾಗದಲ್ಲಿ ತಮ್ಮತಮ್ಮ ಆಯ್ಕೆಯ ವ್ಯಕ್ತಿಗಳ ನೆನಪು ಚಲಾವಣೆಗೆ ತರಲು ಯತ್ನಿಸುವುದನ್ನೂ ಕಾಣಬಹುದು. ಉದಾಹರಣೆಗೆ ಕೇಂದ್ರದಲ್ಲಿ ನರೇಂದ್ರ ಮೋದಿ ನಾಯಕತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ನೆಹರೂ ಅವರನ್ನು ಬದಿಗೆ ಸರಿಸಿ, ಆ ಜಾಗದಲ್ಲಿ ವಲ್ಲಭಭಾಯಿ ಪಟೇಲ್, ಶ್ಯಾಮಪ್ರಸಾದ್ ಮುಖರ್ಜಿ, ದೀನ ದಯಾಳು ಉಪಾಧ್ಯ ಮುಂತಾದವರ ನೆನಪುಗಳನ್ನು ಪ್ರತಿಷ್ಠಾಪಿಸುವ ಪ್ರಯತ್ನ ಕಂಡುಬರುತ್ತಿದೆ. ಕರ್ನಾಟಕದಲ್ಲಿ ಪಕ್ಷಭೇದವಿಲ್ಲದೆ ಎಲ್ಲ ಚುನಾಯಿತ ಸರ್ಕಾರಗಳೂ ದಸರಾ ಆಚರಣೆಯಲ್ಲಿ ಪಾಲುಗೊಳ್ಳುವುದರ ಮುಖಾಂತರ ಒಡೆಯರ್ ರಾಜಮನೆತನದ ಆಳ್ವಿಕೆಯ ನೆನಪನ್ನು ಪ್ರತಿವರ್ಷವೂ ನವೀಕರಿಸುತ್ತವೆ. ಆದರೆ ದಿ. ರಾಮದಾಸ್ ಮತ್ತು ಕಡಿದಾಳು ಶಾಮಣ್ಣ ಮುಂತಾದ ಕೆಲವೇ ಕೆಲವು ಸಮಾಜವಾದಿಗಳನ್ನು ಬಿಟ್ಟು ಬೇರೆ ಯಾರೂ ಮೈಸೂರು ದಸರಾ ಆಚರಣೆಯಲ್ಲಿ ರಾಜ್ಯ ಸರ್ಕಾರ ಪಾಲುಗೊಳ್ಳುವುದರ ಯುಕ್ತಾಯುಕ್ತತೆಯನ್ನು ಪ್ರಶ್ನಿಸಲಿಲ್ಲ. ಸರ್ಕಾರದ ವತಿಯಿಂದ ವಿಜಯನಗರ ಸಾಮ್ರಾಜ್ಯದ ನೆನಪಿನ ಹಂಪಿ ಉತ್ಸವ ಆಚರಣೆಯನ್ನು ಸಹ ಯಾರೂ ಪ್ರಶ್ನಿಸಿದ ಹಾಗಿಲ್ಲ. ಕನ್ನಡದ ಕೆಲವು ಉದಾರವಾದಿ ಚಿಂತಕರಿಗೆ ಟಿಪ್ಪುವಿನ ನೆನಪು ಅಪಥ್ಯವಾಗಿರುವುದು ಅವನು ಮುಸ್ಲಿಮ ಎಂಬ ಕಾರಣಕ್ಕಲ್ಲವೆ? ಟಿಪ್ಪು ಮುಸ್ಲಿಮನಾಗಿರದೆ ಹಿಂದೂವಾಗಿದ್ದರೆ, ಅವನಿಗೆ ಶಿವಾಜಿಗೆ ಸಿಕ್ಕಂತಹ ಗೌರವವೇ ಸಿಗುತ್ತಿತ್ತು ಎಂಬ ಗಿರೀಶ್ ಕಾರ್ನಾಡರ ಮಾತಿನಲ್ಲಿ ಉತ್ಪ್ರೇಕ್ಷೆ ಇಲ್ಲ. ಹಾಗೆಯೇ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಟಿಪ್ಪುವಿನ ಹುಟ್ಟೂರಾದ ದೇವನಹಳ್ಳಿಯಲ್ಲಿ ಸ್ಥಾಪನೆಗೊಂಡಿರುವುದರಿಂದ ಅದಕ್ಕೆ ಅವನ ಹೆಸರೇ ಇಡಬೇಕಿತ್ತು ಎಂದು ಅವರು ಹೇಳಿದ್ದರಲ್ಲಿ ಕೂಡ ತಪ್ಪೇನೂ ಇಲ್ಲ; ಆದರೆ ಕರ್ನಾಟಕದಲ್ಲಿ ಈಗ ಸಮಯಸಂದರ್ಭ ನೋಡಿಕೊಂಡು, ಮೊದಲೇ ಯೋಚಿಸಿ ಮಾತಾಡಬೇಕಾದ ಕತ್ತು ಹಿಸುಕುವ ವಾತಾವರಣವಿದೆ. ಈ ಸನ್ನಿವೇಶದಲ್ಲೂ ಗಿರೀಶ್ ಇರುವುದನ್ನು ಇರುವ ಹಾಗೇ ಹೇಳಿದ್ದಕ್ಕಾಗಿ ನಮ್ಮ ಅಭಿನಂದನೆಗೆ ಪಾತ್ರರು. ಆದರೆ ಅವರ ಈ 'ಅಪರಾಧ'ಕ್ಕೆ ಶಿಕ್ಷೆಯಾಗಿ ಅವರ ಯಾವ ನಾಟಕವನ್ನೂ ಜಿಲ್ಲೆಯಲ್ಲಿ ಆಡಲು ಬಿಡುವುದಿಲ್ಲ ಎಂದು ಉಡುಪಿಯ ಬಿಜೆಪಿ ದೊಣ್ಣೆನಾಯಕರೊಬ್ಬರು ಮೊನ್ನೆ ಸಾರ್ವಜನಿಕ ಸಭೆಯಲ್ಲಿ ಘೋಷಿಸಿದ್ದಾರೆ. ಗಿರೀಶ್ ಕಾರ್ನಾಡರ 'ನಾಗಮಂಡಲ' ನಾಟಕದ ತುಳು ಆವೃತ್ತಿಯ ರಂಗಪ್ರಯೋಗವೊಂದು ಕೆಲವು ತಿಂಗಳ ಹಿಂದೆ ಉಡುಪಿಯಲ್ಲಿ ಇಂತಹದ್ದೇ ಬೆದರಿಕೆಗೆ ಮಣಿದು ಕಡೇಕ್ಷಣದಲ್ಲಿ ರದ್ದಾಗಿತ್ತು. ಬಹುಶಃ ಇನ್ನು ಮುಂದೆ ಇಲ್ಲಿ ಗಿರೀಶ್ ಕಾರ್ನಾಡರ ಯಾವುದೇ ನಾಟಕ ಪ್ರಯೋಗಕ್ಕೆ ಪೊಲೀಸ್ ಅನುಮತಿ ಮತ್ತು ಸೂಕ್ತ ಬಂದೋಬಸ್ತ್ ಅನಿವಾರ್ಯವಾಗಬಹುದು.

ಬಾಲಂಗೋಚಿ : ಮಡಿಕೇರಿಯಲ್ಲಿ ಬಿಜೆಪಿ ನಡೆಸಿದ ದಾಂಧಲೆ, ಮತ್ತೊಮ್ಮೆ ಆ ಪಕ್ಷ ಕಳೆದ 25 ವರ್ಷಗಳಲ್ಲಿ ನಡೆಸಿದ ಹಿಂಸಾಕೃತ್ಯಗಳನ್ನೆಲ್ಲ ನೆನಪಿಗೆ ತರುತ್ತಿದೆ. ಹಿಂಸೆ, ಪ್ರಚಾರ, ಪ್ರಚೋದನೆ- ಹೀಗೆ ಎಲ್ಲ ಮಾರ್ಗಗಳಿಂದಲೂ ತನ್ನ ರಾಜಕೀಯ ಅಜೆಂಡಾವನ್ನೂ ಜಾರಿಗೊಳಿಸುತ್ತಿರುವ ಬಿಜೆಪಿಗೆ ಮಾಧ್ಯಮದ ದೊಡ್ಡ ವಿಭಾಗವೊಂದರ ನೆರವು ಸಹ ಇದೆ. ಮುಸ್ಲಿಮರು ಈ ದೇಶಕ್ಕೆ 'ಅನ್ಯರು' ಅಥವಾ ಕನ್ನಡದ ಬಹುತೇಕ ಪತ್ರಿಕೆಗಳು ಹೇಳುವ ಹಾಗೆ 'ಅನ್ಯಮತೀಯರು' ಎಂದು ಪ್ರತಿಪಾದಿಸುವ ಬಿಜೆಪಿಯ ರಾಜಕೀಯ ಗುರಿ ಒಂದೇ- ಮುಸ್ಲಿಮರು ಮತ್ತಿತರ 'ಅನ್ಯ'ರ ಬಗ್ಗೆ ದ್ವೇಷ ಪ್ರಚೋದನೆ ಬಿಜೆಪಿಯ ಈ ಯೋಜನೆಯನ್ನು ಮಾಧ್ಯಮಗಳು ಹೀಗೆ ಕಾರ್ಯಗತಗೊಳಿಸುತ್ತಿವೆ ಎಂಬುದಕ್ಕೆ ಎರಡು ಉದಾಹರಣೆಗಳು ಇಲ್ಲಿವೆ.

ಇದೇ ಆಗಸ್ಟ್ 24 ಮಂಗಳೂರು ನಗರದಲ್ಲಿ ಸಾರ್ವಜನಿಕರ ಕಣ್ಣೆದುರೇ ಒಂದು ಭೀಭತ್ಸಕರ ಘಟನೆ ನಡೆಯಿತು. ನಗರದ ಜನನಿಬಿಡ ರಸ್ತೆಯೊಂದರ ಬದಿಯಲ್ಲಿ ಸಂಜೆ 6ರ ಸುಮಾರಿಗೆ 20-25 ಯುವಕರ ಗುಂಪು, 30ರ ಹರೆಯದ ಶಕೀರ್ ಎಂಬ ತರುಣನ ಬಟ್ಟೆ ಬಿಚ್ಚಿ ಎಲೆಕ್ಟ್ರಿಕ್ ಕಂಬಕ್ಕೆ ಕಟ್ಟಿ ಹಾಕಿ ಥಳಿಸಿತು. ರಸ್ತೆಯಲ್ಲಿ ಹೋಗುತ್ತಿದ್ದ ಜನ, ಆ ದೃಶ್ಯವನ್ನು ನಿಂತು ನೋಡಿದರು; ಕೆಲವರು ತಮ್ಮ ಮೊಬೈಲುಗಳಲ್ಲಿ ಅದನ್ನು ದಾಖಲಿಸಿಕೊಂಡರು; ಇನ್ನು ಕೆಲವರು ಈ ಪಿಕ್ಚರ್ ಶೂಟಿಂಗ್ ಅನ್ನೂ ಚಿತ್ರಿಸಿಕೊಂಡರು. ಮುಸ್ಲಿಮ್ ತರುಣನನ್ನು ಆ ಪರಿ ಹೊಡೆದದ್ದು ಯಾಕೆಂದರೆ ಅವನು ಅಲ್ಲೇ ಸಮೀಪದ ಮಾಲ್ ಒಂದರಲ್ಲಿ ಉದ್ಯೋಗಿಯಾಗಿದ್ದು ತನ್ನೊಟ್ಟಿಗೆ ಕೆಲಸ ಮಾಡುತ್ತಿದ್ದ ಹಿಂದೂ ತರುಣಿಯ ಜೊತೆ ರಸ್ತೆಯಲ್ಲಿ ಮಾತಾಡುತ್ತಿದ್ದ! ಗುಂಪು ಅವನಿಗೆ ಹೊಡೆಯುತ್ತಿದ್ದಾಗ ಆ ತರುಣಿ ಮುಖ ಮುಚ್ಚಿಕೊಂಡು ಅಳುತ್ತಿದ್ದಳು! ನಾಗರಿಕರು ನಾಚಿಕೆಯಲ್ಲಿ ತಲೆತಗ್ಗಿಸಬೇಕಾದ ಕೃತ್ಯ ಇದು. ಆದರೆ ಕರಾವಳಿಯ ಊರುಗಳ ನಾಗರಿಕರಿಗೆ ಈ ಬಗ್ಗೆ ನಾಚಿಕೆ ಆದ ಲಕ್ಷಣಗಳೇನೂ ಕಾಣಿಸುತ್ತಿಲ್ಲ. ಅದಕ್ಕೆ ಬದಲಾಗಿ ಇಲ್ಲಿನ ಜನಪ್ರಿಯ ಪತ್ರಿಕೆ ಉದಯವಾಣಿ ತನ್ನ ರವಿವಾರದ ಸಂಚಿಕೆಯಲ್ಲಿ (30.08.2015) ಆ ಬಗೆಯ 'ನೈತಿಕ ಪೊಲೀಸ್'ಗಿರಿ ಕೆಲವು ಸನ್ನಿವೇಶಗಳಲ್ಲಿ ಯಾಕೆ ಅನಿವಾರ್ಯವಾಗುತ್ತದೆ ಎಂದು ವಿವರಿಸುವ ಬರಹವೊಂದನ್ನು ಪ್ರಕಟಿಸಿತು! ಕನ್ನಡದ ಇನ್ನೊಂದು ಜನಪ್ರಿಯ ಪತ್ರಿಕೆ 'ವಿಜಯ ಕರ್ನಾಟಕ'ದ ತಮ್ಮ ರವಿವಾರದ ಅಂಕಣದಲ್ಲಿ ಕತೆಗಾರ ಅಬ್ದುಲ್ ರಶೀದ್ ಮಂಗಳೂರಿನ ಇದೇ ಘಟನೆ ಕುರಿತು ಬರೆದರು. ವ್ಯಂಗ್ಯ, ನೋವು, ವಿಹ್ವಲತೆಗಳೆಲ್ಲ ಬೆರೆತ ಗದ್ಯದಲ್ಲಿ ರಶೀದ್ ಈ ಘಟನೆ ಮತ್ತು ಇಂತಹದ್ದನ್ನು ಸಾಧ್ಯವಾಗಿಸಿದ ನಮ್ಮ ದಿಕ್ಕೆಟ್ಟ ಕಾಲದ ಕುರಿತು ಬರೆದಿದ್ದರು. ವಿಜಯ ಕರ್ನಾಟಕ ಅದನ್ನು ಪ್ರಕಟಿಸಲಿಲ್ಲ. ರಶೀದ್ ಈಗ ಆ ಪತ್ರಿಕೆಯಲ್ಲಿ ಬರೆಯುವುದನ್ನು ನಿಲ್ಲಿಸಿದ್ದಾರೆ.

ಲೇಖಕನೊಬ್ಬನಿಂದ ಮಾತು ಕಸಿದು ಬಾಯಿ ಬಂದ್ ಮಾಡಲಾಗಿದೆ. ಸೆನ್ಸಾರ್ ವಿಧಿಸುವುದು ಸರ್ಕಾರಗಳು ಮಾತ್ರ ಎಂದು ಯಾರು ಹೇಳಿದ್ದು?

■ ಜಿ. ರಾಜಶೇಖರ

...ದ ರಾಜ್ಯವನ್ನು ಮರಳಿ ಗಳಿಸುವುದಕ್ಕಾಗಿ ನಡೆದ ...ಯುದ್ಧದಲ್ಲಿ ನಲ್ವತ್ತು ಲಕ್ಷ ಯೋಧರು, ಎಂಟು ...ಥ- ಸಾರಥಿಗಳು, ಮುವ್ವತ್ತು ಲಕ್ಷ ಸಹಾಯಕರು, ...ಟ್ಟು ಲಕ್ಷ ಆನೆ ಹದಿನಾರು ಲಕ್ಷ ಕುದುರೆಗಳು ... ಒಟ್ಟು ಒಂದು ಕೋಟಿ ಜೀವಗಳ ...ಹೋಮ ಕೇವಲ ಹದಿನೆಂಟು ದಿನಗಳಲ್ಲಿ ...ದಲ್ಲಿ ನಡೆಯಿತು. ಇದಕ್ಕೆ ಯುಧಿಷ್ಠಿರ ಮತ್ತು ... ಯಾಕೆ ಯಾರೂ ಅಪರಾಧಿ ಸ್ಥಾನದಲ್ಲಿ ...ಲ್ಲ?

...ವಿಸ್ತಾರಕ್ಕಾಗಿ ಸಾಮ್ರಾಟ್ ಅಶೋಕ, ಚಂದ್ರಗುಪ್ತ ...ಹರ್ಷವರ್ಧನ, ರಾಜರಾಜ ಚೋಳ ಮಾಡಿದ ...ಗಳು ಕಾಣಿಸುವುದಿಲ್ಲವೇ?

... ಕನ್ನಡ ವಿರೋಧಿಯಾಗಿದ್ದ ಎಂದು ...ಲಾಗುತ್ತಿದೆ. ಹಾಗಾದರೆ ಭಾರತದ ಈಗಿನ ಕೇಂದ್ರ ...ಹಿಂದಿ ಭಾಷೆಯನ್ನು ನಮ್ಮ ಮೇಲೆ ...ವುದು ಈಗಿನ ಭಾರತ ಸರಕಾರದ ಕನ್ನಡ ...ನೀತಿಯಲ್ಲವೇ? ಆರ್ಯರಿಗೆ ಬಲಿ ಚಕ್ರವರ್ತಿ ...ಆ ದ್ರಾವಿಡರಿಗೆ ಅವನು ಮಹಾ ಸಾತ್ವಿಕ ರಾಜ. ...ವರ್ಷ ಮರುದಿನ ಅವನನ್ನು ಕರಾವಳಿಯ ... ತಮ್ಮ ಮನೆಗೆ ಕರೆಯುತ್ತಾರೆ. ಹೀಗೆ ...ಹಾಸಿಕ ಸಂಗತಿಗಳೂ ನೋಡುವವರ ವಿವಿಧ ..., ಅನುಗುಣವಾಗಿಯೇ ಬೇರೆಬೇರೆಯಾಗಿ

...ಗೆ ದೇವರಾಗಿರುವವನು ಮತ್ತೆ ಕೆಲವರಿಗೆ ...ಕಾಣುತ್ತಾನೆ. ಕಷ್ಟ ಕೆಲವರಿಗೆ ದೇವರಾಗಿ ಕಂಡರೆ ...ಅವನು ... ಕಾಣುತ್ತಾನೆ. ಕೆಲವರಿಗೆ ...ರುವವನು ಇನ್ನು ಕೆಲವರಿಗೆ ವಿಲನ್ ಆಗಿ ...ಒಂದು ದೇಶದ ಉಗ್ರವಾದಿಗಳು ...ದೇಶಕ್ಕೆ ಸ್ವಾತಂತ್ರ್ಯ ಹೋರಾಟಗಾರರಾಗಿ ... ನಾಗರಿಕ ಜಗತ್ತಿನ ಇತಿಹಾಸದ ...

- ... ಮಂಗಳೂರು

ಅವರ ದೇವರು

ಮಾನವೀಯ ಮಹಾಪುರುಷರುಗಳಿಗೆಲ್ಲ
ಬಲ್ಲಿರಾ ಸಹಜ ಸಾಯಲು ಬಿಟ್ಟದ್ದೆ ಇಲ್ಲ
ಕ್ರೌರ್ಯವೇ ಮೈವೆತ್ತ ಅಮಾನುಷರವರು
ಖಂಡಿತವು ಅಂತವನೇ ಅವರ ದೇವರು

ಸತ್ಯ ಅಹಿಂಸೆ

ಹಿಟ್ಲರನ ಶಿಷ್ಯರಿಗೆ ಅಹಿಂಸೆ ಸತ್ಯ
ಎಂದಿಗೂ ಆಗುವುದು ಉಂಟೇನು ಪಥ್ಯ?
ಕನಸಲ್ಲೂ ಮನಸಲ್ಲೂ ಹಿಂಸೆ ತುಂಬಿರಲು
ಸತ್ಯಕ್ಕೆ ಇನ್ನೆಂತು ಬಾಗೀತು ಕೊರಳು?

ಶೈಕ್ಷಣಿಕ ಕ್ಷೇತ್ರ

ಈ ಇಡಿಯ ಶೈಕ್ಷಣಿಕ ಕ್ಷೇತ್ರವನು ಇಂದೆ
ಸಂಕುಚಿತ ಮನುಸುಗಳ ಮುಷ್ಟಿಯಲಿ ಕಂಡೆ
ಮಂತ್ರಿ ಯಾರೇ ಇರಲಿ ತಂತ್ರಿಗಳು ಗೊತ್ತೆ?
ಇವರೇನೆ ಬಲ್ಲಿರಾ ಆಗಿಹುದು ಪತ್ತೆ

ನಿಮ್ಮ ಮುಕುಂದ

ಬಾಲ ಅಭಿಮನ್ಯುವಿನ ಮರಣಕ್ಕೆ ಕಾರಣ
ಆ ನಿಮ್ಮ ನಂಬಿಕೆಯ ಸಂಕಟ ಹರಣ
ಸ್ವಂತ ತಂಗಿಯ ಮಗನ ಕಪಟದಲಿ ಕೊಂದ
ಸಾಹಸಿ, ಹೊಣೆಗಾರ ನಿಮ್ಮ ಮುಕುಂದ

ಬೊಗಳೆ ಮಾಧ್ಯಮ

ಬೊಗಳೆ ಮಾಧ್ಯಮಗಳ ಸಾಕಿಟ್ಟುಕೊಂಡು
ಕಪಟಗಳು ಪ್ರಚಾರ ಪಡೆಯುವರು ಇಂದು
ಆ ಬೊಗಳೆ ಈ ರಗಳೆ ಮಾತಾಡಿ ಕೂಡಿ
ನಕಲಿ ಸರಕುಗಳನ್ನು ಮಾರುವರು ನೋಡಿ

ಪ್ರಬಲ ಅಸ್ತ್ರ

ಮೂಢನಂಬಿಕೆ ನೋಡಿ ಆಳುವವರಿಗೆ
ಪ್ರಬಲವಾದ ಅಸ್ತ್ರ ಗೊತ್ತೇನು ನಿಮಗೆ!
ಸೇನಾ ತುಕಡಿಯಿಂದಲೂ ಆಗದಿಹ ಕೆಲಸ
ಮೌಢ್ಯತೆಯ ಮಾಡುತ್ತ ಬಂದಿಹುದು ದಿವಸ

ಗತಕಾಲದಲ್ಲಿ

ಅವರೇನೆ ರಾಜರು ಅವರೇನೆ ಕಚೇರಿ
ಅವರು ತೋರಿದ್ದೇನೆ ಆಗಿತ್ತು ದಾರಿ
ಬದಲಾಗಿ ಕಂಡರೂ ಈ ಹೊತ್ತು ಕೇಳಿ
ದುಡಿವವರ ಆತಂಕ ಕಳೆದಿದೆಯೆ ಹೇಳಿ?

ಇತಿಹಾಸ ಸತ್ಯ

ಅಮಾನುಷತೆ ವಿರುದ್ಧ ಹೋರಾಟ ಮಾಡಿ
ಹುತಾತ್ಮರಾದವರೇ ಬಹುಮಂದಿ ನೋಡಿ
...
...

ಇತಿಹಾಸ ಹೇಳುತ್ತದೆ

ಅನೈತಿಕತೆ ವಿರುದ್ಧ ಪ್ರಶ್ನೆಯನು ಕೇಳಿ
ನಿಮ್ಮ ಮೇಲೆಯೇ ಅವರು ಮಾಡುವರು ದಾಳಿ
ಉತ್ತರವು ಹೊಳೆಯದೇ ಏರುವುದು ಸಿಟ್ಟು
ಇದು ಕ್ರೌರ್ಯ ಪ್ರತಿಪಾದಕ ಒಳಗುಟ್ಟು

ನಕಲಿ

ಎಲ್ಲುಂಟು ಹೇಳಿರೋ ದಯಮಾಡಿ ಅಸಲಿ!
ಜೀವ ರಕ್ಷಕವಾದ ಔಷಧವೂ ನಕಲಿ
ಈ ಆಧಾರದಿಂದ ಆಡಳಿತ ಕೇಳಿ
ನಕಲಿಯೆಂದು ಹೇಳಿದರೆ ತಪ್ಪೇನು ಹೇಳಿ?

ಸರ್ವೋಚ್ಚ

ಎಲ್ಲಿಯೇ ಸರ್ವೋಚ್ಚ ಬರುದಿರುವಲ್ಲಿ
ಸರ್ವೋಚ್ಚ ನೀತಿಯೂ ಅಗತ್ಯ ಅಲ್ಲಿ
ಈ ಬಿರುದು ಕಾಯ್ದುಕೊಳ್ಳಲಾಗದಿರೆ ಕೇಳಿ
ಹಾಸ್ಯಾಸ್ಪದವಲ್ಲವೇ ಬಲ್ಲವರು ಹೇಳಿ?

ತಲೆತಲಾಂತರದ ಚಾಳಿ

ಸುಜ್ಞಾನ ಬಚ್ಚಿಟ್ಟು ಕುಜ್ಞಾನಿಗಳು ಕೇಳಿ
...ಜ್ಞಾನಿಗಳ ಮೇಲೆ ಇಡುತಿಹರು ದಾಳಿ
ಇಂತವರು ಮಾನವರೋ ಅಮಾನುಷರೋ ಹೇಳಿ?
ತಲೆತಲಾಂತರದೋ ಈ ನೀಚ ಚಾಳಿ

■ ವಿಡಂಬಾರಿ

ಆ ವಿಳಾಸ ನಿನಗೆ ಮಾತ್ರ ತಿಳಿದಿರಬಹುದು

1

ಪ್ರೀತಿಯ ಅಂಚೆಯಣ್ಣ,

ಅಡ್ರೆಸ್ ಇಲ್ಲದ ಈ ಪತ್ರಕ್ಕೆ ಖಂಡಿತಾ ಕಸದಬುಟ್ಟಿಯೇ ಗತಿ ಎನ್ನುವುದು ನನಗೆ ಗೊತ್ತಿತ್ತು, ಆದರೆ ಕುತೂಹಲವೋ-ಕೆಟ್ಟ ಕುತೂಹಲವೋ ಯಾವುದೋ ಒಂದು ಕಾರಣಕ್ಕೆ ನೀನು ಇದನ್ನು ಒಡೆದಿದ್ದಕ್ಕೆ ತುಂಬಾ ಥ್ಯಾಂಕ್ಸ್. ಮತ್ತೊಬ್ಬರ ಕಾಗದ ಓದುವುದು ತಪ್ಪಿರಬಹುದು. ಆದರೆ ನೀನು ಮಾಡಿರುವ ಈ ತಪ್ಪು ನಿಜಕ್ಕೂ ನನ್ನ ಪಾಲಿಗೆ ದೊಡ್ಡ ಉಪಕಾರ. ಯಾವುದೋ ಪ್ರೇಮಿ/ ಹುಡುಗಿ ಅಥವಾ ಕೋಟ್ಯಾಧೀಶ್ವರನ ಕಾಗದ ಇರಬಹುದೆಂದು ಭ್ರಮಿಸಿ, ಯಾವುದೋ ಧಾರಾವಾಹಿ/ಸಿನಿಮಾ ದೃಶ್ಯ ಕಲ್ಪಿಸಿಕೊಂಡು ನೀನು ಕಾಗದ ಒಡೆದಿದ್ದರೆ, ನಿನಗೆ ಆಗಿರುವ ನಿರಾಸೆಗೆ ಕ್ಷಮೆ ಕೋರುತ್ತೇನೆ. ಮನುಷ್ಯನೊಬ್ಬ ಮತ್ತೊಬ್ಬರ ಬದುಕಿನಲ್ಲಿ ನಿರೀಕ್ಷಿಸುವ ರೋಮಾಂಚನಗಳು ಯಾವುದೂ ಇಲ್ಲಿಲ್ಲ, ಜತೆಗೆ ಸುದೀರ್ಘವಾದ ಪತ್ರ. ಬೋರು ಹೊಡೆಸಿದರೂ ದಯವಿಟ್ಟು ಓದು. ನಿನ್ನ ಈ ಉಪಕಾರವನ್ನು ನಾನೆಂದೂ ಮರೆಯಲಾರೆ.

2


ನಾನು ಈ ಪತ್ರ ಬರೆದಿಟ್ಟು ಹಲವು ವಾರಗಳಾಗಿವೆ. ಆದರೆ ಯಾರಿಗೆ ಕಳುಹಿಸಬೇಕೆಂಬುದೇ ತೋಚದೆ ಹಾಗೇ ಬಿಟ್ಟಿದ್ದೆ. ಕೊನೆಗೂ ನನಗೆ ಸರಿಯಾದ ವಿಳಾಸದಾರರು ಸಿಗಲಿಲ್ಲ.

ಹಾಗಾಗಿ ವಿಳಾಸ ಬರೆಯದೇ ಹಾಗೇ ಅಂಚೆ ಡಬ್ಬಿಗೆ ಹಾಕಿದ್ದೇನೆ. ನೀನಾದರೂ ದಿನಾ ನೂರಾರು ಕಾಗದಗಳನ್ನು ಬಟಾವಾಡೆ ಮಾಡುತ್ತಿ, ಪತ್ರಗಳಲ್ಲಿ ಏನು ಬರೆದಿರುತ್ತಾರೆ ಅನ್ನುವುದು ನಿನಗೆ ತಿಳಿಯುವುದಿಲ್ಲವಾದರೂ, ವಿಳಾಸದಾರರ ಬಗ್ಗೆ ಖಂಡಿತಾ ನಿನಗೆ ಒಂದಿಷ್ಟು ಮಾಹಿತಿ ಇದ್ದೇ ಇರುತ್ತದೆ. ಹಾಗಾಗಿ, ಈ ಪತ್ರ ಯಾರಿಗೆ ಸೇರಬೇಕೆಂಬುದು ನಿರ್ಣಯಿಸಲು ನೀನೇ ಸೂಕ್ತ ಎನ್ನುವ ವಿಶ್ವಾಸದೊಂದಿಗೆ ವಿಳಾಸದ ಜಾಗವನ್ನು ಖಾಲಿ ಬಿಟ್ಟು ಅಂಚೆ ಡಬ್ಬಿಯೊಳಗೆ ಹಾಕುತ್ತಿದ್ದೇನೆ. ನೀನು ಅವಸರದಲ್ಲಿ ಇದನ್ನು ಕಸದಬುಟ್ಟಿಗೆ ಹಾಕಿದ್ದರೆ ಪತ್ರ ಬರೆಯಲು ನಾನು ಪಟ್ಟಿದ್ದ ಶ್ರಮವೆಲ್ಲಾ ಹಾಳಾಗುತ್ತಿತ್ತು, ಆದರೆ ಹಾಗಾಗಲಿಲ್ಲ, ನಿನ್ನೊಳಗಿನ ಮನುಷ್ಯ ಸಹಜ ಕುತೂಹಲ ಈ ಪತ್ರಕ್ಕೆ ಜೀವ ಕೊಟ್ಟಿದೆ. ಅಷ್ಟರ ಮಟ್ಟಿಗೆ ನಾನು ನಿನಗೆ ಕೃತಜ್ಞ.

3

ಬದುಕಿನ ಮಧ್ಯ ಘಟ್ಟವನ್ನು ಕಳೆದು ಸರ್ಕಾರಿ ಲೆಕ್ಕಾಚಾರದ ಪ್ರಕಾರ ನಿವೃತ್ತಿಯ ಅಂಚನ್ನು ತಲುಪಿರುವ ವ್ಯಕ್ತಿ ನಾನು. ಇನ್ನೇನು ನಾಲ್ಕಾರು ವರ್ಷ ಕಳೆದರೆ ಈ ಜೀವನ ಯಾತ್ರೆ ಮುಗಿಯಬಹುದು ಅನ್ನುವ ಲೆಕ್ಕಾಚಾರ ನನ್ನದು. ಮನೆಗೆ ಮಗನಾಗಲಿಲ್ಲ ಎನ್ನುವ ರೀತಿಯಲ್ಲಿ ಬೆಳೆದವ ನಾನು. ಒಂದಿಷ್ಟು ಉಡಾಫೆ, ಉಢಾಳತನ, ಇವುಗಳಿಗೆ ಕಿರೀಟ ಸದೃಶವಾಗಿ ಬೇಜವಾಬ್ದಾರಿಯಂತಹ ಎಲ್ಲಾ ಗುಣಗಳನ್ನು ಮೈಗೂಡಿಸಿಕೊಂಡು ಬದುಕನ್ನು ಈವರೆಗೆ ವ್ಯರ್ಥ ಮಾಡಿಕೊಂಡವ ನಾನು. ಬಾಲ್ಯದಲ್ಲಿ ಶಾಲೆಗೆ ಹೋಗಲಿಲ್ಲ, ವಯಸ್ಸಿನಲ್ಲಿ ಮದುವೆಯಾ ಗಲಿಲ್ಲ..ಹೀಗೆ ಸಾಗುತ್ತದೆ ನನ್ನ ಪ್ರವರ. ಎಲ್ಲವೂ ಹೀಗೆಯೇ ಸಾಗಿದ್ದರೆ ನಾನು ಇಷ್ಟು ತಲೆಕೆಡಿಸಿಕೊಂಡು ಈ ಪತ್ರ ಬರೆಯುತ್ತಲೇ ಇರಲಿಲ್ಲ, ಆದರೆ ಬದುಕಿನ ಕೊನೆಯ ತಿರುವು ಎಂದು ನಾನೇ ಕಲ್ಪಿಸಿಕೊಂಡಿರುವ ಈ ಸನ್ನಿವೇಶದಲ್ಲಿ ನನಗೊಂದು ನೆರವು ಬೇಕಿದೆ. ನನ್ನ ಹಿನ್ನೆಲೆ ತಿಳಿದವರು ಖಂಡಿತಾ ನನಗೆ ಸಹಾಯ ಮಾಡಲಾರರು.

ಹೀಗಾಗಿ ನಾನು ನೆರವು ನಿರೀಕ್ಷಿಸುವುದು ಯಾರಾದರೂ ಅಜ್ಞಾತವ್ಯಕ್ತಿಯಿಂದ. ಅಂತಹ ಅಜ್ಞಾತರು ನನಗೆ ಯಾರೂ ತಿಳಿದಿಲ್ಲ, ಹೀಗಾಗಿ, ನನ್ನ ಕೊನೆಯ ಪ್ರಯತ್ನ ಎಂಬಂತೆ ನಾನು ಕಾಗದವನ್ನು ಪೋಸ್ಟ್ ಮಾಡಿದ್ದೇನೆ. ನಿನಗೆ ಸರಿಯಾದ ವಿಳಾಸದಾರರು ಯಾರಾದರೂ ಗೊತ್ತಿದ್ದಲ್ಲಿ ದಯವಿಟ್ಟು ಇದನ್ನು ಅವರಿಗೆ ಪೋಸ್ಟ್ ಮಾಡು. ನನ್ನ ವಿಳಾಸ ಪತ್ರದ ಕೊನೆಯಲ್ಲಿದೆ...



ಕತೆ

ಪ್ರೀನಿ ಎಂ

4

ಎರಡು ವರ್ಷಗಳ ಹಿಂದಿನವರೆಗೆ ನನ್ನ ಜೀವನ ಚೆನ್ನಾಗೇ (!) ಸಾಗುತ್ತಿತ್ತು, ಯಾವುದೇ ಜವಾಬ್ದಾರಿಗಳಿಲ್ಲ ದಿದ್ದರಿಂದ ಹೆಚ್ಚು ಖರ್ಚಿರಲಿಲ್ಲ, ಊರಿನ ತಂಟೆ-ತಕರಾರು ಪರಿಹಾರ, ಮಧ್ಯಸ್ಥಿಕೆ ಕೊನೆಗೆ ನೆಂಟಸ್ತಿಕೆ ಅಂತಾ ಒಂದಿಷ್ಟು ಹಣ ಕೈ ಸೇರುತ್ತಿತ್ತು, ಯಾವುದೇ ದಿಕ್ಕುದೆಸೆಗಳಿಲ್ಲದ ಸ್ವಚ್ಛಂದ ಬದುಕು. ಸಾಗಿದ್ದೇ ದಾರಿ, ಉಳಿದದ್ದೇ ಊರು. ಮನೆ-ಸಂಸಾರಗಳ ತಾಪತ್ರಯ ಇರದಿದ್ದರಿಂದ ಆರಾಮವಾಗೇ ಇದ್ದೆ. ಎಲ್ಲರ ಬದುಕಿನಲ್ಲಿ ಹಲವು ತಿರುವುಗಳು ಎದುರಾಗುತ್ತವೆ; ನಾಟಕೀಯ ಬದಲಾವಣೆಗಳಾಗುತ್ತದೆ. ಆದರೆ ನನ್ನ ಬದುಕಿನಲ್ಲಿ ಇಂತಹ ಯಾವುದೇ ತಿರುವುಗಳು ಎದುರಾಗಲಿಲ್ಲ, ಹೀಗಾಗಿ ಬದುಕು ಈವರೆಗೆ ತುಂಬಾ ನೇರಾನೇರ. ಎಷ್ಟು ನೇರವಾಗಿತ್ತೆಂದರೆ ನನಗೆ ಕೂಡಾ ಬೇಸರ ತರಿಸುವಷ್ಟು.

ಯೌವ್ವನದಲ್ಲಿ ಮನ ನಾಟಕೀಯತೆಗಳಿಗೆ ಹಂಬಲಿಸುತ್ತಿತ್ತು, ಆದರೆ ಅನಿರೀಕ್ಷಿತವಾದದ್ದು ಏನೂ ಘಟಿಸಲಿಲ್ಲ, ಹೀಗಾಗಿ ಅದರ ಬಗ್ಗೆ ಯೋಚಿಸುವುದನ್ನೇ ಬಿಟ್ಟಿದ್ದೆ. ಆದರೆ ಇನ್ನೇನೂ ಬದುಕಿನ ಕೊನೆಯ ಹಂತಕ್ಕೆ ನಾನು ಹೆಜ್ಜೆ ಇಡುತ್ತಿದ್ದೇನೆ ಎಂದೆಣಿಸುವ ವೇಳೆಗೆ ನಾನು ನಿರೀಕ್ಷಿಸಿದೆ ಇದ್ದ ಜತೆಗೆ ಬಯಸದೇ ಇದ್ದ ತಿರುವು ದೊರೆತಿದೆ.

5

ಸುಮಾರು ಎರಡು ವರ್ಷಗಳ ಹಿಂದಿರಬೇಕು. ಎಂದಿನಂತೆ ಆ ಸಂಜೆ ಕೂಡಾ ರೈಲು ನಿಲ್ದಾಣಕ್ಕೆ ಬಂದಿದ್ದೆ. ಒಂದಿಷ್ಟು ಸಂಜೆ ವಾಕ್ ಜತೆಗೆ ವೇಗವಾಗಿ ನಗರಕ್ಕೆ ಧಾವಿಸುವ ರೈಲುಗಳನ್ನು ನೋಡುವ ಅದೇನೋ ಕುತೂಹಲ. ಎಲ್ಲಿಂದಲೋ ಬರುವ ನೂರಾರು ಜನ, ಅವರ ಪಡಿಪಾಟಲು, ಜತೆಗೆ ತಮ್ಮ ಜತೆಗೆ ಅವರು ಕಟ್ಟಿಕೊಂಡು ಬಂದಿರುವ ಆಶಾಗೋಪು... ಕಲ್ಪಿಸಿಕೊಳ್ಳುವುದರಲ್ಲಿ ನನಗೆ ಏನೋ ಒಂದು ವಿಚಿತ್ರ ಸು... ಬರುತ್ತಿದ್ದರಿಂದ, ಒಂದೆರಡು ಕಾನ್ ಸ್ಟೇಬಲ್-ಸೆಕ್ಯೂರಿಟಿ ಗಾರ್ಡ್‌ಗಳ... ಇತ್ತು, ಎಂದಿ ನಂತೆ ಅಂದು ಕೂಡಾ ಪ್ಲ್ಯಾಟ್‌ಫಾರಂನಲ್ಲಿ ಸುಮ್ಮನೆ...

ಸುಮಾರು ಹತ್ತು ನಿಮಿಷ ಕಳೆದಿರಬೇಕು. ಒಬ್ಬ ಕಾನ್‌ಸ್ಟೇಬ... ಕರೆದ ಹಾಗಾಯಿತು. ನನ್ನ ಹೆಸರು ಗೊತ್ತಿಲ್ಲದ ಕಾರಣದಿಂದ ಬ... ಓಯ್ ಅನ್ನುವುದಷ್ಟೇ ಕೇಳುತ್ತಿತ್ತು, ಅವಸತ್ತ ತೆರಳಿದೆ. ರೈಲು... ಹೊರಗೆ ಆಂಬ್ಯುಲೆನ್ಸ್ ಒಂದು ನಿಂತಿತ್ತು, ಮಹಿಳೆಯೊಬ್ಬಳು ರೈಲಿನಲ್ಲಿ... ಆವಳನ್ನು ಆಸ್ಪತ್ರೆಗೆ ದಾಖಲಿಸಬೇಕು. ಸ್ಟಾಫ್ ಯಾರೂ ಇಲ್ಲ... ನಿಮಿಷ ಬನ್ನಿ ಎಂದ. ಮರುಮಾತನಾಡದೆ ಆಂಬೂಲೆನ್ಸ್ ಹತ್ತಿ... ಕೂಡಾ ನಾನೇ ರೋಗಿಯ ಪರವಾಗಿ ಸಹಿ ಮಾಡಬೇಕಾಯಿತು... ಸಮಾಜಸೇವೆ ಅನ್ನುವ ಗುಂಗಿನಲ್ಲಿ ಎಲ್ಲಾ ಪ್ರಕ್ರಿಯೆ ಮುಗಿಸಿ ಮನೆಗೆ...

6

ಒಂದು ವಾರ ಕಳೆದಿರಬಹುದು.. ಆಸ್ಪತ್ರೆಯಿಂದ ಫೋನ್ ಕರೆ... ತಾಯಿ ತೀರಿಕೊಂಡಿದ್ದಾಳೆ. ಮಗುವಿನ ಜವಾಬ್ದಾರಿ ತೆಗೆದುಕೊ... ಸೂಚಿಸಲಾಗಿತ್ತು, ನಾನು ಆ ತಾಯಿ-ಮಗುವಿನ ಸಂಬಂಧಿ ಅಲ್ಲ... ಹೇಳಿದರೂ ಅವರು ನನ್ನ ಮಾತನ್ನು ನಂಬಲು ತಯಾರಿರಲಿಲ್ಲ... ಒಂದಿಷ್ಟು ವಾದ-ವಿವಾದದ ಬಳಿಕ, ಸರ್ಕಾರದ ಯಾವುದೋ ... ಮಗುವನ್ನು ಸುಪರ್ದಿಗೆ ಪಡೆಯಿತು. ಮಕ್ಕಳ ಕೇಂದ್ರಕ್ಕೆ ಮಗುವನ್ನು ಕ... ಆದರೆ ಇಷ್ಟು ಹೊತ್ತಿಗಾಗಲೇ ಆ ಮಗು ನನ್ನನ್ನು ಪೂ... ಆವರಿಸಿಕೊಂಡಿತ್ತು, ನೋಡಿಕೊಳ್ಳಲು ಸಾಧ್ಯವಿಲ್ಲವಾದರೂ ಆ ... ಯೋಗಕ್ಷೇಮಕ್ಕೆ ಏನೂ ತೊಂದರೆಯಾಗದಂತೆ ಗಮನ ನೀಡಬೇ... ಭಾವನೆ ನನ್ನಲ್ಲಿ ಮೂಡಿತ್ತು, ಮಗುವಿನೆಡೆಗಿನ ತುಡಿತ ನಾನ... ಅನಾಥಾಶ್ರಮದತ್ತ ಹೆಜ್ಜೆ ಇಡುವಂತೆ ಮಾಡಿತ್ತು! ನನ್ನ ಖ... ಉಳಿದ ಹಣದಲ್ಲಿ ಮಗುವಿಗೆ ಒಂದಿಷ್ಟು ಏನಾದ್ರೂ ತೆಗೆದುಕೊ... ಮಗು ಕೂಡಾ ನನ್ನನ್ನು ಸಾಕಷ್ಟು ಹಚ್ಚಿಕೊಂಡಿತ್ತು, ಉಳಿದ ಮಕ್ಕ... ಸಂಬಂಧಿ ತನಗೆ ಇದ್ದಾರೆ ಅನ್ನುವ ಕಾರಣಕ್ಕೋ ಏನೋ ಆ ... ಹೆಚ್ಚು ಖುಷಿಯಾಗೇ ಇತ್ತು, ನನಗೂ ಅಷ್ಟೇ ಬರಬರುತ್ತಾ ಆ ... ದಿನಾ ನೋಡದೆ ಇರಲು ಸಾಧ್ಯವೇ ಇಲ್ಲ ಅನ್ನುವ ಹಾಗಾಯಿತು...

7

ಪ್ರೀತಿಯ ಅಂಚೆಯಣ್ಣ

ಆ ಮಗುವಿಗೆ ಈಗ ಎರಡು ವರ್ಷ. ಅಮ್ಮ, ಅಪ್ಪಾ ಅಂತ... ತುಂಬಾ ಕರೆಯುತ್ತಿದೆ. ಹೆಜ್ಜೆ ಹೆಜ್ಜೆ ಇಟ್ಟು ಓಡಾಡಲು ಕಲಿ... ಸಿಕ್ಕಿದ್ದೆಲ್ಲವನ್ನೂ ಬಾಯಿಗೆ ಹಾಕಿಕೊಳ್ಳುತ್ತಿದೆ.

ಈಗ ಆ ಮಗುವಿಗೊಂದು ಅಮ್ಮ ಬೇಕಾಗಿದ್ದಾಳೆ. ಅಪ್ಪ ಇ... ಚಿನ್ನ. ಓಡಾಡಲು ಮನೆಯೆಂಬು ದೊಂದಿದ್ದರೆ ಅದು ಖಂಡಿತಾ ... ಖುಷಿ ಪಡ ಬಹುದು. ನಾನು ಆ ಮಗುವನ್ನು ಈಗ ದಿನಾ ... ತ್ತಿದ್ದೇನೆ. ಆಕೆ ಏನೋ ಹುಡುಕಾಡುತ್ತಿದ್ದಾಳೆ. ನಾನು ಆ ಯಾವುದೇ ... ವಹಿಸುವ ಅರ್ಹತೆ ಹೊಂದಿಲ್ಲ.

ಆಕೆಗಾಗಿ ಅವರನ್ನೆಲ್ಲಾ ಹುಡುಕಾಡುತ್ತಿದ್ದೇನೆ.

ಆದರೆ ನಿನಗೆ ಆಕೆ ಹುಡುಕಾಡುವ ಸಂಬಂಧಗಳ ವಿಳಾಸ ಗೊತ್ತಿ...

ನಿನ್ನ ಪ್ರತಿಕ್ರಿಯೆಗಾಗಿ ಕಾಯುತ್ತಿದ್ದೇನೆ.

ನಮ್ಮ ಈರಣ್ಣ ಇನ್ನಿಲ್ಲ...

ಕಟ್ಟೆ ಪುರಾಣ ನಾಟಕದಲ್ಲಿ ಸೀರನ ಪಾತ್ರ ನೋಡಿದವರು ಈರಣ್ಣ ಬೆಳ್ಳುಳ್ಳಿಯನ್ನು ಮರೆತಿರಲಾರರು. ಹುಟ್ಟು ಕಲಾವಿದನಾದ ಈರಣ್ಣ ಬೆಳ್ಳುಳ್ಳಿಗೆ ಯಾವುದೇ ಪಾತ್ರ ಕೊಟ್ಟರೂ ಲೀಲಾಜಾಲವಾಗಿ ಮಾಡಿಬಿಡುತ್ತಿದ್ದ. ಆತನ ಅಭಿನಯ ನೋಡಿ ಮೆಚ್ಚಿಕೊಂಡವರು ಟಿ.ವಿ. ಧಾರಾವಾಹಿಗಳಿಗೂ ಆಯ್ಕೆ ಮಾಡಿಕೊಂಡರು.



ಟಿವಿ ಧಾರಾವಾಹಿಗಳಲ್ಲಿ ಅಭಿನಯಿಸುವಾಗ ಕುಡಿತದ ಅಭ್ಯಾಸವನ್ನು ಜಾಸ್ತಿ ಮಾಡಿಕೊಂಡಿದ್ದ. ಆದರೂ ನಿರ್ದೇಶಕರುಗಳಿಗೆ ಎಂದೂ ತೊಂದರೆ ಕೊಟ್ಟವನಲ್ಲ, ಎರಡು ಹೆಣ್ಣುಮಕ್ಕಳ ತಂದೆಯಾಗಿದ್ದ ಈರಣ್ಣ ತನ್ನ ಜವಾಬ್ದಾರಿ ಅರಿತವನಂತೆ ಇದ್ದಕ್ಕಿದ್ದಂತೆ ಕುಡಿಯುವುದನ್ನು ಬಿಟ್ಟು ಮನೆಯವರ ಭಾಗಕ್ಕೆ ಒಳ್ಳೆಯ ಗಂಡ ಮತ್ತು ತಂದೆಯಾಗಿ ಮೆಚ್ಚುಗೆ ಗಳಿಸಿದ. ಆದರೆ ಒಳ್ಳೆಯ ವನಾಗಿ ಬಹಳ ದಿನ ಇರಲಾಗಲಿಲ್ಲ,

ಇದೇ 19ರಂದು ನಡೆಯಲಿದ್ದ ಮಗಳ ಮದುವೆಗಾಗಿ ಓಡಾಡುತ್ತಿದ್ದ ಈರಣ್ಣ ಇದ್ದಕ್ಕಿದ್ದಂತೆ ಲೊಬಿಪಿಗೆ ತುತ್ತಾಗಿ ನಮ್ಮ ಟೀಮಿನಿಂದ ಮರೆಯಾಗಿ ಹೋದ. ಆತನನ್ನು ನೆನೆಸಿಕೊಂಡರೆ ತಮಾಷೆಯ ಸಂಗತಿಗಳೇ ಕಣ್ಮುಂದೆ ಬರುತ್ತವೆ.

ಬೆಂಗಳೂರಲ್ಲಿ ಕಟ್ಟೆ ಪುರಾಣ ನಾಟಕವಾದಾಗ ಗೌರಿ ಲಂಕೇಶ್ ಪ್ರೆಸ್‌ಕ್ಲಬ್‌ನಲ್ಲಿ ನಮ್ಮ ತಂಡಕ್ಕೆ ಪಾರ್ಟಿ ಕೊಟ್ಟರು. ಆಗ ನಮ್ಮ ಜೊತೆಯಲ್ಲಿ ಕುಳಿತಿದ್ದ ಈರಣ್ಣ ಬೆಳ್ಳುಳ್ಳಿ ಆಗಲೇ ಬೆಕ್ಕಿನಂತೆ ಕಣ್ಣುಬಿಟ್ಟುಕೊಂಡು ನಮ್ಮನ್ನು ಗಂಭೀರವಾಗಿ ನೋಡುತ್ತಿದ್ದ, ಇಷ್ಟು ಬೇಗ ಇದೇಕೆ ಹಿಂಗಾದ ಎಂದು ನಾನು ಗಮನಿಸಿದಾಗ ನಾವು ಮಾತಿನ ಖುಷಿಯಲ್ಲಿ ನಮ್ಮ ಗ್ಲಾಸುಗಳನ್ನು ನೋಡಿಕೊಂಡಿರಲಿಲ್ಲ, ಈರಣ್ಣ ತನ್ನ ಗ್ಲಾಸಿನ ಜೊತೆಗೆ ಅಕ್ಕಪಕ್ಕದವರ ಅಂತರವನ್ನೂ ಹೀರಿಕೊಂಡು ಕುಳಿತಿದ್ದ. ಅಂತಹ ಅದ್ಭುತ ಕಲಾವಿದ ಆತ.

ಏಣಗಿ ನಟರಾಜ್ ಮತ್ತು ಧ್ರುವರಾಜ್ ದೇಶಪಾಂಡೆ ಕೂಡ ರಂಗಭೂಮಿಯ ಅದ್ಭುತ ಕಲಾವಿದರಾಗಿದ್ದರು. ಆದರೆ ಕುಡಿತ ಅವರನ್ನೂ ಬಿಡಲಿಲ್ಲ. ಇವೆಲ್ಲಾ ರಂಗಭೂಮಿಗೆ ಸಂಬಂಧಿಸಿದ ನಷ್ಟಗಳು. ನಾವು ಕುಡಿತಬಿಟ್ಟರೂ ಅದು ನಮ್ಮನ್ನ ಬಿಡದೆ ತೆಗೆದುಕೊಂಡು ಹೋಗುತ್ತಿರುವುದೊಂದು ವಿಪರ್ಯಾಸ.

■ ಬಿ.ಚಂ.

ಯೋಗೇಶ್ ಮಾಸ್ಟರ್

ಸುಂಗಾಣದ ಹೂರಣ

ಪ್ರಕೃತಿಯಲ್ಲಿ ಪಶುಶಕ್ತಿ

ದು ನವೀನ ತಂತ್ರಜ್ಞಾನದ ಯುಗ.

ಮ್ಮ ನವೀನ ತಂತ್ರಜ್ಞಾನದಿಂದ, ನವೀನ ಾಷಣಾವೇ ಮೊದಲಾಗಿ, ಈಗಿನ ವಿಜ್ಞಾನ ಶಿಷ್ಟಾಚಾರಗಳಿಂದ ಹೊರತಾಗಿರುವಂತಹ ಗಳನ್ನು ನೋಡಿದಾಗ, "ಇಷ್ಟು ವರೆದಿರುವ ಯುಗದಲ್ಲೂ ಜನ ಅಥವಾ ವು ಹೀಗಿದೆಯಲ್ಲಾ!" ಎಂದು ದುತ್ತೇವೆ. ನಾಗರಿಕವಾಗಿ ಮುಂದುವರಿದಿರುವ ಲ್ಲಿ ಇವರ್‍ಯಾರಿಗೂ ಜೀನ್ಸ್ ಗೊತ್ತಿಲ್ಲ, ಟಿವಿ ಇನ್ನಾವುದೋ ವಿಜ್ಞಾನದ ಹೊಸ ಗಳು ಗೊತ್ತಿಲ್ಲ ಎಂದು ಅಚ್ಚರಿಪಡುತ್ತಾ, ನಾವು ಅನುಭವಿಸುತ್ತಿರುವ ವಿಷಯಗಳು ದಿರುವುದಕ್ಕೆ ಅವರನ್ನು ಹಿಂದುಳಿದವರು ಭಾವಿಸುತ್ತೇವೆ. ಹೊಸ ಆವಿಷ್ಕಾರಗಳ ಫಲ ದೇ ಇರುವವರನ್ನು ನಾಗರಿಕತೆಯ ಸೋಂಕಿಲ್ಲ ವಿಶ್ಲೇಷಿಸುವ ಪರಿಪಾಠವಿದೆ. ಆದರೆ ತೆ ಎಂದರೆ ನವೀನತೆ ಖಂಡಿತ ಅಲ್ಲ. ಜೊತೆಗೆ ಣಗೊಳ್ಳುವುದರಿಂದ ಹೊರತಾಗಿ ಒಂದು ಎಂದರೆ, ನೈಸರ್ಗಿಕ ವಿಷಯಗಳಿಗೆ ದ ರಾಜಕೀಯ ಮತ್ತು ಸಾಮಾಜಿಕ ಾರಿಕೆಗಳೇನೂ ಇಲ್ಲದೇ ಅಲ್ಯಾರೋ ದ್ದಾರೆಂದರೆ ಅವರು ಇನ್ನೂ ನೈಸರ್ಗಿಕವಾಗಿ ್ದಾರೆ ಎಂದು ಗಮನಿಸಬೇಕಾಗುತ್ತದೆ. ಗಳು ಹೆಚ್ಚು ಹೆಚ್ಚು ನಗರೀಕರಣಗೊಳ್ಳುತ್ತಿದ್ದಂತೆ, ಹೆಚ್ಚು ಹೆಚ್ಚು ಪ್ರಸ್ತುತ ಚಾಲ್ತಿಯಲ್ಲಿರುವ ಘನೆಗಳ ರಾಜಕೀಯ, ನವೀನ ಸಂಪರ್ಕ ಂತಹ ಹೊರಗಿನ ವಿದ್ಯಮಾನಗಳಿಗೆ ಳ್ಳುತ್ತಿದ್ದಂತೆ ಅವರ ಮುಗ್ಧತೆಯು ಮಾಸುತ್ತಾ ತ್ತದೆ. ಮುಗ್ಧತೆಯ ಮಾಸುವಿಕೆಯೇ ಂದ ದೂರಾಗುತ್ತಿರುವ ಮೊದಲ ಲಕ್ಷಣ.

ರ್ಗದ ಸೂಕ್ಷ್ಮ ಸಂವೇದನೆಗಳು

ತಿಯಲ್ಲಿ ಸಹಜವಾಗಿ ಇರುವಂತಹ



ಗೆ ಸೂಕ್ಷ್ಮ ಸಂವೇದನೆಗಳಿದ್ದು, ಆದರಿಂದ ಗ್ರಹಣದ ಶಕ್ತಿಯೂ ಇರುತ್ತದೆ. ನಾಗರಿಕತೆಯ ಶಿಷ್ಟಾಚಾರದ ಹೆಸರಿನಲ್ಲಿ ಸಾಮಾಜಿಕವಾಗಿ ಮೇಲೆ ವಿಷಯಗಳನ್ನು ಹೇರಿಕೊಳ್ಳುತ್ತಾ, ನಾವು ಯಾವುದೋ ಒಂದು ಸಿದ್ಧ ಕಾಸ್ಟೂ ದರಿಯಲ್ಲಿ ಪ್ರೊಜೆಕ್ಟ್ ಮಾಡಿಕೊಳ್ಳುವ ದಿಂದಾಗಿ ಪ್ರಕೃತಿಯ ಬಳುವಳಿಯಾಗಿರುವ ವಿಚಾರಗಳನ್ನು, ಸೂಕ್ಷ್ಮತೆಗಳನ್ನು ಳ್ಳುತ್ತಾ ಹೋಗುತ್ತೇವೆ. ಕಾಡುಕುರುಬರಾಗಲಿ, ಕುರುಬರಾಗಲಿ, ಅಥವಾ ಅಂತಹುದೇ ಬುಡಕಟ್ಟುಗಳು ಪ್ರಕೃತಿಗೆ ಅನ್ಯೋನ್ಯವಾಗಿ ವಾಗ ಅವರಿಗೆ ನಿಸರ್ಗವಿತ್ತಿರುವ ಸೂಕ್ಷ್ಮತೆಯ ಗಳು ಮಾಸಿರುವುದಿಲ್ಲ. ರು ತನ್ನಲ್ಲಿ ಸಹಜವಾಗಿರುವ ಭಾಷೆಯನ್ನು ್ಯ ಮೇಧಾವಂತಿಕೆಯನ್ನು, ವ್ಯಕ್ತಿತ್ವವನ್ನು ಲು ಇನ್ನಾವುದೋ ಶಿಷ್ಟಾಚಾರದ ಅಥವಾ ಕಲಿಸಿಕೊಳ್ಳುವ ಪಾಂಡಿತ್ಯದ ಭಾಷೆಯನ್ನು ಮಾಡುತ್ತಾ ಕೇಳುಗರ ಮೇಲೆ ಪ್ರಭಾವ ಯತ್ನಿಸುತ್ತಾನೋ ಅವನಲ್ಲಿ ನಿಸರ್ಗದ ಸೂಕ್ಷ್ಮ ಮುಗ್ಧತೆ ಇರುವುದಿಲ್ಲ, ಬದಲು ಹುಸಿ ದ ಮೂರ್ಖತೆ ಇರುತ್ತದೆ. ಇದೇ ಬಗೆಯಲ್ಲಿ ವಿಚಾರಗಳಲ್ಲಿ ಮನುಷ್ಯ ಹುಸಿ ಪ್ರದರ್ಶನ ಇಷ್ಟಲ್ಲೇನೋ ಒಂದು ರೀತಿಯಲ್ಲಿ ಕೊಳ್ಳಲು ಯತ್ನಿಸುವವನು ದಿನೇದಿನೇ ಲ್ಲಿ ಜೊಳ್ಳಾಗುತ್ತಾ ಬರುತ್ತಾನೆ. ಅವನು ಪೂರ್ಣವಾಗಿ ಯಾವುದೇ ಸೂಕ್ಷ್ಮವಾದ ಯಥಾರ್ಥತೆಯನ್ನು ಕಾಯ್ದುಕೊಳ್ಳಲಾಗದೇ ತನ್ನದೇ ಗುಣಧರ್ಮ, ಸ್ವಭಾವದಿಂದ, ಆ ಗುಣಸ್ವಭಾವಗಳಲ್ಲಿರುವ ಶಕ್ತಿಯಿಂದ ಸಂಪೂರ್ಣ ವಂಚಿತನಾಗುತ್ತಾನೆ.

ಸ್ವಧರ್ಮವೇ ಶ್ರೀಮಂತಿಕೆ

ನೈಸರ್ಗಿಕವಾಗಿ ಪ್ರಾಣಿಗಳಿಗೆ ಇರುವ ವಿಶೇಷತೆ ಎಂದರೆ ಅವಿನ್ನೂ ತಮ್ಮ ಸ್ವಧರ್ಮದಿಂದ ವಿಮುಖರಾಗದೇ ಇರುವುದು. ಭಗವದ್ಗೀತೆಯಲ್ಲಿ "ಸ್ವಧರ್ಮೆ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂದು ಹೇಳುವುದು ಇದನ್ನೇ. ಸ್ವಧರ್ಮವೆಂದರೆ ತನ್ನದೇ ಗುಣಸ್ವಭಾವಗಳು ಮತ್ತು ಅವುಗಳಿಗೆ ಪೂರಕವಾಗಿರುವಂತಹ ಶಕ್ತಿಗಳು, ಆ ಶಕ್ತಿಗಳು ಉಂಟುಮಾಡುವಂತಹ ಸಹಜ ತರಂಗಗಳು. ಅವುಗಳನ್ನು ಗಮನಿಸದೇ, ಗುರುತಿಸಿಕೊಳ್ಳದೇ, ಗಣಿಸದೇ ಇನ್ನಾವುದೋ ರೀತಿಯ ಗುಣಸ್ವಭಾವವನ್ನು ಅನುಕರಿಸುತ್ತಾ ಕೃತಕವಾಗುತ್ತಾ ಹೋಗುವುದರ ಬಗ್ಗೆಯೇ ಹೇಳುತ್ತಾ, ಅಂತಹ ಅನುಕರಣೆ ಹೆದರಿಕೆ ಹುಟ್ಟಿಸುವಂತಹದ್ದು ಎಂದು ಪರಧರ್ಮೋ ಭಯಾವಹಃ ಎಂಬ ಸಾಲಿನಲ್ಲಿ ಎಚ್ಚರಿಸುವುದು.

ವಿಕೋಪಗಳ ಗ್ರಹಿಸುವ ಪ್ರಾಣಿಗಳು

ಹೊನ್ನಿನ ಬಣ್ಣದ ರೆಕ್ಕೆಯ ವಾರ್‌ಬ್ಲರ್ ಹಕ್ಕಿಗಳು ತಾವಿರುವ ಸ್ಥಳಕ್ಕೆ ಚಂಡಮಾರುತವು ಬಂದು ಅಪ್ಪಳಿಸುವ ಇಪ್ಪತ್ತನಾಲ್ಕುಗಂಟೆಗಳ ಮುನ್ನವೇ ತಮ್ಮ ಸ್ಥಳವನ್ನು ತೆರವು ಮಾಡಿದವು. ಆದರೆ ಯಾವುದರ ಅರಿವೂ ಇಲ್ಲದೇ ಆ ಸ್ಥಳದಲ್ಲಿ ಮೂವತ್ತೈದು ಜನರನ್ನು ಆ ಚಂಡಮಾರುತವು ಬಲಿ ತೆಗೆದುಕೊಂಡಿತೆಂದು ಕ್ಯಾಲಿಫೋರ್ನಿಯಾದ ಬರ್ಕಲಿಯ ಹೆನ್ರಿ ಸ್ಟೆರ್ಬಿ ಯೂನಿವರ್ಸಿಟಿಯ ಸಂಶೋಧಕರ ತಂಡವು ಪ್ರಕಟಿಸಿತು.


ಹವಾಮಾನ ನಿರೀಕ್ಷಕರು ಅಥವಾ ಮೀಟಿಯೋರಾಲ ಜಿಸ್ಟ್ಸ್ ವೆದರ್ ಚಾನಲ್‌ನಲ್ಲಿ ಚಂಡಮಾರುತವು ಇಷ್ಟು ಗಂಟೆಯ ವೇಗದಲ್ಲಿ ಹೀಗೆ ಇಂಥಾ ಜಾಗದಲ್ಲಿ ಅಪ್ಪಳಿಸಲಿದೆ ಎಂದು ಹೇಳುವ ಎಷ್ಟೋ ಹೊತ್ತಿಗೆ ಮುಂಚೆಯೇ ಹಕ್ಕಿಗಳೆಲ್ಲವೂ ತಮ್ಮ ಜಾಗವನ್ನು ತೆರವು ಮಾಡಿದ್ದವು.

ಭೂಕಂಪ, ಚಂಡಮಾರುತ, ಸುಂಟರಗಾಳಿ, ಬಿರುಗಾಳಿ, ಪ್ರವಾಹ- ಹೀಗೆ ಪ್ರಕೃತಿಯ ಯಾವುದೇ ವಿಕೋಪಗಳು ಸಂಭವಿಸುವಾಗ ನೈಸರ್ಗಿಕವಾಗಿರುವ ಪ್ರಾಣಿಗಳು ಮನೆಯಲಿ ಲ್ಲದ್ದರೂ ಕೂಡಾ ಮುನ್ನವೇ ಅರಿಯುತ್ತವೆ ಮತ್ತು ಸ್ಪಂದಿಸುತ್ತವೆ. ಕೋಳಿಗಳು ಮೊಟ್ಟೆ ಇಡುವುದಿಲ್ಲ, ಹಸುಗಳು ಹಾಲು ಕರೆಯುವುದಿಲ್ಲ, ಜೇನುಹುಳುಗಳು ತಮ್ಮ ಗೂಡನ್ನು ಬರಿದು ಮಾಡಿಕೊಂಡು ಹಿಂಡುಹಿಂಡಾಗಿ ಹಾರಿಹೋಗುತ್ತವೆ.

ಪ್ರಾಣಿಗಳು ಬರೀ ಯಾವುದೋ ದೂರದಿಂದ ಬರುವಂತಹ ಸೂಕ್ಷ್ಮದ ಶಬ್ದವನ್ನು ಗ್ರಹಿಸುವುದಲ್ಲ, ತರಂಗಗಳನ್ನು ಗ್ರಹಿಸುತ್ತವೆ. ಅದಕ್ಕೆ ಪ್ರತಿಕ್ರಿಯಿಸುತ್ತವೆ. ಹಾಗೆ ಪ್ರತಿಕ್ರಿಯಿಸುವ ಸಮಯದಲ್ಲಿ ಅವುಗಳ ವರ್ತನೆಗಳು ಸಹಜವಾಗಿರುವುದಿಲ್ಲ. ಹಾಗಾಗಿ ಅವುಗಳ ಅಸಹಜ ವರ್ತನೆಗಳನ್ನು ನೋಡಿದಾಗ ನಾವೂ ಕೂಡ ಎಚ್ಚೆತ್ತುಕೊಳ್ಳುವ ವಿದ್ಯಮಾನಗಳು ನಮ್ಮ ಪೂರ್ವಜರಲ್ಲಿ ಶಕುನವೇ ಮೊದಲಾದ ನಂಬುಗೆಗಳಿಗೆ ನಾಂದಿ ಹಾಡಿತು. ಆದರೆ ಅವುಗಳು ಸಾಂಪ್ರದಾಯಕ ಚೌಕಟ್ಟಿನಲ್ಲಿಯೇ ಗಟ್ಟಿಯಾಗಿ ಗ್ರಹಿಸುವ ಸೂಕ್ಷ್ಮತೆಯನ್ನು ಕಳೆದುಕೊಂಡುಬಿಟ್ಟಿತು. ಹಾಗಾಗಿ ಶಕುನಗಳು ಮೌಢ್ಯಾಚರಣೆಗೆ ಸೀಮಿತವಾಗಿಬಿಟ್ಟವು.

ಸುನಾಮಿಯಲ್ಲಿ ದೊರಕಿದ ಸಾಕ್ಷಿಗಳು

2004ರ ಡಿಸೆಂಬರ್‌ನಲ್ಲಿ ಭಾರತ ಮತ್ತು ಶ್ರೀಲಂಕಾದ ಕಡಲತೀರಗಳಲ್ಲಿ ಸುನಾಮಿ ಅಪ್ಪಳಿಸಿದ ಸಂದರ್ಭದಲ್ಲಿ ಕ್ಯಾಲಿಮೆರ್ ವನ್ಯಜೀವಿ ಸಂರಕ್ಷಣಾ ವಲಯದಲ್ಲಿ ಸಹಜವಾಗಿ ತಮ್ಮ ಸಂತಾನ ಅಭಿವೃದ್ಧಿ ಮಾಡಿಕೊಂಡಿರಬೇಕಾದ ಕಾಲದಲ್ಲೇ ಫ್ಲೆಮಿಂಗೋ ಪಕ್ಷಿಗಳು ತಮ್ಮ ಜಾಗಗಳನ್ನು ತೆರವು ಮಾಡಿ ಹೊರಟು ಹೋಗಿದ್ದವು. ಇದೇರೀತಿ ಅನೇಕ ಪ್ರಾಣಿಗಳು ತಮ್ಮ ಅಸಹಜ ವರ್ತನೆಗಳ ಮೂಲಕ ಮುಂಬರುವ ದುರಂತವನ್ನು ಸೂಚಿಸಿರುತ್ತವೆ. ಆದರೆ ನಾವು ಮನುಷ್ಯರು ಹಾಕಿಕೊಂಡಿರುವ ಚೌಕಟ್ಟುಗಳಿಂದ ಕೊಂಚವೂ ಹೊರಗೆ ನೋಡಲು ಪುರುಸೊತ್ತಿರದೇ ಹೋಗುತ್ತೇವೆ. ಬೌದ್ಧಿಕವಾಗಿ ಮತ್ತು ಭಾವನಾತ್ಮಕವಾಗಿ ನಮ್ಮದೇ ರಾಜಕೀಯ, ಸೈದ್ಧಾಂತಿಕ, ಮುನಿಸು, ಮನರಂಜನೆ, ಫೋನ್, ಪುಸ್ತಕವೇ ಮೊದಲಾದಂತಹ ತೀವ್ರ ಪ್ರಭಾವಗಳ ಪ್ರಪಂಚ ಸೃಷ್ಟಿಸಿಕೊಂಡು ಅದರಿಂದ ಹೊರಗೆ ಬರುವುದಿರಲಿ, ಗಮನವನ್ನೂ ಹರಿಸುವುದಿಲ್ಲ. ಕಿವಿಗೆ ಇಯರ್ ಫೋನ್



ಹಾಕಿಕೊಂಡು ಫೋನ್‌ನಲ್ಲಿ ಮಾತಾಡುತ್ತಾ ಅಥವಾ ಸಂಗೀತವನ್ನು ಕೇಳುತ್ತಾ ವಾಹನ ನಡೆಸುವ ಎಷ್ಟೋ ಮಂದಿಗೆ ಹಿಂದೆ ದಾರಿಗಾಗಿ ಧ್ವನಿ ಮಾಡುವುದನ್ನೂ ಕೇಳದಿರುವಾಗ ತಮ್ಮ ಮನರಂಜನೆ, ಧಾರ್ಮಿಕ ಶ್ರದ್ಧೆಯ ಗಮ್ಯ, ತಮ್ಮದೇ ಕೋಪ, ಮೋಹಗಳ ಆಲೋಚನೆಗಳ ಕಟ್ಟುಗಳಿಂದ ಹೊರಗೆ ಬಂದು ಪ್ರಕೃತಿಯಲ್ಲಿರುವ ತನ್ನ ಸಹಜೀವಿಗಳಾದ ಪ್ರಾಣಿಗಳು ಯಾವ ರೀತಿಯಲ್ಲಿ ವರ್ತಿಸುತ್ತವೆ, ನಿಸರ್ಗದಲ್ಲಿ ಏನು ಬದಲಾವಣೆಗಳಾಗುತ್ತವೆ ಎಂದು ಗ್ರಹಿಸುತ್ತಾರೆಯೇ? ತಾನು ಕಟ್ಟಿಕೊಂಡಿರುವ ವಿಚಾರಗಳ ಹೊರತಾಗಿ ಮಿಕ್ಕೆಲ್ಲಕ್ಕೂ ಅಸೂಕ್ಷ್ಮನಾಗುತ್ತಾ ಹೋಗುತ್ತಾನೆ. 26/12/2004ರಲ್ಲಿ ಉತ್ತರ ಸುಮಾತ್ರ ದ್ವೀಪದ ಮೇಲೆ ಅಪ್ಪಳಿಸಿದ ಸುನಾಮಿ ಯಲ್ಲಿ ಎದ್ದ ದೈತ್ಯಾಕಾರದ ಅಲೆಗಳು ಹಿಂದೂ ಮಹಾಸಾಗರ ದಲ್ಲಿ ಉರುಳಿ ಹನ್ನೆರಡಕ್ಕೂ ಹೆಚ್ಚಿನ ದೇಶಗಳ ಮೇಲೆ ತನ್ನ ಪ್ರಭಾವವನ್ನು ಬೀರಿ 150,000ಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿತು.

ಮನೆಯಲ್ಲಿ ಬಂಧಿಸಿದ್ದಂತಹ ಹಸು, ಕುರಿಗಳಂತಹ ಪ್ರಾಣಿಗಳಷ್ಟೇ ಸುನಾಮಿಗೆ ಬಲಿಯಾಗಿದ್ದು, ಆದರೆ ಅವೂ ಕೂಡ ವ್ಯತಿರಿಕ್ತವಾಗಿ ವರ್ತಿಸುವುದನ್ನು, ತಮ್ಮ ಭಯ ಮತ್ತು ಆತಂಕವನ್ನು ವ್ಯಕ್ತಪಡಿಸುವುದನ್ನು ಗಮನಿಸದೇ ಹೋಗುವ ತಮ್ಮ ಪಾಲಕರಿಂದಾಗಿ ತಾವೂ ಸತ್ತವು.

ಸಾಕುಪ್ರಾಣಿಗಳಾದರೂ ಪ್ರಕೋಪಗಳನ್ನು ಗಮನಿಸುತ್ತವೆ ಮತ್ತು ಸೂಚನೆಗಳನ್ನು ಕೊಡುತ್ತವೆ. 2004ರ ಸುನಾಮಿ ಸಮಯದಲ್ಲೇ ಶ್ರೀಲಂಕಾದಲ್ಲಿ ಗಲ್ಲೆ ಎಂಬ ಸಮುದ್ರ ತೀರದಲ್ಲಿ ಒಬ್ಬ ನಿತ್ಯ ವಾಯುವಿಹಾರಕ್ಕೆಂದು ತನ್ನ ಎರಡು ನಾಯಿಗಳನ್ನು ಅತ್ತ ಕರೆದೊಯ್ಯಲು ಯತ್ನಿಸಿದಾಗ ಅವು ಅತ್ತ ಸಾಗಲು ಬಲವಂತವಾಗಿ ನಿರಾಕರಿಸಿದವಂತೆ. ಮುಕ್ತವಾಗಿದ್ದಂತಹ ಎಮ್ಮೆಗಳು, ಮೇಕೆಗಳು ಮತ್ತು ನಾಯಿಗಳೆಲ್ಲವೂ ಕೂಡ ಅಪಾಯದಿಂದ ಪಾರಾಗಿದ್ದವು.

ಸುಮಾತ್ರದಲ್ಲಿ ಆನೆ ಸವಾರಿ ಮಾಡುತ್ತಿದ್ದ ಪ್ರೇಕ್ಷಣೀಯ ಸ್ಥಳದಲ್ಲಿ ಭೂಕಂಪವಾಗುವ ಮುನ್ನ ಆನೆಗಳು ಘೀಳಿಡತೊಡಗಿದ್ದವು. ಅವುಗಳನ್ನು ನೋಡಿಕೊಳ್ಳುತ್ತಿದ್ದ ಮಾವುತರು ಗಮನಿಸಿದಂತೆ ಆ ಬಗೆಯಲ್ಲಿ ಘೀಳಿಟ್ಟು ಮಾಡಿದ್ದ ಸದ್ದನ್ನು ಅವರು ಹಿಂದೆಂದೂ ಕೇಳಿಯೇ ಇರಲಿಲ್ಲ ವಂತೆ ಹಾಗೂ ಇನ್ನೂ ಸ್ವಾರಸ್ಯಕರವಾದ ವಿಚಾರವೆಂದರೆ ಅವು ಮಾವುತರ ಅಂಕೆ ಮತ್ತು ನಿರ್ದೇಶನಗಳನ್ನು ಮೀರಿ ಕೋವ್ ಲಕ್ ಸಮುದ್ರತೀರದಿಂದ ತಪ್ಪಿಸಿಕೊಂಡು ಬೆಟ್ಟದ ಕಡೆಗೆ ಓಡಿದವೆಂದು ತಿಳಿದುಬಂದಿದೆ.

ಆನೆಗಳ ಭಾಷೆ ಇನ್‌ಫ್ರಾ ಸಾನಿಕ್ ಆಗಿದ್ದು ನಮ್ಮ ಮನುಷ್ಯರ ಗ್ರಹಿಕೆಗೆ ಮೀರಿದ್ದು, ಅವು ಅದೆಷ್ಟು ಸೂಕ್ಷ್ಮವಾದ ಸ್ವರಗಳಲ್ಲಿ ಧ್ವನಿಸುತ್ತವೆ ಎಂದರೆ ಮನುಷ್ಯರಿಗೆ ಆಲಿಸಲು ಬಹು ಕಷ್ಟಕರವಾದದ್ದು.

ಅದೇರೀತಿಯಲ್ಲಿ ಬೆಕ್ಕು ಮತ್ತು ನಾಯಿಗಳೂ ಭೂಕಂಪ, ಪ್ರವಾಹದಂತಹ ವಿಕೋಪಗಳು ಸಂಭವಿಸುವಾಗ ವಿಚಿತ್ರವಾಗಿ ವರ್ತಿಸುತ್ತವೆ ಎಂದು ಅವುಗಳ ಪಾಲಕರು ವರದಿ ಮಾಡಿದ್ದಾರೆ. ಅವುಗಳು ಸಹಜವಾಗಿ ವಿಶ್ರಾಂತಸ್ಥಿತಿಯಲ್ಲಿರದೇ ಅತ್ಯಂತ ವಿಚಿತ್ರವಾಗಿ ವರ್ತಿಸತೊಡಗುತ್ತವೆ. ತಮ್ಮ ಭಯ ಮತ್ತು ಆತಂಕವನ್ನು ಸೂಸುತ್ತವೆ.

ಭೂಮಿಯ ರಂಧ್ರಗಳಲ್ಲಿ ವಾಸಿಸುವಂತಹ ಇಲಿ, ಹೆಗ್ಗಣಗಳು, ಹಾವು, ಶತಪದಿ, ಸಹಸ್ರಪದಿಗಳಂತಹ ಸರೀಸೃಪಗಳು, ಚೇಳುಗಳು, ಕೀಟಗಳು ಭೂಕಂಪಗಳಾಗುತ್ತವೆ ಎಂದರೆ ಹೊರಗೆ ಬಂದುಬಿಡುತ್ತವೆ. ರೋಮನ್ ಚರಿತ್ರಕಾರ ಆಯಿಲಿಯನ್ ಕ್ರಿಸ್ತಪೂರ್ವ 373ರಲ್ಲಿಯೇ ಈ ವಿಷಯದ ಬಗ್ಗೆ ತಾನು ಸಾಕ್ಷೀಕರಿಸಿದ್ದನ್ನು ದಾಖಲಿಸಿದ್ದಾನೆ.


ಜೇನುನೊಣಗಳನ್ನು ಗಮನಿಸಿ. ಇನ್ನೇನು ಮಳೆ ಬರುತ್ತವೆ ಎಂದರೆ ಅವು ನಿಮ್ಮ ಕಣ್ಣಿಗೆ ಎಲ್ಲೂ ಬೀಳುವುದೇ ಇಲ್ಲ, ಅವು ವಾತಾವರಣದಲ್ಲಿ ಬದಲಾಗುವಂತಹ ತೇವಾಂಶವನ್ನು ಗ್ರಹಿಸುತ್ತವೆ. ಮಳೆ ಬೀಳುವ ಮುನ್ನವೇ ಗೂಡು ಸೇರಿಕೊಂಡುಬಿಟ್ಟಿರುತ್ತವೆ. ಅವುಗಳು ವಾಯುಭಾರವನ್ನು ಕೂಡ ಗ್ರಹಿಸಬಲ್ಲವು. ಅವುಗಳ ಮೇಲಿರುವ ಸೂಕ್ಷ್ಮ ಕೂದಲುಗಳಿಂದ ಅವು ವಾತಾವರಣದಲ್ಲಿ ಸಂಭವಿಸುವ ವಿದ್ಯಮಾನಗಳನ್ನು ಗ್ರಹಿಸುತ್ತವೆ.

2004ರ ಸುನಾಮಿ ಹೊಡೆತಕ್ಕೆ ಸೌತ್ ಈಸ್ಟ್ ಏಷಿಯಾದಲ್ಲಿ 200,000 ಕ್ಕೂ ಹೆಚ್ಚು ಜನ ಬಲಿಯಾದರು. ಬಹುಪಾಲು ವನ್ಯಜೀವಿಗಳು ಉಳಿದುಕೊಂಡವು. ನಾಯಿಗಳು, ಆನೆಗಳು, ಜಿಂಕೆ, ಬಾವಲಿ, ಫ್ಲೆಮಿಂಗೋ ಮತ್ತು ಇತರ ಹಕ್ಕಿಗಳು ಅಲೆಗಳು ಅಪ್ಪಳಿಸುವ ಮುನ್ನವೇ ಜಾಗ ಖಾಲಿ ಮಾಡಿದ್ದವು.

ವಿಜ್ಞಾನಿಗಳು ಹೇಳುವಂತೆ ಹಾವುಗಳು ಭೂಕಂಪವನ್ನು ಸುಮಾರು 120 ಕಿಲೋಮೀಟರ್‌ಗಳ ಮುನ್ನವೇ ಅಂದರೆ ಸುಮಾರು ಐದು ದಿನಗಳ ಮುನ್ನವೇ ಗ್ರಹಿಸುತ್ತವೆ. ಸರ್ಪಗಳ ವ್ಯತಿರಿಕ್ತವಾದ ನಡವಳಿಕೆಗಳನ್ನು ಗಮನಿಸಿಯೂ ಭೂಕಂಪದ ಸಂಭವವನ್ನು ವಿಜ್ಞಾನಿಗಳು ಗ್ರಹಿಸುತ್ತಾರೆ. ಪ್ರಕೃತಿ ವಿಕೋಪವಾಗುವ ಸಂದರ್ಭವಿದ್ದರೆ ಶೀತಕಾಲದಲ್ಲಿಯೂ ಸರ್ಪಗಳು ತಮ್ಮ ನೆಲೆಗಳಿಂದ ಹೊರಗೆ ಬಂದುಬಿಡುತ್ತವೆ. ಇನ್ನು ಕುದುರೆಗಳು ಕೆನೆಯುತ್ತಾ, ಅನಿರ್ದಿಷ್ಟವಾಗಿ ನೆಲದ ಮೇಲೆ ಸುತ್ತುತ್ತಾ ವಿಚಿತ್ರವಾಗಿ ವರ್ತಿಸುತ್ತವೆ. ಅದೇರೀತಿ ಶಾರ್ಕ್‌ಗಳ ನಡವಳಿಕೆಗಳೂ ಸಮುದ್ರದಲ್ಲಿ ಉಂಟಾಗುವ ಚಂಡಮಾರುತಗಳ ಸೂಚನೆಗಳನ್ನು ಕೊಡಬಲ್ಲವು.

ಬರಿಯ ಪ್ರಕೃತಿ ವಿಕೋಪಗಳಷ್ಟೇ ಅಲ್ಲ, ಯುದ್ಧಗಳಲ್ಲಿ ಬಾಂಬರ್‌ಗಳು ಬರುವುದನ್ನೂ ನಾಯಿಗಳು ಸೂಚಿಸುತ್ತಿದ್ದವು. ಮಿಲೇನಿಯಂ ಪುಸ್ತಕಗಳ ಸರಣಿಯಲ್ಲಿ ಪೂರ್ಣಚಂದ್ರ ತೇಜಸ್ವಿಯವರು ಎರಡನೇ ವಿಶ್ವ ಯುದ್ಧದ ಸಮಯದಲ್ಲಿ ಬಾಂಬರ್‌ಗಳ ದಾಳಿಯನ್ನು, ಅವುಗಳ ಬರುವಿಕೆಯನ್ನು ಮುಂಚಿತವಾಗಿಯೇ ಗ್ರಹಿಸುತ್ತಿದ್ದ ನಾಯಿಯ ಬಗ್ಗೆ ಸವಿಸ್ತಾರವಾಗಿ ತಿಳಿಸಿಕೊಟ್ಟಿದ್ದಾರೆ. ಜಪಾನ್, ಅಮೆರಿಕಾ, ರಷಿಯಾ, ಆಸ್ಟ್ರಿಯಾ ಹೀಗೆ ಅನೇಕ ಗಾಢ ಯುದ್ಧದ ಕ್ಷೇತ್ರಗಳಲ್ಲಿ ನಾಯಿಗಳನ್ನು ನೆರವಿಗೆ ತೆಗೆದುಕೊಂಡಿರುವಂತಹ ರೋಚಕ ಮತ್ತು ಭಾವನಾತ್ಮಕವಾದ ಉದಾಹರಣೆಗಳು ಧಾರಾಳವಾಗಿವೆ.

ಅದೆಲ್ಲಾ ಸರಿ, ಪ್ರಾಣಿಗಳ ಈ ಶಕ್ತಿಗಳಿಗೂ, ಶಕುನಗಳಿಗೂ, ಮನುಷ್ಯರ ಶಕ್ತಿ ಮತ್ತು ಗ್ರಹಿಕೆಗಳಿಗೂ ಇರುವ ಸಂಬಂಧವೇನು ಮತ್ತು ಅದು ಹೇಗೆ ಉಂಟಾಗುತ್ತವೆಂಬು ದನ್ನು ಮುಂದೆ ನೋಡೋಣ. ಇನ್ನೂ ರೋಚಕ ವಾದ ಸಂಗತಿಗಳು ಅಧ್ಯಯನದ ಮಾರ್ಗದಲ್ಲಿ ತೆರೆದುಕೊಳ್ಳುತ್ತವೆ. ■



ಔದಾರ್ಯವಿಲ್ಲದ ಸಂಘ ಪರಿವಾ

ಸಂಘ ಪರಿವಾರದ ಪಟಾಲಂ ಮಡಿಕೇರಿಯಲ್ಲಿ ಟಿಪ್ಪುವಿನ ಜಯಂತಿ ವಿರುದ್ಧ ನಡೆಸಿದ ಗಲಭೆ ಮತ್ತು ಪ್ರತಿಭಟನೆ ಸಂದರ್ಭದಲ್ಲಿ ನಮ್ಮ ವಿರೋಧಿಗಳ ಅಭಿಪ್ರಾಯವನ್ನು ತಾಳ್ಮೆಯಿಂದ ಆಲಿಸಬೇಕೆಂಬ ಗಾಂಧೀಜಿಯವರ ಮಾತಿನಂತೆ ಕೇಳಿಸಿಕೊಳ್ಳುವ ಕಾತುರದಿಂದ ಆಲಿಸಿದೆ. ಆದರೆ ಈ ಹುಸಿ ದೇಶಭಕ್ತರು ಮತ್ತು ಸಂಸ್ಕೃತಿಯ ರಕ್ಷಕರು ಹೊಡೆದದ್ದು ಬರೀ ಬೊಗಳೆ. ಆದರೂ ಪ್ರಬುದ್ಧತೆಯಿಲ್ಲದೆ ಪುಂಖಾನುಪುಂಖವಾಗಿ ಟಿಪ್ಪು ಹಿಂದೂ ದ್ರೋಹಿ ಮತ್ತು ಮತಾಂಧನೆಂಬ ಮಾತುಗಳು ವಾಕರಿಕೆ ತರಿಸುವಂತಿದ್ದವು.


ಅವರಲ್ಲೊಬ್ಬ "ನಮ್ಮ ಯೋಗಿ ನಾರೇಯಣ ತಾತನವರ ಗುರುಗಳನ್ನು ಟಿಪ್ಪು ಸಮುದ್ರಕ್ಕೆ ಎಸೆದಿದ್ದ. ಗುರುಗಳಿಗೆ ಪವಾಡ ಗೊತ್ತಿದ್ದರಿಂದ ಬದುಕುಳಿದರು" ಎಂದದ್ದನ್ನು ಕೇಳಿ ಆಶ್ಚರ್ಯಚಕಿತನಾದೆ. ಇಂತಹ ಪ್ರಸಂಗ ಯಾವ ಚರಿತ್ರೆಯಲ್ಲಿದೆ? ಬಹುಶಃ ಪುರೋಹಿತಶಾಹಿಗಳು ಸೃಷ್ಟಿಸಿರುವ ಚರಿತ್ರೆಯಲ್ಲಿದಿಯೋ ಏನೋ, ನನಗೆ ಗೊತ್ತಿಲ್ಲ. ಚರಿತ್ರೆಯನ್ನು ತಿರುಚುವ ನೈಪುಣ್ಯತೆ ಪಡೆದಿರುವ ಪರಿವಾರದವರ ಮಾತಿಗೆ ಮಿತಿಯಿಲ್ಲವೇ. ಇಂತಹವರನ್ನು ಕಂಡೇ ನಮ್ಮ ದಾಸರು "ಆಚಾರವಿಲ್ಲದ ನಾಲಿಗೆ ನಿನ್ನ ನೀಚಬುದ್ಧಿಯ ಬಿಡು ನಾಲಗೆ" ಎಂದಿದ್ದು.

ಸಂಘ ಪರಿವಾರದವರಿಗೆ ನನ್ನದೊಂದು ಭಿನ್ನಹ. ದೇಶಭಕ್ತರೆಂದು ಸ್ವಯಂಘೋಷಿಸಿಕೊಂಡಿರುವ ನಿಮ್ಮ ಸಂತತಿ ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಚಳವಳಿಯಲ್ಲಿ ಹೋರಾಡಿದ ಎಳ್ಳಷ್ಟೂ ನಿದರ್ಶನಗಳಿಲ್ಲ. ಲಂಕೇಶ್ ಪತ್ರಿಕೆಯಲ್ಲಿ ದಾಖಲಿಸಿರುವಂತೆ ಸ್ವಾತಂತ್ರ ಚಳವಳಿಯಲ್ಲಿ ನಡೆದ ಒಂದು ಗಲಭೆಯ ವಿಚಾರಣೆಗಾಗಿ ಅಟಲ್ ಬಿಹಾರಿ ವಾಜಪೇಯಿ ಮತ್ತವರ ಅಣ್ಣನನ್ನು ಬಂಧಿಸಿದಾಗ ಅವರಿಬ್ಬರು ಗಲಭೆ ನಡೆಸಿದ ದೇಶಪ್ರೇಮಿಗಳ ಬಗ್ಗೆ ಮಾಹಿತಿ ನೀಡಿ ಬ್ರಿಟಿಷರಿಗೆ ಕ್ಷಮಾಪಣೆ ಪತ್ರ ಬರೆದು ಕೊಟ್ಟ ಪ್ರಕರಣ ತಮಗೆ ಗೊತ್ತಿಲ್ಲದಿರುವುದು ಆಘಾತಕಾರಿಯಾಗಿದೆ. ಬ್ರಿಟಿಷರ ವಿರುದ್ಧ ಹೋರಾಡಿ ತಮ್ಮ ಮಕ್ಕಳನ್ನು ಒತ್ತೆಯಿಟ್ಟು ಯುದ್ಧದಲ್ಲಿ ಮಡಿದ ಟಿಪ್ಪುವಿನ ಬಗ್ಗೆ ನಿಮಗೆ ಯಾಕೆ ಈ ಆಕ್ರೋಶ? ಟಿಪ್ಪು ಮುಸ್ಲಿಂ ಎಂಬ ಕಾರಣಕ್ಕಾಗಲ್ಲವೇ? ಮುಸ್ಲಿಂ ಜನಾಂಗದವರ ಮೇಲೆ ಯಾಕೆ ನಿಮಗೆ ಸಿಟ್ಟು? ಮುಸ್ಲಿಂರು ಈ ದೇಶಕ್ಕೆ ಕಾಲಿಟ್ಟಾಗ ತಮ್ಮ ದೇವಾಲಯ ಗಳನ್ನು ನಾಶಮಾಡಿ ಮತಾಂತರಗೊಳಿಸಿದ್ದಕ್ಕೆ ತಮ್ಮ ವಿರೋಧವೆಂದು ರೀಲು ಬಿಡುವಿರಾ?

ಅಂದಿನ ಕಾಲಘಟ್ಟದ ಯಾವುದೇ ರಾಜರಿಗೂ ಆಕ್ರಮಶೀಲಭಾವನೆ, ಸಂಪತ್ತಿನ ವ್ಯಾಮೋಹ, ಧರ್ಮದ ಅನುಷ್ಠಾನ ಮಾಡುವ ಇರಾದೆಯಿತ್ತೆಂದು ಸಾಮಾನ್ಯ ಜ್ಞಾನವಿರುವ ಎಲ್ಲರಿಗೂ ಗೊತ್ತಿರುವ ವಿಚಾರ. ಅಕ್ಬರ್‌ನಿಂದ ಹಿಡಿದು ಟಿಪ್ಪು ಸುಲ್ತಾನನವರೆಗೂ ಈ ದೇಶಕ್ಕೆ ಮುಸಲ್ಮಾನರ ಕೊಡುಗೆ ಅಷ್ಟಿಷ್ಟಲ್ಲ, ಇದಕ್ಕೆ ಐತಿಹಾಸಿಕ ದಾಖಲೆಗಳಿವೆ. ಸಾರೆ ಜಹಾನ್‌ಸೆ ಅಚ್ಛ ಹಿಂದೂ ಸಿತಾ ಹಮಾರ ಹಮಾರ... ಎಂದು ಮೈನವಿರೇಳಿಸುವ ಗೀತೆಯನ್ನು ಬರೆದ ಕವಿ ಇಕ್ಬಾಲ್ ಮುಸ್ಲಿಂ ಎಂಬುದನ್ನು ತಮ್ಮಂತವರು ಅರಿಯಬೇಕಾಗಿದೆ.


ರೂಸೋ ತನ್ನ ಸೋಷಿಯಲ್ ಕಾಂಟ್ರಾಕ್ಟ್ ಕೃತಿ ಪ್ರಕಟಿಸಿದಾಗ ಅದರಲ್ಲಿರುವ ನಿರ್ದಾಕ್ಷಿಣ್ಯ ಭಾವನೆಗಳನ್ನು ಕಂಡು ವಾಲ್ಟೇರ್ "ನಿನ್ನ ಮಾತುಗಳನ್ನು ನಾನು ಒಪ್ಪುವುದಿಲ್ಲ, ಆದರೆ ಅದನ್ನು ಹೇಳುವ ನಿನ್ನ ಹಕ್ಕನ್ನು ಸಂರಕ್ಷಿಸಲು ನಾನು ಪ್ರಾಣವನ್ನಾದರೂ ಕೊಡಲು ಸಿದ್ಧ" ಎಂದಿದ್ದರು. ರೂಸೋ ದೇಶಭ್ರಷ್ಟನಾಗಿ ಶತ್ರುಗಳಿಂದ ರಕ್ಷಿಸಿಕೊಳ್ಳಲು ಹಾತೊರೆಯುತ್ತಿದಾಗ ವಾಲ್ಟೇರ್ ತನ್ನೊಡನಿರಲು ಆಹ್ವಾನಿಸಿದ. (ಸಂಗ್ರಹ ವಿ.ಆರ್.ನಾಕ್ಲ, ವೈಚಾರಿಕ ಬರಹಗಳು). ಸಂಘ ಪರಿವಾರದವರಿಗೆ ಇಂಥ ಔದಾರ್ಯ ಏದೆಯಾ.

- ವಿ.ಬಾಲಕೃಷ್ಣ ಮಾಲೂರು



ವೈರುಧ್ಯಗಳ ಸಮಾಗಮ

ಬಿಹಾರದ ಫಲಿತಾಂಶ ಬಿಜೆಪಿಯನ್ನೇ ಒಡೆಯುವಂತಹ ಸನ್ನಿವೇಶವನ್ನು ಸೃಷ್ಟಿಸಿ ಅಧ್ವಾಣಿ, ವೆಂಕಯ್ಯ, ಎಮ್.ಎಮ್.ಜೋಷಿ, ಗಡ್ಕರಿ, ಯಡ್ಡಿಗಳೊಳಗೆ ಕಿತ್ತಾಟ ನಡೆಯುತ್ತಿದ್ದಾಗ ಮೋದಿ ಸಾಹೇಬರು ಥೇಮ್ಸ್ ನದಿಯ ದಡದಲ್ಲಿ ನಿಂತು 'ಲಂಡನ್ ಬ್ರಿಡ್ಜ್ ಇಸ್ ಫಾಲಿಂಗ್ ಡೌನ್.. ಫಾಲಿಂಗ್ ಡೌನ್..' ಪದ್ಯ ಹೇಳುತ್ತಾ ಸಂಭ್ರಮಿಸುತ್ತಿದ್ದರಂತೆ. ಅದೇನೇ ಇರಲಿ, ಇಡೀ ವಿಶ್ವಕ್ಕೆ ಮಾನವೀಯತೆಯನ್ನು ಸಾರಿದ್ದ, ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ ಎಂದ ಅಣ್ಣ ಬಸವಣ್ಣನ ಪ್ರತಿಮೆಯನ್ನು ಅಣ್ಣನ ಸಂದೇಶದ ವಿರುದ್ಧ ದಿಕ್ಕಿನಲ್ಲಿರುವ ಪ್ರತಿಮಾ ಸ್ವರೂಪಿಯೊಂದು ಉದ್ಘಾಟನೆ ಮಾಡಿದ್ದು ನಾಳೆ ಗೋಡ್ಸೆಯೇ ಎದ್ದು ಬಂದು ಗಾಂಧಿ ಪ್ರತಿಮೆಯನ್ನ ಉದ್ಘಾಟಿಸಿದ್ದಕ್ಕಿಂತ ಕೆಟ್ಟದ್ದಾಗಿತ್ತು. ಯಾಕೆಂದರೆ ಉದ್ಘಾಟಿಸಿದಾತ ದೇಶವೊಂದರ ಗೌರವಾನ್ವಿತ ಪ್ರಧಾನಿಯೇ ಆಗಿದ್ದರೂ ಅಣ್ಣ ಹೇಳಿದ ಕೊಲಬೇಡ, ಅನ್ಯ (ಪರಧರ್ಮೀಯರನ್ನೂ ಸೇರಿ) ರಲ್ಲಿ ಅಸಹನೆಯನ್ನು ತೋರದಿರು, ಹುಸಿಯ ನುಡಿಯದಿರು, ತನ್ನ ಬಣ್ಣಿಸಿ (ಚಿನ್ನದ ದಾರದ ಅಂಗಿಯನ್ನುಟ್ಟು) ಕೊಳ್ಳದಿರು ಎಂಬೆಲ್ಲಾ ನೀತಿಯನ್ನು ಉಲ್ಲಂಘಿಸಿದಂತಹ ವ್ಯಕ್ತಿ. ಇದು ಆತನ ವಿರೋಧಿಗಳು ಹೇಳುವ ಮಾತಲ್ಲ ವಾಜಪೇಯಿಯಿಂದ ಹಿಡಿದು ಅಧ್ವಾಣಿ ಸುಷ್ಮಾವರೆಗಿನ ಆತನ ಪಕ್ಷದ ಹಿರಿಯರೇ ಆತನ ಇಂತಹ ದುರಹಂಕಾರಿ ನಿಲುವುಗಳನ್ನು ಹಲವು ಬಾರಿ ಎತ್ತಿ ವಿರೋಧಿಸಿದಂತಹ ಉದಾಹರಣೆಗಳಿವೆ.



ಮೊನ್ನೆ ಮೊನ್ನೆ ಹಿಂದೂತ್ವ ಹಿನ್ನೆಲೆಯ ಶಿವಸೇನೆಯ ನಾಯಕರು "ಗೋದ್ರಾ ಕೊಲೆಯಿಂದಲೇ ನೀವು ನಮ್ಮ ಕಣ್ಮಣಿಯಾದದ್ದನ್ನ ಮರೆತೀರಾ?" ಎಂದು ಈತನ ಕೊಲೆಗಡುಕತನವನ್ನು ಎತ್ತಿ ತೋರಿದ್ದಾಗಲೀ ಅದಕ್ಕೆ ಮೋದಿ ಉತ್ತರಿಸ ಹೋಗದ್ದಾಗಲೀ ಇವೆಲ್ಲ ಅಣ್ಣನ "ಕೊಲಬೇಡ" ತತ್ವಕ್ಕೆ ಅವಮಾನಿಸುವಂತಿಲ್ಲವೇ? ಲಂಡನ್‌ನಲ್ಲಿ ಅಣ್ಣನಿಗೆ ಇಂತಹ ಅವಮಾನ ಬೇಕಿತ್ತೇ?

ಮೋದಿಯ ಹೆಸರಲ್ಲೇ ಅಧಿಕಾರ ಉಣ್ಣುತ್ತಿರುವ ಮೋಧಿ ಭಕ್ತರು ಬಿಹಾರದ ಸೋಲನ್ನು ಮೋದಿ ಹೆಸರಿಗೆ ಕಟ್ಟುವುದನ್ನು ಒಪ್ಪುವುದಿಲ್ಲ, ಒಂದು ವೇಳೆ ಬಿಹಾರದಲ್ಲಿ ಬಿಜೆಪಿ ಗೆದ್ದಿದ್ದರೆ ಇಂತವರ ವರಸೆಯೇ ಬೇರೆಯಿರುತ್ತಿತ್ತು, ಇವರ ಬಾಯಲ್ಲಿ ಮೋದಿ ಅಲೆಯ ಭಜನೆಯೇ ಬರುತ್ತಿರಲಿಲ್ಲವೇ? ಈಗ ಸೋತಿದ್ದು ಮೋದಿಯಿಂದಾಗಿ ಎಂದು ಒಪ್ಪಿಕೊಂಡರೆ "ಮೋದಿ ಅಲೆ" ಎಂಬುದು ಬರೀ "ಹುಸಿ ಭ್ರಮೆ" ಎಂಬ ಸಂದೇಶ ಹರಡುತ್ತದೆಂಬ ಭಯ ಇವರಿಗಿದೆ ಆದಕ್ಕಾಗಿ ಈ ಕಣ್ಣಾಮುಚ್ಚಾಲೆ ನಾಟಕ!

ಲೋಕಸಭಾ ಚುನಾವಣೆಯಲ್ಲಿ ಮೋದಿ ಗೆದ್ದ ಬಳಿಕ ನಡೆದ ಕೆಲ ರಾಜ್ಯ ಚುನಾವಣೆಗಳಲ್ಲಿ ಮೋದಿ ಪಾ ಪಟಾಲಮ್ ಗೆದ್ದದ್ದು ಹೌದು. ಅಧಿಕಾರಕ್ಕೇರಿದ ಬಳಿಕ ಅಲ್ಪಕಾಲದಲ್ಲೇ ಒಬ್ಬಾತನ ಯೋಗ್ಯತೆಯನ್ನು ಅಳೆಯಲಾಗದು. ಆದಕ್ಕಾಗಿ ಮೋದಿ ಹೇಳಿದ್ದನ್ನು ಮಾಡಬಹುದೆಂದು ಜನ ಸ್ವಲ್ಪ ಸಮಯ ಕಾದು ನೋಡಿದರು. ಆದರೆ ದಿನಕಳೆದಂತೆ ಭ್ರಮನಿರಸನಗೊಂಡು 'ಈತ ಬರೀ ಪುಂಗೀದಾಸ ಹೇಳೋದೊಂದು ಮಾಡೋದೊಂದು ಎಂಬುದು ಅರಿವಾದ ಮೇಲಷ್ಟೆ ದೆಹಲಿಯಲ್ಲಿ ಆಪ್ ಗೆಲ್ಲಿಸುವುದರ ಮೂಲಕ ತಕ್ಕ ಉತ್ತರಕೊಟ್ಟರು. ಈಗ ಅದು ಬಿಹಾರದ ಸರದಿ. ಗಮನಿಸಿ, ಈ ಎರಡು ಸೋಲುಗಳು ಬರೀ ಸೋಲಾಗಿರದೇ ದೊಡ್ಡ ಹೊಡೆತಗಳೇ ಆಗಿವೆ. ಇವು ನಿಸ್ಸಂಶಯವಾಗಿ ಮತದಾರರ ಅಸಮಾಧಾನವನ್ನ ಸೂಚಿಸುತ್ತದೆಯೇ ಹೊರತು ಬೇರೇನಲ್ಲ, ದೆಹಲಿ ಮುಖಭಂಗಕ್ಕೆ ಉತ್ತರ ನೀಡುವ ಸಲುವಾಗಿ ಚುನಾವಣಾ ರ‍್ಯಾಲಿಯಲ್ಲಿ ಸ್ವತಃ ಮೋದಿಯೇ ಆಸಕ್ತಿಯಿಂದ ಹಾಲ್ಗೊಂಡು ಭರ್ಜರಿ ಪ್ರಚಾರ ನಡೆಸಿ ಭರ್ಜರಿ ಆಶ್ವಾಸನೆಗಳ ಆಮಿಷ ನೀಡಿದ್ದ. ಆದರೆ ಜನ ಈತನನ್ನು "ಅರ್ಥ" ಮಾಡಿಕೊಂಡಾಗಿತ್ತು, ಉತ್ತರ ಕೊಟ್ಟರು.

ಇಂಗ್ಲೆಂಡ್ ಸಂಸತ್ತಿನಲ್ಲಿ ಮಾತನಾಡುತ್ತಾ "ನಮ್ಮಲ್ಲಿ ಅಸಹಿಷ್ಣುತೆ ಇಲ್ಲ, ನಮ್ಮದು ಇಮ್ರಾನ್ ಖಾನ್‌ನನ್ನು ಒಳಗೊಂಡ ಭಾರತ' ಎಂದು ಮೋದಿ ತನ್ನ ಸಮಭಾವದ ಮುಖವಾಡವನ್ನು ತೋರುತ್ತಾನೆ. ಮುಸಲ್ಮಾನರು ಮತ್ತು ಅಲ್ಪಸಂಖ್ಯಾತರ ಮೇಲೆ ಈತನಿಗೆ ನಿಜಕ್ಕೂ ಈ ರೀತಿ ಕಾಳಜಿ ಇದ್ದಿದ್ದರೆ ದಾದ್ರಿ ಹತ್ಯೆಯಾದ ತಕ್ಷಣ ಉತ್ತರ ನೀಡಬೇಕಿತ್ತು ಅಥವ ಕಠಿಣ ಕ್ರಮ ಕೈಗೊಳ್ಳಬೇಕಿತ್ತು ಅಥವ ಆ ಬಗ್ಗೆ ಮಾತನಾಡಿದ ತನ್ನ ಸಹಚರರ ಬಗ್ಗೆ ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳಬೇಕಿತ್ತು ಆವಾಗ ಆತನ ಸಮಭಾವವನ್ನು ಒಪ್ಪಬಹುದಿತ್ತು ಇಂತಹ ಮೊಸಳೆಕಣ್ಣೀರಿನ ನಾಟಕಗಳಿಂದಲ್ಲ.


ಪ್ಯಾರಿಸ್‌ನ ದಾಳಿ 'ಮಾನವತಾ ಮೇಲಿನ ಹಮ್ಲಾ' ಎಂದು ಮರುಗಿದಾತನ ಮಾನವತೆ ತಾನು ಗುಜರಾತ್ ಹತ್ಯಾಕಾಂಡ ನಡೆಸಿದಾಗ ಎಲ್ಲಿ ಸತ್ತಿತ್ತು?

- ಎ.ಎಮ್.ಎಸ್. ನೆಲ್ಲಿಕಾರ್

ಬಿಜೆಪಿಗೆ ಶರಣಾಗಿರುವ ಮಾಧ್ಯಮಗಳು

ಬಿಹಾರ ರಾಜ್ಯದ ಚುನಾವಣೆ ಫಲಿತಾಂಶ ಕೇಂದ್ರ ಸರ್ಕಾರದ ನಡೆಗೆ ಸ್ಪಷ್ಟ ವಿರುದ್ಧವಾಗಿ ಹೊರಹೊಮ್ಮಿದೆ. ಲೋಕಸಭಾ ಚುನಾವಣೆಯಲ್ಲಿ ಜನರು ಬದಲಾವಣೆ ಬಯಸಿದ್ದನ್ನೇ ಬಂಡವಾಳ ಮಾಡಿಕೊಂಡ ಬಿಜೆಪಿ ಪಕ್ಷವು ತನ್ನ ಗುಪ್ತ ಕಾರ್ಯಸೂಚಿಗೆ, ಸ್ವಾರ್ಥ-ಸಾಧನೆಗಾಗಿ ಅನುಸರಿಸುತ್ತಿರುವುದು, ಪ್ರಜಾ ಪ್ರಭುತ್ವದ ಅಂಗಗಳನ್ನು ನಿಷ್ಕ್ರಿಯಗೊಳಿಸುತ್ತಿರುವುದು, ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದವರಿಗೆ ದೇಶದಲ್ಲಿ ಯಾವುದೇ ಅವಕಾಶ ಸಿಗದಿರುವಂತೆ ಮಾಡುವ ಹುನ್ನಾರವಿರುವುದು ಜನತೆಗೆ ಬಹುಬೇಗ ಅರ್ಥವಾಯಿತು. ಬಾಯಲ್ಲಿ 'ಅಭಿವೃದ್ಧಿ' ಎಂಬ ಪದವನ್ನು ಬಳಸಿ ಕೃತಿಯಲ್ಲಿ ಅದಕ್ಕೆ ತದ್ವಿರುದ್ಧವಾಗಿ ಎಲ್ಲಾ ಒಳ್ಳೆಯದನ್ನು ನಾಶ ಮಾಡುವುದು ಇವರ ಕಾರ್ಯವೈಖರಿ. ಇವೆಲ್ಲದರ ಪರಿಣಾಮವೇ ಈ ಫಲಿತಾಂಶ.

ದೇಶದಲ್ಲಿರುವ ರಾಷ್ಟ್ರೀಯ ಪತ್ರಿಕಾಮಾಧ್ಯಮಗಳಿಗಿಂತ, ಎಲ್ಲಾ ದೃಶ್ಯ ಮಾಧ್ಯಮಗಳು ಮೇಲಿನ ಅಂಶಗಳನ್ನು ಉದ್ದೇಶಪೂರ್ವಕವಾಗಿಯೇ ಮರೆಮಾಚಿ ಮೋದಿ ಸರ್ಕಾರದ ಪರವಾಗಿಯೇ ಅತಿಯಾಗಿ ವರ್ಣಿಸುತ್ತಿರುವುದು ಇಂದಿನ ದುರಂತವಾಗಿ ಪರಿಣಮಿಸಿದೆ. ಬಿಹಾರದಲ್ಲಿ ನಿತೀಶ್-ಲಾಲು-ಕಾಂಗ್ರೆಸ್‌ನ ಮಹಾಮೈತ್ರಿಕೂಟ ಬಹುಮತ ಪಡೆಯುವುದು ಗೋಡೆಬರಹದಷ್ಟೇ ಸ್ಪಷ್ಟವಾಗಿದ್ದರೂ ಫಲಿತಾಂಶ ಹೊರಬೀಳುವವರೆಗೂ ಎಲ್ಲಾ ಟೀವಿ ಮಾಧ್ಯಮಗಳು ದೆಹಲಿಯ ಚುನಾವಣೆಯಲ್ಲಿ ಪಕ್ಷಗಳ ಸಮಬಲ ಹೋರಾಟವೆಂಬಂತೆ ಸುಳ್ಳನ್ನು ಹೇಳಿದಂತೆ ಇಲ್ಲೂ ಹೇಳುತ್ತಿದ್ದವು. ಎನ್‌ಡಿಟಿವಿಯ ಪ್ರಣಯರಾಯ್ ಕೂಡ ಫಲಿತಾಂಶದ ಎರಡು ದಿನಗಳ ಹಿಂದೆ ವಿಶೇಷ ಪಾನಲ್ ಡಿಸ್ಕಷನ್ ನಡೆಸಿ ಬಿಹಾರದ ಮೇಲ್ಜಾತಿಯವರೊಂದಿಗೆ ಹಿಂದುಳಿದವರು, ದಲಿತರನ್ನು ಮತ್ತು ಸ್ವಲ್ಪ ಸಂಖ್ಯೆಯ ಮುಸ್ಲಿಮರು ಸಹ ಎನ್‌ಡಿಎಗೆ ಮತದಾನ ಮಾಡಿದ್ದಾರೆಂದೂ ಎಲ್ಲಾ ದೃಶ್ಯ ಮಾಧ್ಯಮದವರು ಹೇಳಿದ ಸಮಬಲ ಹೋರಾಟವನ್ನೇ ಇವರೂ ಬಿಂಬಿಸಿದರು. ಆದರೆ ಅವರ ಮುಖದಲ್ಲಿ ಅಳುಕು ಎದ್ದು ಕಾಣುತ್ತಿತ್ತು. ಕೊನೆಯಲ್ಲಿ ಚಾಣಾಕ್ಷ ಸಂಸ್ಥೆಯು ಎನ್‌ಡಿಎಗೆ 153 ಮತ್ತು ಮಹಾಮೈತ್ರಿ ಕೂಟಕ್ಕೆ 83 ಸ್ಥಾನಗಳು ಎಂಬಂತೆ ಹೇಳಿಸಲಾಯಿತು.



ಪ್ರಾಯಶಃ ಚಾಣಕ್ಯದವರು ನಿಖರವಾಗಿ ಅ... ಅಂಕಿಸಂಖ್ಯೆಗಳನ್ನೇ ಪರಸ್ಪರ ವಿರುದ್ಧವಾಗಿ ಅದಲು-ಬದಲು ಮಾಡಿ ಪ್ರಕಟಿಸಿ ಹೇಳುವ... ನಾಯಕರು ಅವರ ಮೇಲೆ ಒತ್ತಡ ಹಾಕಿ... ಅಂದರೆ ಪ್ರಣಯರಾಯ್, ಚಾಣಕ್ಯ ಸಂಸ್ಥೆ... ವಸ್ತುಸ್ಥಿತಿ ಗೊತ್ತಿಲ್ಲವೆಂದಲ್ಲ, ಒತ್ತಡಕ್ಕೆ ಸಿಲುಕಿಸಿ ... ಸುಳ್ಳುಗಳನ್ನು ಬಿತ್ತುವಂತೆ ಮಾಡಿ ಇವ... ಬಲಿಪಶುಗಳನ್ನಾಗಿಸುತ್ತಿರುವುದು. ಈ ರೀತಿ ... ಮಾಧ್ಯಮಗಳು ಬಿಜೆಪಿಗೆ ಶರಣಾಗಿರುವುದರಲ್ಲಿ ಸ...

ಬಿಹಾರದ ಫಲಿತಾಂಶದಿಂದಲೂ ಬಿಜೆಪಿಯ... ಕಾರ್ಯವೈಖರಿಯನ್ನು ಬದಲಾಯಿಸಿಕೊಳ... ನಿರೀಕ್ಷಿಸುವುದು ಸಹ ತಪ್ಪೇ, ಏಕೆಂದರೆ ಇವರು ... ಬಂದಿರುವುದೇ ದೇಶವನ್ನು ಅಧೋಗತಿಗೆ ತಳ... ಸಮಯ ನೋಡಿ ಸಿಕ್ಕಿದಷ್ಟನ್ನು ದೋ... ಪರಾರಿಯಾಗಲು."

- ಎಚ್.ಕೆ. ಈರಪ್ಪ, ಬೆ...

ಥೂ ಮೊದ್ಲು ಎಲ್ಲಾ ... ಜಾತಿವ್ಯಾದಿಗಳು ಬ್ಯಾನ್ ಆಗ...

ನೀವೇಳ್ತಿರಿ.. ಎಲ್ಲಾ ರಾಷ್ಟ್ರಗಳು ಭಯೋತ್ಪಾ... ನಿಲ್ಬೇಕ್. ನಾ ಹೇಳ್ತಿನಿ ಪ್ರಧಾನಿ ಒಬ್ಬ ದಲಿತ... ಹೋಮದ ಬಗ್ಗೆ ಒಂದೇ ಒಂದು ಮನ್... ಆಡ್ಬೇಕ್..

ಐಸಿಸ್ ಕೊಲ್ಲುತ್ತೆ. ಭಾರತದಲ್ಲೂ ... ಇತಿಹಾಸದುದ್ದಕ್ಕೂ ಮಾನಸಿಕವಾಗಿ ಮತ್ತು ದ... ದೈಹಿಕವಾಗಿ ಆದ್ರೂ ಬೆಸ್ಟ್, ಒಂದೇ ಸಲಕ್ಕೆ ಸಾ... ಆದ್ರೆ ಈ ಮಾನಸಿಕ ಕೊಲೆ ಪ್ರತಿಕ್ಷಣವೂ ಆಗ... ಬದುಕಿದ್ದು ಸಾಯ್ತಾ ಇರ್ಬೇಕ್!

ಐಸಿಸ್ ಡೇಂಜರ್. ಜಾತಿ ಅಹ... ಮೇಲರಿಮೆಯ ಕೊಬ್ಬು ಉಳ್ಳವ ಕೂಡ... ಡೇಂಜರ್. ಭಾರತದಲ್ಲಿ ಐಸಿಸ್ ತರ ಉಗ್ರ... ಸಾಮಾಜಿಕ, ಮಾನಸಿಕ, ಭಾವನಾತ್ಮಕತೆಯಲ್ಲಿ ... ಕರಗಿಹೋಗಿದೆ. ಅದನ್ನು ಈ ನಮ್ ವ್ಯವಸ್ಥೆ ... ಅದನ್ನೇ ಸಾವಿರಾರು ವರ್ಷದಿಂದ ಉ... ಜೀವಿಸುತ್ತಲೂ ಇದ್ದೇವೆ. (ಹಾಗಾಗಿ ಆ ಐಸಿಸ್... ಕಾಣಲ್ಲ, ಬೇರೆ ದೇಶದ ಐಸಿಸ್ ಕಾಣುತ್ತೆ)

ನಮ್ಮಲ್ಲೇ, ನಮ್ ಮನೆಯಲ್ಲಿ, ಊರಲ್ಲಿ... ಎಲ್ಲೆಡೆ ಇದ್ದಾರೆ ಕೋಟಿ ಕೋಟಿ ಉಗ್ರ... ಇಂತಹ ಉಗ್ರವಾದ, ಭಯೋತ್ಪಾದನೆಯ ... ಮಾಡಲು ಬುದ್ಧ ಬಸವ ಅಂಬೇಡ್ಕರ್ ಫುಲೆ ... ವಿವೇಕಾನಂದ ಸೂಫೀ ಸಂತರು, ವಚನ ... ಶ್ರಮಿಸಿದವು.

ಆದ್ರೆ ಅಂತವರ ಮುಂದುವರೆದ ಚಳವ... ಪುನಃ ಈಗ ಭಾರತದ ಸಾಮಾಜಿಕ ಐಸಿಸ್... ಈಟಿಯಿಂದ ತಿವಿತಿದ್ದಾರೆ. (ಕಲಬುರ್ಗಿ ಉಬ... ದಾಬೋಲ್ಕರ್ ದಾದ್ರಿ ಕಂಬಾಲಪಳ್ಳಿ ಹೊಸ... ಈ ಭಾರತದ ಸಾಮಾಜಿಕ ರಾಷ್ಟ್ರೀಯ ಐಸಿ... ಬಲಿಗಳು). ಪರಿಸ್ಥಿತಿ ಹೀಗಿರುವಾಗ, ನಮ್ಮ... ಸಾಮಾಜಿಕ ಐಸಿಸ್ ಭಯೋತ್ಪಾದನೆ ಬಗ್ಗೆ... ಧ್ವನಿ ಎತ್ತೋದು ಬಿಟ್ಟು ಅಂತಾರಾಷ್ಟ್ರೀಯ... ಬಗ್ಗೆ ಅದೆಷ್ಟು ಬೇಗ ಜಿಗಿದು ಜಿಗಿದು... ವಿರೋಧಿಸ್ತೀರಲ್ಲ, ನಿಮಗೆ ಕನಿಷ್ಟ ನೈತಿಕ... ವಿರೋಧಿಸೋಕು ನೈತಿಕತೆ ಬೇಕಲ್ವಾ?

ನಿಮ್ಮ ಹಳ್ಳಿಯ, ಪಕ್ಕದ ಮನೆಯ ಜನ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು ...
lankesh70@rediffmail.co...
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬ...
ಪ್ರತಿಕ್ರಿಯೆಗಳನ್ನು 9980331427 ...
ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳು...


...ಸುತ್ತೀರಾ. ಪಕ್ಕದ ದೇಶದ ಕ್ರೂರಿಗಳ ಬಗ್ಗೆ ...ಬ್ರೀರಲ್ಲಾ? ಗ್ರೇಟ್. ನಿಮ್ಮಲ್ಲೇ ಒಬ್ಬ ಸಾಮಾಜಿಕ ...ಇದ್ದಾನೆ. ಎದೆ ಮುಟ್ಟಿಕೊಂಡು ಕೇಳ್ಕೊಳ್ಳಿ ನಿಮ್ಮನ್ನ ...ಯಾರು ಎಂದು. ಆ ಐಸಿಸ್ ನಿರ್ನಾಮವಾಗಲು ...ಸೇನೆ ಬೇಕು ನಿಮ್ಮ ಸಾಮಾಜಿಕ ಐಸಿಸ್ ಉಗ್ರತ್ವ ...ಗಲು ಯಾರೂ ಬೇಡ. ನಿಮಗೆ ನೀವೇ ...ವಲೋಕನ ಮಾಡಿಕೊಂಡರೆ ಸಾಕು.

...ನರ ಮನಸ್ಸಿನಲ್ಲಿರುವ ಸೌಹಾರ್ದತೆ ಮತ್ತು ...ಶ್ವವನ್ನು ಧರ್ಮದ ಹೆಸರಲ್ಲಿ ಕೊಲ್ಲೋದು ಬಿಡಿ. ...ಲು ಇದನ್ನ ಮಾಡಿ. ಆಮೇಲೆ ಹೋಗುವಿರಂತೆ ...ೋ ಪ್ಯಾಲೆಸ್ತೀನೋ ಪಾಕಿಸ್ತಾನಕ್ಕೋ. ಅಂತರರಾಷ್ಟ್ರೀಯ ...ತ್ಪಾದನೆ ನೋಡಿಕೊಳ್ಳಲು ಎಲ್ಲಾ ಜಾತಿಧರ್ಮದ ...ರಿರುವ ಸದೃಢ ಸೇನೆ ಇದೆ. ನೀವು ದಯವಿಟ್ಟು ...ಸಾಮಾಜಿಕ ಐಸಿಸ್‌ಗಿರಿ ಬಿಡುವಿರಾ ಪ್ಲೀಸ್??? ...ನಕ್ಕೆ ಬಂದ್ರೆ ಸುಟ್ಟು ಕೊಲ್ಲೋದು ಬಿಡ್ತೀರಾ? ...ಟ್ ಕೊಡೋಕೆ ಬಂದ್ರೆ ಸೀರೆ ಬಿಚ್ಚೋದು ಬಿಡ್ತೀರಾ? ...ಗಿದ್ದು ತಿಂದ್ರೆ ಕಲ್ಲೊಡೆದು ಕೊಲ್ಲೋದು ಬಿಡ್ತೀರಾ? ...ಬೇರೆ ಜಾತಿಯವಳನ್ನ ಮದುವೆ ಆದ್ರೆ ಮರ್ಯಾದೆ ...ಮಾಡೋದು ಬಿಡ್ತೀರಾ ಪ್ಲೀಸ್? ನಿಮಗಿಂತ ದೊಡ್ಡ ... ನನ್ನ ಮನಸಿನ ಅನುಭವಕ್ಕೆ ಇದುವರೆಗೂ ಬಂದಿಲ್ಲ ...ಕ್ಕಡ!!

- ಪ್ರಶಾಂತ್ ದಾನಪ್ಪ, ರಾಯಚೂರು

...ಮು ದಿನ ಶೂದ್ರ ಕೋಟಿಗೆ ನಿಮ್ಮ ...ಸುತಂತ್ರ ತಿಳಿದೇ ತಿಳಿಯುತ್ತದೆ

...ಚಾರಿಕತೆ, ವಿವೇಕ, ಹೃದಯವಂತಿಕೆಯೂ ಇಲ್ಲದ ...ಧುನಿಕ ಯುಗ ಹಲ್ಲೆಕೋರರ, ಹತ್ಯಾಚಾರಿಗಳ ...ಕೊಲವಾಗುತ್ತಿದೆ. ಅಭಿಪ್ರಾಯದ ಹೃದಯ ...ಗಳನ್ನು ಸ್ವಾತಂತ್ರಿಸಿದ ಮಟ್ಟಕ್ಕೆ ದುಷ್ಟ ದುಮ್ಮಾನರು ... ಹಾಕಿದ್ದಾರೆ. ಅಸಹಿಷ್ಣುಗಳು ಮತ್ತೆ ಅವತಾರಿಗಳಾಗಿ ...ಕೊಂಡಿದ್ದಾರೆ. ಸಂವಿಧಾನಾತ್ಮಕ ಆಶಯಗಳಿಗೆ ಸೆಡ್ಡು ...ಯಹೊರಟಿರುವ ಸನಾತನಿಗಳಿಗೆ ಕಡಿವಾಣ ...ಬೇಕಾಗಿದೆ. ಅಭಿವೃದ್ಧಿಶೀಲ ದೇಶವೊಂದು ...ಭೂತವಾದತ್ವ ಒಪ್ಪಿಕೊಂಡರೆ ಅಪ್ಪಿಕೊಂಡರೆ ...ಯಿತು ಆ ದೇಶದ ಕಥೆ. ಇದಕ್ಕೆ ಜ್ವಲಂತ ...ಕ್ಷಣೆ ಪಾಕಿಸ್ತಾನ, ಆಫ್ಘಾನಿಸ್ತಾನ, ಬಾಂಗ್ಲಾ ದೇಶಗಳು.



...ರಿ ಲಂಕೇಶರು ಬರೆದಿದ್ದ 'ಕಂಡಹಾಗೆ'ದಲ್ಲಿ ಹುಚ್ಚಂಗಿ ... ಮೇಲಿನ ಹಲ್ಲೆ ವಿಪರೀತಗಳು ದೇಶದ ಅಪ್ರಬುದ್ಧ ...ಭೂತವಾದಿಗಳ ಉಬ್ಬಾಯಿತ ದೌರ್ಜನ್ಯಗಳನ್ನು ...ರಿಸಿತ್ತು, "ಲೇ ನೀನು ಪೂರ್ವಜನ್ಮದ ಪಾಪದ ...ಗಿ ಮಾದಿಗನಾಗಿ ಜನಿಸಿದ್ದೀಯ" ಎನ್ನುವಂತಹ ... ಭಾವದ ಮಾತುಗಳನ್ನಾಡಿರುವ ಹಿಂದೂ ಒಳಗಿನ ...ಭೂತವಾದಿ ಗುಂಡಿಗೆ ""ಹಿಂದೂ" ಎಂದರೆ ...ದು ಪ್ರಶ್ನಿಸಬೇಕಾಗಿದೆ. ಈಗಾಗಲೇ ಲಕ್ಷದಷ್ಟು-...ಷ್ಟು ಜನ ಈ ಅಸಹಿಷ್ಣು ಧರ್ಮ ಜನರನ್ನು ಬಿಟ್ಟು ...ರ್ಮಗಳತ್ತ ಪಯಣಿಸಿ ಆಗಿದೆ. ಹಿಂದೂ ಧರ್ಮ ... ಯಾರು? ಎನ್ನುವ ಪ್ರಶ್ನಾವಳಿಗಳು ಸಹಸ್ರಾರು ...ಂದ ಜಿಜ್ಞಾಸುವಾಗಿ ಅನುಮಾನದ ಪದರಗಳಲ್ಲಿ ...ೆ. ನೀನು ಶೂದ್ರ, ನೀನು ದಲಿತ, ನೀನು ಅಸ್ಪೃಶ್ಯ ಅಧಮ, ನೀನು ಅಯೋಗ್ಯ-ಹೀಗೆ ಭೇದ ...ದ ವಿಷಗಂಟು ಬೇರೆ ಯಾವ ಧರ್ಮದಲ್ಲಿಯೂ ...ಬ್ರಾಹ್ಮಣ, ವೈಶ್ಯ, ಕ್ಷತ್ರಿಯ, ಅನ್ಯಮೇಲ್ವರ್ಗಗಳ ...ಶೇ. 80ಕ್ಕಿಂತ ಅಧಿಕ ಜನ ಶೂದ್ರಾದಿಗಳ (ನೀವೂ ... ವರ್ಣವಿಭಾಗ) ಸನಾತನ ಹಿಂದೂ ಧರ್ಮದಲ್ಲಿ ...ವುದು. ಹುಚ್ಚಂಗಿ ಪ್ರಸಾದ್, ಕಲ್ಬುರ್ಗಿಯಂತಹ ...ವ್ಯಕ್ತಿಗಳಿಗೆ ಹಲ್ಲೆ ನಡೆಸಿರಬಹುದಾದ ಜನ ... (ನೀವೂ ಹೇಳಿದ ಮೇಲ್ವರ್ಗ) ನಿಯೋಜಿತಗೊಂಡ ...ಗೊಳಗಾದ ವಶೀಕರಣಕ್ಕೊಳಗಾದ ಶೂದ್ರಾದಿ ... ಒಂದಲ್ಲ ಒಂದು ದಿನ ಶೂದ್ರ ಕೋಟಿಗೆ ...ತಂತ್ರ ತಿಳಿದೇ ತಿಳಿಯುವುದು. ಹಾಗಿದೆ ನಿಮಗೆ ... ದಿನಗಳು.

- ಎಚ್. ಆನಂದ್ ಕುಮಾರ್, ಚಿತ್ರದುರ್ಗ

ಐವತ್ತು ಚಿತ್ರಗಳ ಸರದಾರ ಅರ್ಜುನ್

ಕನ್ನಡದ ಹೆಸರಾಂತ ಸಂಗೀತ ನಿರ್ದೇಶಕರಲ್ಲಿ ಅರ್ಜುನ್ ಜನ್ಯ ಕೂಡ ಒಬ್ಬರು. ಸದ್ಯ ಒಟ್ಟಿಗೆ ಐದಾರು ಚಿತ್ರಗಳಿಗೆ ಸಂಗೀತ ಸಂಯೋಜನೆ ಮಾಡುತ್ತಿರುವ ಇವರು ಕಿರುತೆರೆಯ ರಿಯಾಲಿಟಿ ಶೋನಲ್ಲೂ ಸಕ್ರಿಯರಾಗಿದ್ದಾರೆ.



ಅರ್ಜುನ್ ಈ ಹೊತ್ತಿನ ಬಹುಬೇಡಿಕೆಯ ಯುವ ಸಂಗೀತ ನಿರ್ದೇಶಕ. ದುನಿಯಾ ವಿಜಯ್ ನಟನೆಯ 'ಯಾವ' ಸಿನಿಮಾದಿಂದ ಸ್ಯಾಂಡಲ್‌ವುಡ್‌ನಲ್ಲಿ ಗುರುತಿಸಿಕೊಂಡಿರುವ ಇವರು, ಐವತ್ತಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಅಲ್ಲದೇ ಸದ್ಯ ಬಹುಬೇಡಿಕೆ ಸಂಗೀತ ನಿರ್ದೇಶಕ ಅನಿಸಿಕೊಂಡಿದ್ದಾರೆ. ಇದೇ ಮೊದಲ ಬಾರಿಗೆ ಕಿರುತೆರೆಯ ರಿಯಾಲಿಟಿ ಶೋ 'ಸರಿಗಮಪ ಲಿಟಲ್ ಚಾಂಪ್ಸ್'ನಲ್ಲೂ ಕಾಣಿಸಿಕೊಂಡಿರುವ ಇವರು, ಮಕ್ಕಳ ಅಚ್ಚುಮೆಚ್ಚಿನ ಸಂಗೀತ ನಿರ್ದೇಶಕರೂ ಹೌದು.

** ಇವತ್ತಿನ ಸಂಗೀತ ಸಂಯೋಜನೆ ಸ್ಥಿತಿಗತಿಗಳು ಹೇಗಿದೆ? ನಿರ್ದೇಶಕರ ಜತೆಗಿನ ಸಂವಾದ ಈಗಲೂ ಇರುತ್ತಾ?*

ಕನ್ನಡದಲ್ಲಷ್ಟೇ ಅಲ್ಲ, ನಾನು ಕಂಡಂತೆ ಬಹುತೇಕ ನಿರ್ದೇಶಕರು ಕತೆ ಮಾಡುವಾಗಲೇ ಇಂಥದ್ದೆ ಹಾಡುಗಳು ಇರಬೇಕು ಎಂದು ಸಿದ್ಧತೆ ಮಾಡಿಕೊಂಡು ಬರುತ್ತಾರೆ. ಅದು ಅವರ ತಪ್ಪಲ್ಲ. ನಮ್ಮಷ್ಟೇ ಅವರಲ್ಲೂ ಒತ್ತಡ ಇರುತ್ತದೆ. ಪ್ರೇಕ್ಷಕರು ಏನು ಸ್ವೀಕರಿಸುತ್ತಾರೆ, ಯಾವುದನ್ನು ತಿರಸ್ಕರಿಸುತ್ತಾರೆ ಎಂಬ ಆತಂಕ ಇರುತ್ತದೆ. ಹೀಗಾಗಿ ಬಹುತೇಕ ಸಿದ್ಧ ಮಾದರಿಯ ಹಾಡುಗಳು ಬರುತ್ತಿವೆ.

** ಸಿನಿಮಾ ಪ್ರೇಕ್ಷಕರು ಮೆಲೋಡಿ ಮರೆತಿದ್ದಾರಾ?*

ಅಂಥದ್ದೊಂದು ಅನುಮಾನ ನನ್ನನ್ನೂ ಕಾಡಿದೆ. ಇವತ್ತಿನ ಪ್ರೇಕ್ಷಕರು ಟಪ್ಪಾಂಗುಚ್ಚಿ ರೀತಿಯ ಹಾಡುಗಳನ್ನು ಇಷ್ಟಪಡುತ್ತಿದ್ದಾರೆ. ಅಲ್ಲದೇ ನಾವೂ ಕೂಡ ಯುವಕರನ್ನೇ ಮನಸ್ಸಲ್ಲಿ ಇಟ್ಟುಕೊಂಡು ಸಂಗೀತ ಸಂಯೋಜನೆ ಮಾಡುತ್ತೇವೆ. ಸಾಹಿತ್ಯವೂ ಕೂಡ ಅಂಥದ್ದೆ ಇರುತ್ತದೆ.

** ನೀವು ಇಷ್ಟಪಟ್ಟು ಮಾಡಿದ ಹಾಡೊಂದು ಪ್ರೇಕ್ಷಕರಿಗೆ ಇಷ್ಟ ಆಗಲಿಲ್ಲ ಅನ್ನುವ ಕೊರಗು ಇದೆಯಾ?*

ತುಂಬಾ ಹಾಡುಗಳು ಹಾಗೆ ಆಗಿವೆ. ಕೇಳುಗರನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಯಶ್ ನಟನೆಯ 'ರಾಜಧಾನಿ' ಚಿತ್ರದಲ್ಲಿ 'ತೊಟ್ಟಿಲಗಳೆಷ್ಟೋ' ಎಂಬ ಮಂಕುತಿಮ್ಮನ ಕಗ್ಗದ ಅದ್ಭುತ ಸಾಲುಗಳನ್ನು ಬಳಸಿಕೊಂಡು ಹಾಡೊಂದನ್ನು ಮಾಡಿದ್ದೆ. ಆ ಹಾಡು ಹಿಟ್ ಆಗುತ್ತದೆ ಎಂಬ ನಿರೀಕ್ಷೆಯಲ್ಲಿದ್ದೆ. ಹಾಗಾಗಲಿಲ್ಲ, ನೋಡುಗರು ಇಷ್ಟಪಟ್ಟಿದ್ದು 'ಟೈಟು ಟೈಟು ಫುಲ್ ಟೈಟ್' ಎಂಬ ಹಾಡು. 'ವೀರಬಾಹು' ಚಿತ್ರದಲ್ಲೂ ಅಷ್ಟೆ, ಸಿಂಪಲ್ ಆಗಿ ಟ್ಯೂನ್ ಹಾಕಿ 'ನೀರಿಗೆ ಬಾರೆ ಚೆನ್ನಿ' ಹಾಡು ಕಂಪೋಸ್ ಮಾಡಿದೆ. ಅದೇ ಹಿಟ್ ಆಗಿಬಿಟ್ಟಿತು.

** ಹೊಸ ಗಾಯಕರನ್ನು ಅದರಲ್ಲೂ ಕನ್ನಡದ ಗಾಯಕರನ್ನು ಸಿನಿಮಾ ರಂಗಕ್ಕೆ ಪರಿಚಯಿಸಬೇಕು ಎಂಬ ತುಡಿತ ನಿಮಗಿಲ್ಲವಾ?*

ಅಂಥದ್ದೊಂದು ಆಸೆ ಖಂಡಿತಾ ಇದೆ. ಅವಕಾಶ ಸಿಕ್ಕಾಗೆಲ್ಲ ಆ ಕೆಲಸವನ್ನು ಮಾಡಿದ್ದೇನೆ. ನಮ್ಮ ಆಸೆಯ ಜತೆಗೆ ನಿರ್ದೇಶಕರೂ ನಮ್ಮೊಂದಿಗೆ ಕೈ ಜೋಡಿಸಬೇಕು. ಎಲ್ಲರೂ ಒಪ್ಪಿದಾಗಲೇ ಹೊಸದೊಂದನ್ನು ಕೊಡಲು ಸಾಧ್ಯ.

** ಬಾಲಿವುಡ್‌ಗೂ ಹೋಗುತ್ತಿರುವ ಸುದ್ದಿ ಇದೆ. ಆ ಕುರಿತು ಹೇಳಿ.*

ಮಿಥುನ್ ಚಕ್ರವರ್ತಿ ಅವರ ಪುತ್ರ ಮಹಾ ಅಕ್ಷಯ್ ನಾಯಕರಾಗಿರುವ ಹಿಂದಿ ಚಿತ್ರಕ್ಕೆ ಸಂಗೀತ ನೀಡಿದ್ದೇನೆ. ಹಾಡುಗಳನ್ನು ಕೇಳಿರುವ ಮಿಥುನ್ ಚಕ್ರವರ್ತಿ, ಎಲ್ಲರೂ ಇಷ್ಟಪಡುವಂತಹ ಸಂಯೋಜನೆ ಇಲ್ಲಿದೆ ಅಂದರು. ನಾನಂತೂ ಇಂದು ಸಂಗೀತದ ಆನಂದದಲ್ಲಿದ್ದೇನೆ. ನಿಮಗೆ ಒಳ್ಳೆ ಭವಿಷ್ಯವಿದೆ ಎಂದು ಅವರು ಹೇಳಿದಾಗ, ನನಗಂತೂ ಖುಷಿ ಇಮ್ಮಡಿ ಆಯಿತು.

** ಕನ್ನಡ ಸಿನಿಮಾ ರಂಗದಲ್ಲಿ ನಿಮಗೆ ಪ್ರತಿಸ್ಪರ್ಧಿ ಯಾರು?*

ಇಲ್ಲಿ ಪ್ರತಿಸ್ಪರ್ಧಿ ಅಂತ ಇರುವುದಿಲ್ಲ. ನಿರ್ದೇಶಕರಿಗೆ ತಮ್ಮದೇ ಆದ ಟೇಸ್ಟ್ ಇರುತ್ತದೆ. ಅದನ್ನು ಹುಡುಕಿಕೊಂಡು ಹೋಗುತ್ತಾರೆ. ಕನ್ನಡದಲ್ಲಿ ವಿಭಿನ್ನ ಶೈಲಿಯ ಹಾಡುಗಳನ್ನು ಕೊಡುವ ಸಂಗೀತ ನಿರ್ದೇಶಕರು ಇದ್ದಾರೆ. ಎಲ್ಲರೂ ಬಿಜಿ ಆಗಿದ್ದಾರೆ. ಇಲ್ಲಿ ಎಲ್ಲರೂ ಒಂದೇ.

** ನಿಮ್ಮ ಅಭಿಮಾನಿ ಸಂಘವಿದೆ. ಅದು ಏನು ಕೆಲಸ ಮಾಡುತ್ತಿದೆ.*

ಕನ್ನಡ ಸೇರಿದಂತೆ ಬಹುತೇಕ ಚಿತ್ರೋದ್ಯಮದಲ್ಲಿ ಕಲಾವಿದರ ಅಭಿಮಾನಿ ಸಂಘಗಳಿವೆ. ನೆಚ್ಚಿನ ನಟನ ಸಿನಿಮಾ ಬಿಡುಗಡೆ, ಹುಟ್ಟು ಹಬ್ಬದಂತಹ ವಿಶೇಷ ಸಂದರ್ಭದಲ್ಲಿ ಅವರೆಲ್ಲರೂ ಸಂಭ್ರಮಿಸುತ್ತಾರೆ. ನನಗೂ ಅಂಥದ್ದೊಂದು ಫೀಲ್ ಆಗುತ್ತಿದೆ. ಮೈಸೂರು, ಬೆಂಗಳೂರು ಸೇರಿದಂತೆ ನಾನಾ ಕಡೆ ಅಭಿಮಾನಿ ಸಂಘ ಉದ್ಘಾಟನೆ ಆಗಿದೆ. ಬಡಮಕ್ಕಳಿಗೆ ಉಚಿತ ಸಂಗೀತ ಶಿಕ್ಷಣ, ಅಶಕ್ತರಿಗೆ ಸಹಾಯ ಸೇರಿದಂತೆ ಅನೇಕ ಕೆಲಸಗಳನ್ನು ಈ ಸಂಘದ ಮೂಲಕ ಮಾಡಲಾಗುತ್ತಿದೆ.

** ಐವತ್ತು ಸಿನಿಮಾ ಪೂರೈಸಿದ್ದೀರಿ. ನಿಮ್ಮ ಕೆಲಸ ನಿಮಗೆ ತೃಪ್ತಿ ತಂದಿದೆಯಾ?*

ಶಿವರಾಜ್‌ಕುಮಾರ್ ನಟನೆಯ 'ವಜ್ರಕಾಯ' ಸಿನಿಮಾ ನನ್ನ ಐವತ್ತನೇ ಚಿತ್ರ. ಇನ್ನೂ ನೂರು ಸಿನಿಮಾ ಮಾಡಿದರೂ ನನ್ನ ಕೆಲಸ ನನಗೆ ತೃಪ್ತಿ ಕೊಡುವುದಿಲ್ಲ. ಇನ್ನೇನಾದರೂ ಹೊಸದನ್ನು ಮಾಡಬೇಕು ಅನ್ನುವ ತುಡಿತ ಇದ್ದೇ ಇರುತ್ತದೆ. 'ಭಜರಂಗಿ', 'ಸ್ವೀಟಿ', 'ರ್‍ಯಾಂಬೋ', 'ವಿಕ್ಟರಿ', 'ಅಧ್ಯಕ್ಷ', 'ರೋಮಿಯೋ' ಹೀಗೇ ಸಾಕಷ್ಟು ಚಿತ್ರಗಳಲ್ಲಿ ಹಿಟ್ ಹಾಡುಗಳನ್ನು ಕೊಟ್ಟಿದ್ದೇನೆ. ಇನ್ನೂ ಕೆಲಸ ಮಾಡುವ ಆಸೆ ನನಗೆ. ■

16◀◀ ವಿಡಂಬನೆ

ಬುದ್ಧಿಶಕ್ತಿ ಪಲಾಯನ ತೀವ್ರವಾದರೇನಂತೆ, ಬುದ್ಧಿವಂತರಾದ ನೀವು ಇಲ್ಲಿಗೆ ಪಲಾಯನಗೈದು ಉತ್ತಮ ಜೀವನ, ಉತ್ತಮ ಆದಾಯ, ಉತ್ತಮ ಗ್ರೇಡು, ಉತ್ತಮ ನೌಕರಿ ಹೊಂದಿ ಇಂಗ್ಲೆಂಡು, ಅಮೆರಿಕಗಳಿಗಾಗಿ ಬದುಕಬೇಕು. ಏಕೆಂದರೆ, ಆದರಿಂದ 'ಭಾರತದ ಘನತೆ, ಗೌರವಗಳು ಹೆಚ್ಚುತ್ತವೆ (ಚಪ್ಪಾಳೆ, ಕೇಕೆ).

ಆದರೆ, ಬಂಧುಗಳೇ, ಬುದ್ಧಿವಂತರಾದ ನೀವೆಲ್ಲ ಹೀಗೆ ವಿದೇಶಗಳಿಗೆ ಬಂದು ನೆಲೆಸಿಬಿಟ್ಟರೆ ನಾನು ನನ್ನ ಕನಸಿನ 'ಮೇಕ್ ಇನ್ ಇಂಡಿಯಾ'ವನ್ನು ಸಾಕಾರಗೊಳಿಸುವುದು ಹೇಗೆ? ಆದ್ದರಿಂದ ನೀವು ಇಂಡಿಯಾಕ್ಕೆ ಬನ್ನಿ, ಹೆದರಬೇಡಿ, ನಾನು ನಿಮ್ಮನ್ನು ಹಳ್ಳಿಗಳಿಗೆ ಸೇವೆಗೆ ಕಳಿಸುವುದಿಲ್ಲ, ರೈತರ ಆತ್ಮಹತ್ಯೆಗೆ ಪರಿಹಾರವನ್ನು ಕಂಡುಹಿಡಿಯಲು ಹೇಳುವುದಿಲ್ಲ, ಬಡಜನರ ಆರೋಗ್ಯ ಮತ್ತು ಶಿಕ್ಷಣಗಳತ್ತ ಗಮನ ಹರಿಸಲು ಹೇಳುವುದಿಲ್ಲ. 'ಡಿಜಿಟಲ್ ಇಂಡಿಯಾ'ವನ್ನು ಸೃಷ್ಟಿಸುವ ಕೆಲಸವನ್ನು ನಿಮಗೆ ಒಪ್ಪಿಸುತ್ತೇನೆ (ಚಪ್ಪಾಳೆ, ಕೇಕೆ). ನೀವು ಕಂಪ್ಯೂಟರೆದುರು ಕೂತು, ನಾನು ಹೇಳುವ ಕೆಲಸಗಳನ್ನು ಮಾಡಿರಿ.. ಹಳ್ಳಿಹಳ್ಳಿಯ ಮನೆಮನೆಯನ್ನೂ ಡಿಜಿಟಲ್ ಮಾಡಿರಿ. 'ಕಾರ್ಪೊರೇಟ್ ಇಂಡಿಯಾ'ದ ಭಾಗವಾಗಿ ನೀವು ಇಂಡಿಯಾದ ಕಾರ್ಪೊರೇಟ್‌ಗಳಿಗೆ ನನ್ನ ಆದೇಶದನುಸಾರ ಸಕಲ ಸಹಕಾರ ನೀಡಿರಿ. 'ಕಾರ್ಪೊರೇಟ್ ಇಂಡಿಯಾ'ದ ರೂವಾರಿ ನಾನಾದರೆ ನನ್ನ ಹಿಂದಿನ ಶಕ್ತಿ ನೀವಾಗಿರಿ (ಭಾರೀ ಚಪ್ಪಾಳೆ, ಭಾರೀ ಕೇಕೆ).




ಪ್ರಿಯ ಸೋದರ, ಸೋದರಿಯರೇ, ನಿಮ್ಮ ಸ್ವದೇಶಾಗಮನದಿಂದಾಗಿ ಭಾರತವು ಡಿಜಿಟಲ್ ಮತ್ತು ಕಾರ್ಪೊರೇಟ್ ಆಯಿತೆಂದರೆ ಆಗ ನನ್ನಷ್ಟು ಸಂತೋಷಿ ಇನ್ಯಾರೂ ಇರರು ಮತ್ತು ನಿಮ್ಮಷ್ಟು ಸುಖಿಗಳು ಇನ್ಯಾರೂ ಇರರು. ಹ್ಞಾ! ಭಾರತದಲ್ಲಿ ಧಾರ್ಮಿಕ ಗಲಭೆಗಳು ಹೆಚ್ಚುತ್ತಿವೆಯೆಂದು ನೀವು ಭಾರತಕ್ಕೆ ಬರಲು ಹೆದರಬೇಕಾದ್ದಿಲ್ಲ. ಬಡವರನ್ನು, ಅಲ್ಪವಿದ್ಯಾವಂತರನ್ನು, ನಿರಕ್ಷರಿಗಳನ್ನು, ಮುಗ್ಧರನ್ನು ಮತ್ತು ಕೆಳಜಾತಿಗಳೆಂದು ಪರಿಗಣಿತರಾದವರನ್ನು ಇಂಥ ಅನೇಕ ಗಲಭೆಗಳಲ್ಲಿ ತೊಡಗಿಸಿ, ನಾವು ನೀವೆಲ್ಲ ಭಾರತದ ಕಾರ್ಪೊರೇಟ್‌ಗಳೊಡನೆ ಸುಖ ಸಮೃದ್ಧಿಯಿಂದ ಬಾಳಬಹುದು. ವೋಟು ತರಲು ಅಮಾಯಕರು, ನೋಟು ತರಲು ನೀವು, ಆಗ ಭಾರತವು ಫಳಫಳ ಹೊಳೆಯತೊಡಗುತ್ತದೆ (ಚಪ್ಪಾಳೆ, ಕೇಕೆ). ಬಂಧುಗಳೇ, ಇದುವರೆಗೂ ವಿದೇಶೀ ವಿನಿಮಯ ದೊರಕಿಸಿಕೊಟ್ಟು ನೀವೆಲ್ಲ ಭಾರತದಲ್ಲಿ ಲಕ್ಷಾಂತರ ಕಾರುಗಳು, ಬೈಕುಗಳು, ಏರ್‌ಕಂಡೀಷನರ್‌ಗಳು ಇತ್ಯಾದಿಗಳು ಓಡುವಂತೆ ಮಾಡಿದ್ದೀರಿ. ಇನ್ನೀಗ ಭಾರತಕ್ಕೆ ಬಂದು ಡಿಜಿಟಲ್ ಮತ್ತು ಕಾರ್ಪೊರೇಟ್ ಇಂಡಿಯಾಗಳ ನಿರ್ಮಾಣಕ್ಕೆ ಹೆಗಲು ಕೊಟ್ಟು ಇನ್ನಷ್ಟು ಕಾರು, ಬೈಕು, ಏಸಿಗಳನ್ನು ರಂಗಕ್ಕಿಳಿಸಿರಿ ಮತ್ತು ನೀವೂ ಈ ಸುಖಗಳನ್ನು ಅನುಭವಿಸಿರಿ. ಬೆಳೆ ಕಾಣದ ರೈತರು, ಉದ್ಯೋಗವಿಲ್ಲದ ಯುವಕರು, ಬಡ ಕೂಲಿಕಾರರು, ನಿರ್ಗತಿಕರು, ಶೋಷಿತ ದಲಿತರು, ಇಂಥವರನ್ನೆಲ್ಲ ನಾನು ನನ್ನ ಭಾಷಣಗಳ ಮೂಲಕ ತಣ್ಣಗೆ ಮತ್ತು ಗಲಭೆಗಳ ಮೂಲಕ ಬಿಜಿಯಾಗಿ ಇಟ್ಟಿರುತ್ತೇನೆ. ಇವರ ಬಗ್ಗೆ ಕೇರ್ ಮಾಡದೆ ನೀವು ಭಾರತಕ್ಕೆ ಬನ್ನಿ. 'ಮೇಕ್ ಇನ್ ಇಂಡಿಯಾ'ದಲ್ಲಿ ತೊಡಗಿರಿ. ಈ ಅಮಾಯಕರನ್ನು ನಿಮ್ಮ ಮೇಕುಗಳಿಗೆ ಮತ್ತು ಬಾಕುಗಳಿಗೆ ಬಳಸಿಕೊಳ್ಳಿ. ಈಗ, ಪ್ರಿಯ ಬಂಧುಗಳೇ, ನಿಮ್ಮ ಮೇಕುಗಳು ಏನಿರಬೇಕೆಂದು ಹೇಳುತ್ತೇನೆ. ಹೇಳಲೇ (ಹೇಳಿರಿ). ಹೇಳಲೇ? (ಹೇಳಿರಿ). ಹೇಳಲೇ? (ಹೇಳಿರಿ, ಪ್ಲೀಸ್)......"

■ ಎಚ್. ಆನಂದರಾಮ ಶಾಸ್ತ್ರೀ

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 02-12-2015 RNI No. KARKAN20

ಭರ್ಜರಿ ಪ್ರಚಾರ ಪಡೆದ ಶರಣ್




ಸಿನಿಮಾದವರು ಏನೆಲ್ಲ ರೀತಿಯ ಪ್ರಚಾರ ತೆಗೆದುಕೊಳ್ಳುತ್ತಾರೆ ಅನ್ನುವುದಕ್ಕೆ ಈ ಘಟನೆ ಸಾಕ್ಷಿ. ಉತ್ತರ ಕರ್ನಾಟಕದ ಅನೇಕ ರೈತರು ಕಳಸಾ ಬಂಡೂರಿ ವಿಚಾರವಾಗಿ ಹೋರಾಟ ನಡೆಸುತ್ತಿದ್ದಾರೆ. ಈ ರೈತರನ್ನು ಬೆಂಬಲಿಸಿ ಸಿನಿಮಾದವರೂ ಹೇಳಿಕೆ ನೀಡುತ್ತಿದ್ದಾರೆ. ಆದರೆ, ಇತ್ತೀಚೆಗೆ ಈ ವಿಚಾರವಾಗಿ ಸಖತ್ ಸದ್ದು ಮಾಡುತ್ತಿರುವುದು ಶರಣ್.

ಉತ್ತರ ಕರ್ನಾಟಕಕ್ಕೂ ನಟ ಶರಣ್‌ಗೂ ನಂಟಿದೆ. ಮೂಲತಃ ಶರಣ್ ಅಲ್ಲಿಯವರೆ. ಅಲ್ಲದೇ ಅವರ ಕುಟುಂಬವನ್ನು ಆ ಭಾಗದ ಜನರು ಪೋಷಿಸಿದ್ದಾರೆ. ಈ ಕಾರಣಕ್ಕಾಗಿ ಅವರು ಪದೇಪದೇ ಹೋರಾಟದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ ಎಂಬ ಸುದ್ದಿ ಆಯಿತು. ಅಸಲಿ ವಿಷಯವೆಂದರೆ, ಬೆಳಗಾವಿಯಲ್ಲಿ ಶರಣ್ ನಟನೆಯ 'ಮಾರುತಿ 800' ಸಿನಿಮಾ ಶೂಟಿಂಗ್ ಆಗುತ್ತಿದೆ. ಈ ಚಿತ್ರೀಕರಣಕ್ಕೆಂದು ಅವರು ಅಲ್ಲಿಯೇ ವಾಸ್ತವ್ಯ ಹೂಡಿದ್ದಾರೆ. ಹೀಗಾಗಿ ಹೋರಾಟದಲ್ಲೂ ಪಾಲ್ಗೊಂಡಿದ್ದಾರೆ.

ಸಿನಿಮಾದ ಚಿತ್ರೀಕರಣ ಬೆಳಗಾವಿಯ ಹಳ್ಳಿಯೊಂದರ ವಾಡೆಯಲ್ಲಿ ನಡೆಯುತ್ತಿದೆ. ಶರಣ್ ಇಲ್ಲಿ ಮರಾಠಿಗರ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ನಿದ್ದೆಯಿಂದೆದ್ದ ಜಗ್ಗೇಶ್‌ನ ಮಂಜ



ಮಗನಿಗಾಗಿ 'ಗುರು' ಅನ್ನುವ ಚಿತ್ರವನ್ನು ನಿರ್ದೇಶನ ಮಾಡಿದ್ದರು ಜಗ್ಗೇಶ್. ಈ ಸಿನಿಮಾ ಮಕಾಡೆ ಮಲಗಿತ್ತು. ಮಗನಿಗಾಗಿ ಸಾಕಷ್ಟು ದುಡ್ಡು ಸುರಿದಿದ್ದ ಜಗ್ಗೇಶ್ ಪತ್ನಿಗೆ ಸುಧಾರಿಸಿಕೊಳ್ಳಲು ಹಲವು ವರ್ಷಗಳೇ ಬೇಕಾಯಿತು. ಈಗ ಮತ್ತೊಂದು ಸಿನಿಮಾ ನಿರ್ದೇಶನ ಮಾಡಿದ್ದಾರೆ ಜಗ್ಗೇಶ್. ಚಿತ್ರಕ್ಕೆ 'ಮೇಲುಕೋಟೆ ಮಂಜ' ಎಂದು ಹೆಸರಿಟ್ಟಿದ್ದಾರೆ. ಲೆಕ್ಕ ಹಾಕಿ ಹೇಳುವುದಾದರೆ, ಈ ಸಿನಿಮಾದ ಶೂಟಿಂಗ್ ಶುರುವಾಗಿ ವರ್ಷಗಳೇ ಉರುಳಿವೆ. ಬಹುತೇಕ ಶೂಟಿಂಗ್ ಕೂಡ ಮುಗಿದಿತ್ತು. ಆರ್ಥಿಕ ಮುಗ್ಗಟ್ಟಿನಿಂದಾಗಿ ಸಿನಿಮಾ ಅರ್ಧಕ್ಕೆ ನಿಂತಿತ್ತು. ಈಗ ನಿದ್ದೆಯಿಂದ ಮೇಲೆದ್ದಿದ್ದಾರೆ ಜಗ್ಗೇಶ್. ಸಿನಿಮಾವನ್ನು ಸೆನ್ಸಾರ್ ಮಂಡಳಿಯ ಮುಂದೆ ತೆಗೆದುಕೊಂಡು ಹೋಗಿದ್ದರು. ಮಂಜನ ಮಾತಿಗೆ ಮರುಳಾಗಿರುವ ಸೆನ್ಸಾರ್ ಮಂಡಳಿ ಯು/ಎ ಪ್ರಮಾಣ ಪತ್ರ ನೀಡಿದೆ. ಹೀಗಾಗಿ ಜಗ್ಗೇಶ್ ಅವರಿಗೆ ಸಹಜವಾಗಿಯೇ ಖುಷಿ ಆಗಿದೆ. ಸಿನಿಮಾದ ವಿಶೇಷತೆ ಅಂದರೆ, ನಿರ್ದೇಶನದ ಜತೆಗೆ ನಟನೆಯನ್ನೂ ಜಗ್ಗೇಶ್ ಮಾಡಿದ್ದಾರೆ. ಅಲ್ಲದೇ ಕತೆ, ಚಿತ್ರಕತೆಯೂ ಇವರದ್ದೆ. ಐಂದ್ರಿತಾ ರೇ ನಾಯಕಿಯಾಗಿ ನಟಿಸಿದ್ದಾರೆ.

ಇಳಿವಯಸ್ಸಿನ ಅನಂತ್

ಅನಂತ್ ನಾಗ್ ಮತ್ತೆ ಹೀರೋ ಆಗಿ ಬಿಜಿ ಆಗುತ್ತಿದ್ದಾರೆ. ಮೊನ್ನೆಯಷ್ಟೇ ಇವರ ಮುಖ್ಯ ಭೂಮಿಕೆಯ 'ಪ್ಲಸ್' ಸಿನಿಮಾ ಬಿಡುಗಡೆ ಆಯಿತು. ಈ ಸಿನಿಮಾದಲ್ಲಿ ಅನಂತ್ ನಾಗ್ ವಿಭಿನ್ನ ಪಾತ್ರ ನಿರ್ವಹಿಸಿದ್ದರು. ಈಗ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಎಂಬ ಚಿತ್ರದಲ್ಲಿ ನಟಿಸಿದ್ದಾರೆ. ಇಲ್ಲಿಯೂ ಇವರದ್ದು ಪ್ರಧಾನ ಪಾತ್ರ. ಮತ್ತೊಂದು ಅಚ್ಚರಿಯ ಸುದ್ದಿ ಅಂದರೆ 'ದಿ ಪ್ಲಾನ್' ಚಿತ್ರದಲ್ಲಿ ಇವರು ಹೀರೋ ಆಗಿ ನಟಿಸುತ್ತಿದ್ದಾರೆ. ಮೂರು ದಶಕಗಳ ನಂತರ 'ಜೈಲ್ ಬ್ರೇಕ್ ಕತೆ'ಯಲ್ಲಿ ಇವರು ನಟಿಸುತ್ತಿದ್ದಾರೆ.

ಒಂದು ಅರ್ಥದಲ್ಲಿ 'ದಿ ಪ್ಲಾನ್' ಚಿತ್ರಕ್ಕೆ ಅನಂತ್ ನಾಗ್ ಅವರೇ ನಾಯಕ ಮತ್ತು ಎಲ್ಲವೂ. ಇಡೀ ಸಿನಿಮಾ ಇವರ ಪಾತ್ರದ ಸುತ್ತಲೇ ಚಿತ್ರಿತವಾಗಿದೆ. ಹೀಗಾಗಿ ಇಳಿವಯಸ್ಸಿನಲ್ಲೂ ಇವರು ಖಡಕ್ ಪೊಲೀಸ್ ಆಫೀಸರ್ ಆಗಿ ನಟಿಸಿದ್ದಾರೆ. ಇದೊಂದು ಥ್ರಿಲ್ಲರ್ ಸಿನಿಮಾ. ಕೀರ್ತಿ ನಿರ್ದೇಶನದಲ್ಲಿ ಚಿತ್ರ ಮೂಡಿಬಂದಿದೆ. ನಿರ್ದೇಶಕರ ಚೊಚ್ಚಲು ಸಿನಿಮಾ ಇದು.



ಮಡಿಕೇರಿಯ ಜೈಲಿನಲ್ಲಿ ಬಹುತೇಕ ಚಿತ್ರೀಕರಣವಾಗಿದ್ದು, ರಮೇಶ್ ಭಟ್, ಹರೀಶ್ ರಾಯ್ ಸೇರಿದಂತೆ ಹೆಸರಾಂತ ತಾರಾಗಣ ಚಿತ್ರದಲ್ಲಿದೆ.

ಆಂಟನಿ ಬೆನ್ನತ್ತಿದ ವಿನಯ್



ರಾಘವೇಂದ್ರ ರಾಜ್‌ಕುಮಾರ್ ಪುತ್ರ ವಿನಯ್ ಈಗಾಗಲೇ 'ಸಿದ್ಧಾರ್ಥ' ಸಿನಿಮಾದ ಮೂಲಕ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಟ್ಟ ವಿಷಯ ಗೊತ್ತೇ ಇದೆ. ಆನಂತರ ಇವರು ಪ್ರೇಮ್ ನಿರ್ದೇಶನದ ಚಿತ್ರದಲ್ಲಿ ನಟಿಸಲಿದ್ದಾರೆ ಎಂಬ ಸುದ್ದಿ ಆಗಿತ್ತು. ಆ ಚಿತ್ರ ಈಗ ಡ್ರಾಪ್ ಆಗಿದೆ. ವಿನಯ್ ಅವರ ಎರಡನೇ ಸಿನಿಮಾವನ್ನು ರಘು ಶಾಸ್ತ್ರಿ ಅನ್ನುವವರು ನಿರ್ದೇಶನ ಮಾಡುತ್ತಿದ್ದಾರೆ. ನಿರ್ದೇಶಕರ ಚೊಚ್ಚಲು ಸಿನಿಮಾ ಇದು.

ವಿನಯ್‌ಗಾಗಿ ಪ್ರೇಮ್ ಕತೆಯೊಂದನ್ನು ಹೊಸೆದಿದ್ದರು. ಅದಕ್ಕೆ 'ರಾ ಕಿಂಗ್' ಎಂದೆಲ್ಲ ಹೆಸರಿಟ್ಟಿದ್ದರು. ಈ ಕತೆಯು ರಾಘವೇಂದ್ರ ರಾಜ್‌ಕುಮಾರ್‌ಗೆ ಇಷ್ಟವಾಗದ ಕಾರಣ, ಈ ಚಿತ್ರವನ್ನು ಕೈಬಿಟ್ಟು, ಹೊಸ ಹುಡುಗನಿಗೆ ಅವಕಾಶ ಕೊಟ್ಟಿದ್ದಾರೆ.

ಅನುರಾಗ್ ಕಶ್ಯಪ್ ಗರಡಿಯಲ್ಲಿ ಪಳಗಿರುವ ರಘು ಶಾಸ್ತ್ರಿ ಹೊಸ ರೀತಿಯ ಕತೆಯನ್ನು ಬರೆದಿದ್ದಾರೆ. ಅಲ್ಲದೇ ಚಿತ್ರಕ್ಕೆ 'ರನ್ ಆಂಟನಿ' ಎಂಬ ಹೆಸರಿಟ್ಟಿದ್ದಾರೆ. ಹೀಗಾಗಿಯೇ ತಮ್ಮದೇ ಬ್ಯಾನರ್‌ನಲ್ಲಿ ಚಿತ್ರವನ್ನು ನಿರ್ಮಾಣ ಮಾಡುತ್ತಿರುವುದಾಗಿ ರಾಘವೇಂದ್ರ ರಾಜ್‌ಕುಮಾರ್ ಹೇಳಿದ್ದಾರೆ.

ವಿನಯ್ ಅವರ ಚೊಚ್ಚಲು ಸಿನಿಮಾ ಅಂದುಕೊಂಡಷ್ಟು ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲಲಿಲ್ಲ, ವಿನಯ್ ಕೂಡ ಸ್ಯಾಂಡಲ್‌ವುಡ್ ಪ್ರೇಕ್ಷಕರನ್ನು ಮೆಚ್ಚಿಸಲಿಲ್ಲ, ಈಗ ಬಾಂಬೆಯಲ್ಲಿ ತರಬೇತಿ ಪಡೆದುಕೊಂಡಿರುವ ವಿನಯ್, ವಿಭಿನ್ನ ಪಾತ್ರದೊಂದಿಗೆ ಮತ್ತೊಂದು ಸಾರಿ ಪ್ರೇಕ್ಷಕರೊಂದಿಗೆ ಮುಖಾಮುಖಿ ಆಗುತ್ತಿದ್ದಾರೆ. ಮಣಿಕಾಂತ್ ಕದ್ರಿ ಸಂಗೀತ ನಿರ್ದೇಶನದಲ್ಲಿ ಹಾಡುಗಳು ಮೂಡಿಬರಲಿದ್ದು, ಉಳಿದಂತೆ ತಾರಾಗಣದ ಆಯ್ಕೆ ನಡೆಯುತ್ತಿದೆ.

ದಿಲ್ ಕಾ ರಾಣಿ

ರಮ್ಯಾ ನಟನೆಯ 'ದಿಲ್ ಕಾ ರಾಜಾ' ಚಿತ್ರಕ್ಕೆ ಮರುಜೀವ ಬಂದಿದೆ. ಈ ಸಿನಿಮಾದ ಶೂಟಿಂಗ್ ಅನ್ನು ಮುಗಿಸಿಕೊಡುವುದಾಗಿ ರಮ್ಯಾ ಹೇಳಿದ್ದಾರೆ. ಹೀಗಾಗಿ ಶೂಟಿಂಗ್ ಮಾಡಲು ನಿರ್ದೇಶಕರು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ರಮ್ಯಾ ರಾಜಕೀಯ ರಂಗ ಪ್ರವೇಶಿಸಿದರು ಅನ್ನುವ ಕಾರಣಕ್ಕೆ ಈ ಸಿನಿಮಾದ ಶೂಟಿಂಗ್ ನಿಂತಿತ್ತು, ಮುಕ್ಕಾಲು ಭಾಗ ಶೂಟಿಂಗ್ ಆದಕಾರಣ, ಅನಿವಾರ್ಯವಾಗಿ ರಮ್ಯಾಗಾಗಿ ನಿರ್ದೇಶಕರು ಕಾಯಲೇಬೇಕಾಗಿತ್ತು, ಎರಡು ವರ್ಷದ ಕಾಯುವಿಕೆ ಕೊನೆಗೂ ಕೈಹಿಡಿದಿದೆ. ಈ ಚಿತ್ರಕ್ಕೆ ಪ್ರಜ್ವಲ್ ದೇವರಾಜ್ ನಾಯಕ. ಇದೇ ಮೊದಲ ಬಾರಿಗೆ ಈ ಕಾಂಬಿನೇಷನ್‌ನಲ್ಲಿ ಚಿತ್ರ ಮೂಡಿಬರುತ್ತಿದೆ. ಹೀಗಾಗಿ ಸಿನಿಮಾದ ಬಗ್ಗೆ ಸಹಜವಾಗಿಯೇ ಕುತೂಹಲವಿದೆ. 'ದಿಲ್ ಕಾ ರಾಜಾ' ಮತ್ತು 'ನೀರ್‌ದೋಸೆ' ಸಿನಿಮಾಗಳಿಗೆ ಏಕಕಾಲಕ್ಕೆ ಸಹಿ ಮಾಡಿದ್ದರು ರಮ್ಯಾ. 'ನೀರ್‌ದೋಸೆ' ತಂಡದ ಜತೆ ವಿವಾದ ಮಾಡಿಕೊಂಡಿದ್ದರಿಂದ, ಆ ಚಿತ್ರಕ್ಕೆ ಮತ್ತೆ ಕಾಲ್‌ಶೀಟ್ ಕೊಡಲಿಲ್ಲ, ಈಗ ಪ್ರಜ್ವಲ್ ಜತೆಗಿನ ಚಿತ್ರಕ್ಕೆ ಅಸ್ತು ಅಂದಿದ್ದಾರೆ.

ಬಿಗ್‌ಬಾಸ್ ಮನೆಯಲ್ಲಿ ರವಿಚಂ

ರಿಯಾಲಿಟಿ ಷೋ ಬಿಗ್‌ಬಾಸ್ ಮನೆಯಿಂದ ಹುಚ್ಚ ವೆಂಕಟ್ ಬಂದಾಯಿತು. ಆ ಸೆರೆಮನೆಯಲ್ಲಿ ವೆಂಕಟ್ ಸ್ಥಾನವನ್ನು ತುಂಬ ಯಾರು ಎಂಬ ಚರ್ಚೆ ಈಗ ಜೋರಾಗಿದೆ. ಈಗಾಗಲೇ ಕಲರ್ಸ್ ವಾ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವ ರವಿಚಂದ್ರನ್, ಬಿಗ್‌ಬಾಸ್ ಪ್ರವೇಶ ಮಾಡಲಿದ್ದಾರೆ ಎಂಬ ಸುದ್ದಿಯೂ ಇದೆ. ದುಡ್ಡು ಕೊಟ್ಟ ಬೇಕಾದರೂ ಮಾಡೋಕೆ ರೆಡಿ ಎಂದು ಸ್ವತಃ ರವಿಚಂದ್ರನ್ ಹೇಳಿದ್ದರಿಂದ, ಆ ಸಾಧ್ಯತೆಯೂ ಇದೆ ಎನ್ನಲಾಗುತ್ತಿದೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತಾಗಿ ಜೋಕ್ಸ್ ಹರಿದಾಡುತ್ತಿವೆ. ಹುಚ್ಚ ವೆಂಕಟ್ ಸ್ಥಾನವನ್ನು ರವಿಚಂದ್ರನ್ ತುಂಬುವುದಾದರೆ, ರವಿಚಂದ್ರನ್ ಅವರನ್ನು ನಾವು ಏನೆಂದು ಕರೆಯಬೇಕು? ಎಂಬ ಪ್ರಶ್ನೆಯನ್ನು ಹಲವರು ಹಾಕಿದ್ದಾರೆ.

ಈ ಕುರಿತು ರವಿಚಂದ್ರನ್ ಏನೂ ಹೇಳಿಲ್ಲ, ಕಾರ್ಯಕ್ರಮದ ಆಯೋಜಕರೂ ಮಾಹಿತಿಯನ್ನು ಸೋರಿಕೆ ಮಾಡಿಲ್ಲ. ಆದರೆ, ರವಿಚಂದ್ರನ್ ಹೆಸರಂತೂ ಜೋರಾಗಿ ಓಡಾಡುತ್ತಿದೆ. ಬಿಗ್‌ಬಾಸ್ ಶುರುವಿನಲ್ಲೇ ರವಿಚಂದ್ರನ್ ಹೆಸರು ಓಡಾಡುತ್ತಿತ್ತು, ಎರಡು ಕೋಟಿಗೆ ಇವರು ಒಪ್ಪಿಕೊಂಡಿದ್ದಾರೆ ಎಂದೂ ಹೇಳಲಾಗಿತ್ತು, ವೆಂಕಟ್ ಪ್ರವೇಶದಿಂದಾಗಿ ರವಿಚಂದ್ರನ್ ಹಿಂದಕ್ಕೆ ಸರಿದಿದ್ದರು. ಈಗ ವೆಂಕಟ್ ಇಲ್ಲದ ಬಿಗ್‌ಬಾಸ್ ಮನೆಗೆ ರವಿಚಂದ್ರನ್‌ರ ಪ್ರವೇಶ ಆಗಲಿದೆ ಎನ್ನಲಾಗುತ್ತಿದೆ. ಇನ್ನೊಂದು ವಾರದಲ್ಲಿ ಈ ಕುರಿತು ಸ್ಪಷ್ಟನೆ ಸಿಗಲಿದೆ.





PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427.
Fax : 26604536, E-mail :lankesh70@rediffmail.com